ಯುವಶಕ್ತಿಯ ವಿಕಸನಕ್ಕೆ ಆಕರ್ಷಕ ಯೋಜನೆಗಳು

ಅಂತರರಾಷ್ಟ್ರೀಯ ಯುವಜನ ವರ್ಷವು ಕರ್ನಾಟಕದಲ್ಲಿ ಬಹಳ ಸಂಭ್ರಮದಿಂದ ಆರಂಭವಾಯಿತು. ಇದರ ಅಂಗವಾಗಿ ಜನವರಿ ೧ ರಿಂದ ೬ನೇ ತಾರೀಖಿನವರೆಗೆ ಬೆಂಗಳೂರಿನ ಸಮೀಪದ ವಿದ್ಯಾನಗರದಲ್ಲಿ ಒಂದು ರಾಷ್ಟ್ರೀಯ ಯುವಜನ ಶಿಬಿರವನ್ನು ಏರ್ಪಡಿಸಿದ್ದು, ಭಾರತದಾದ್ಯಂತ ಬಂದಿದ್ದ ೧೬೦೦ ಕ್ಕೂ ಹೆಚ್ಚು ಯುವಜನರು ಆ ತರಬೇತಿ ಶಿಬಿರದಲ್ಲಿ ಭಾಗವಹಿಸಿದ್ದರು. ಇದರ ಹಿಂದೆಯೇ ಅಂತರರಾಷ್ಟ್ರೀಯ ವಿದ್ಯಾರ್ಥಿ ಶಿಬಿರ. ಇದರಲ್ಲಿ ಭಾಗವಹಿಸಿದ್ದ ೯೫ ವಿದ್ಯಾರ್ಥಿಗಳಲ್ಲಿ ೨೪ ಜನ ಕರ್ನಾಟಕದ ವಿದ್ಯಾರ್ಥಿಗಳು.

ಈ ಬಹೂಪಯೋಗಿ ಶಿಬಿರದ ಕಾರ್ಯಕ್ರಮಗಳು ಜೇಸೀಸ ಸಂಸ್ಥೆಯ ಸಹಭಾಗಿತ್ವದೊಡನೆ ಏರ್ಪಡಿಸಲಾದ 'ಒಂದು ದಿನದ ಕಾರ್ಯಾಗಾರ'ಗಳಿಂದ ಮುಂದುವರೆದು, ಗ್ರಾಮೀಣ ಯುವಜನರಿಗೆ ಕೈಗಾರಿಕೆಗಳು, ಶಿಕ್ಷಣ, ಆರ್ಥಿಕ ನೆರವಿನ ಯೋಜನೆಗಳು ಮುಂತಾದ ಅನುಕೂಲತೆಗಳ ಬಗ್ಗೆ ಸೂಕ್ತ ತಿಳುವಳಿಕೆ ನೀಡುತ್ತದೆ. ಅಲ್ಲದೆ ಯುವಜನರಿಗೆ ಬೇಕಾದ ಕರ್ತೃತ್ವ ಶಕ್ತಿ ಹಾಗೂ ಮುಂದಾಳತ್ವದ ಬಗ್ಗೆ ಮನದಟ್ಟು ಮಾಡಿಕೊಡುತ್ತವೆ.

ಯುವಜನ ವಿನಿಮಯ ಕಾರ್ಯಕ್ರಮವಾಗಿ ಒಂದು ಸಮಗ್ರ ಶಿಬಿರವನ್ನೂ ಯೋಜಿಸಲಾಗಿದೆ;

ಈ ವರ್ಷದ ಪ್ರಾರಂಭದಿಂದ ಗ್ರಾಮೀಣ ಯುವಜನ ಕೇಂದ್ರಗಳನ್ನು ಯೋಜಿಸಲಾಗಿದ್ದು ಕೇಂದ್ರಗಳು ಗ್ರಾಮೀಣ ಯುವಜನರು ಒಂದೆಡೆ ಸೇರಿ, ತಮ್ಮ ತಮ್ಮ ಆಲೋಚನೆಗಳನ್ನು ವಿಚಾರಗಳನ್ನು ವಿನಿಮಯ ಮಾಡಿಕೊಂಡು ತನ್ಮೂಲಕ ಉಳಿದ ಗ್ರಾಮೀಣ ಯುವಕರಿಗೆ ಪ್ರೇರಕ ಶಕ್ತಿಯಾಗಿ ರೂಪುಗೊಳ್ಳಲಿವೆ.

ಈ ಎಲ್ಲಾ ಕಾರ್ಯಕ್ರಮಗಳ ಜೊತೆ ಜೊತೆಗೇ ಈ ಕೆಳಕಂಡ ನೂತನ ಚಟುವಟಿಕೆಗಳು ಭಾರತದ ಹಾಗೂ ಕರ್ನಾಟಕದ ಯುದಜನರಿಗೆ ಬಹಳಷ್ಟು ಲಾಭದಾಯಕವಾಗಿರುತ್ತವೆ.

- ವಿದ್ಯಾನಗರದಲ್ಲಿನ ಜೆ. ಪಿ. ನಾರಾಯಣ್ ರಾಷ್ಟ್ರೀಯ ಯುವಜನ ಕೇಂದ್ರವು ವರ್ಷಂಪ್ರತಿ ೪೦೦೦ ಕ್ಕೂ ಹೆಚ್ಚಿನ ಯುವಜನಗನ್ನು ವಿವಿಧ ಶಿಕ್ಷಣಕ್ರಮಗಳಲ್ಲಿ ತರಬೇತಿಗೊಳಿಸುತ್ತದೆ. ಕುಂಬಳಗೋಡಿನಲ್ಲಿರುವ ಮಹಿಳಾ ತರಬೇತಿ

ಕೇಂದ್ರವು ಜೀವನವನ್ನು ಸುವ್ಯವಸ್ಥಿತವಾಗಿ ಎದುರಿಸಲು ಬೇಕಾದ ತರಬೇತಿಯನ್ನು ಮಹಿಳೆಯರಿಗೆ ನೀಡುತ್ತವೆ,

- ಮುಂದಾಳತ್ವ ತರಬೇತಿ ಕಾರ್ಯಕ್ರಮಗಳು, ಯುವಜನ ಶಿಬಿರಗಳು ಹಾಗೂ ರ‍್ಯಾಲಿಗಳು.

ರಾಜ್ಯ ಸರ್ಕಾರವು ಕ್ರೀಡೆಗಳಿಗೆ ವಿಶೇಷ ಪ್ರಾಮುಖ್ಯತೆಯನ್ನು ನೀಡುತ್ತದೆ. ಕಾರಣ, ಕ್ರೀಡೆಗಳಿಂದ ಆರೋಗ್ಯಕರ, ಶಿಸ್ತಿನ ರಾಷ್ಟ್ರದ, ನಿರ್ಮಾಣ ಸಾಧ್ಯವಾಗುತ್ತದೆ. ಇವುಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳಲು ಯುವಜನರಿಗೆ ಅನೇಕ ಸೌಲಭ್ಯಗಳನ್ನು ನೀಡಲಾಗಿದೆ. ಅವುಗಳೆಂದರೆ—

- ಕ್ರೀಡಾ ಸಂಸ್ಥೆಗಳಿಗೆ ಆರ್ಥಿಕ ಸಹಾಯ.
- ಬಾಲ್ಯದಲ್ಲೇ ಗುರುತಿಸಿ—ಬಾಲಕ, ಬಾಲಕಿಯರಿಗಾಗಿ ಒಂದು ಯೋಜನೆ.
- ಕೊಡಗು ಜಿಲ್ಲೆಯ ಕೂಡಿಗೆಯಲ್ಲಿ ಒಂದು ಕ್ರೀಡಾ ಶಾಲೆ
- ಪ್ರತಿಭಾವಂತ ಕ್ರೀಡಾಪಟುಗಳಿಗೆ ಆರ್ಥಿಕ ಸಹಾಯ ನಗದು ಬಹುಮಾನ ಮತ್ತು ವಿದ್ಯಾರ್ಥಿ ವೇತನಗಳು.
- ಗ್ರಾಮೀಣ ಕ್ರೀಡಾ ಕೇಂದ್ರಗಳು.
- ಕ್ರೀಡೆಗಳಲ್ಲಿ ಉತ್ತಮ ಪ್ರತಿಭೆ ತೋರುವ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ವೈದ್ಯಕೀಯ ಎಂಜನಿಯರಿಂಗ್ ಮತ್ತು ತಾಂತ್ರಿಕ ಶಿಕ್ಷಣ ಶಾಲೆಗಳ ಪ್ರವೇಶಾವಕಾಶಗಳಲ್ಲಿ ಆದ್ಯತೆ.
- ಛಾಂಪಿಯನ್‌ಶಿಪ್ ಕ್ರೀಡಾವಳಿಗಳು, ಕ್ರೀಡೋತ್ಸವಗಳು ಹಾಗೂ ಸಾಮೂಹಿಕ ಕ್ರೀಡೆಗಳು.
- ಕೋಚಿಂಗ್ ಶಿಬಿರಗಳು ಮತ್ತು ತರಬೇತಿ ಕೇಂದ್ರಗಳು.

ಕರ್ನಾಟಕ ವಾರ್ತೆ

ಅಂತರರಾಷ್ಟ್ರೀಯ ಯುವಜನ ವರ್ಷ

ಡಿಶೆಂಬರ ೧೯೮೫

ಶುಭಾಶಯಗಳೊಂದಿಗೆ--

ಬೆಲ್ಲದ ಆ್ಯಂಡ ಕಂಪನಿ

ಹುಬ್ಬಳ್ಳಿ-೫೮೦ ೦೨೦ ಧಾರವಾಡ-೫೮೦ ೦೦೦

ಸಂಕ್ರಮಣ

ಸಾಹಿತ್ಯಾಂಕ: ೧೬೭-೧೬೮

(ಡಿಸೆಂಬರ ೮೫ — ಜನವರಿ ೮೬)

ಸಂಪಾದಕ

ಚಂದ್ರಶೇಖರ ಪಾಟೀಲ

ಸಂಕ್ರಮಣ ಪ್ರಕಾಶನ ಧಾರವಾಡ-೫೮೦ ೦೦೮

SANKRAMANA : A Literary Magazine in Kannada
December-85 January 86 Voi-XXI, Nos. 7-8
Editor : Chandrashekhar Patil
Sankramana Prakashana, Dharwad 580 008 (Phone : 80509)
Printed at Rajashri Printing Press, Dharwad-1

ಈ ಸಂಚಿಕೆ : ರೂ. ೬ ವಾರ್ಷಿಕ ಚಂದಾ : ರೂ. ೩೦

ಒಳಗಿನ ಪುಟಗಳಲ್ಲಿ

ಇಯುನೆಸ್ಕೋವಿನ ಅಸಂಗತ ನಾಟಕಗಳು	ಶಕುಂತಲಾ ಕುಂದೂರ	೫
ಕೆರೂರ 'ಮಲ್ಲೇಶಿಯು ನಲ್ಲೆಯರು'	ಕೇಶವ ಶರ್ಮ ಕೆ.	೧೭
ಸೆರೆಮನೆ ಕವನಗೋಷ್ಠಿ–೧೪ ಕವನಗಳು		೩೧
ಕನ್ನಡದಲ್ಲಿ ಆರವೆಲ್ಲನ '೧೯೮೪'	ಡಾ। ಶಂ. ಮೊಕಾಶಿ–ಪುಣೇಕರ	೫೧
ನಾಗವಾರರ 'ಕರಾವಳಿಯಲ್ಲಿ ಗಂಗಾಲಗ್ನ'	ಕೇಶವಶರ್ಮ ಕೆ.	೫೫
ದಲಿತ ಸಂವೇದನೆ : ದಾಕ್ಷಿಣಾತ್ಯ ಸಾಹಿತ್ಯದಲ್ಲಿ	ಬಿ. ಸದಾಶಿವ	೬೭
ಭಗವದ್ಗೀತೆ (ಕವನ)	ನಂದಾ	೭೬
ವಚನ ಚಳವಳಿ–ಒಂದು ಒಳನೋಟ	ಡಾ। ಬಸವರಾಜ ಸಬರದ	೭೭

ಪ್ರಿಯ ಓದುಗರೇ

ಸಂಕ್ರಮಣ ವಾರಪತ್ರಿಕೆಯ ಸಾಹಸವನ್ನು ನಮ್ಮ ಪ್ರಕಾಶನ ಹಮ್ಮಿಕೊಂಡಂದಿನಿಂದ ಈ ಸಾಹಿತ್ಯ ಸಂಕಲನ ನಿಮ್ಮ ಕೈಗೆ ಸೇರುವುದು ತಡವಾಗುತ್ತಿದೆ. ಅದಕ್ಕಾಗಿ ನಿಮ್ಮ ಕ್ಷಮೆ ಇರಲಿ.

ತುಂಬ ಅವಸರದಲ್ಲಿ ಹೊರಬಂದ ಈ ಸಂಚಿಕೆಯಲ್ಲಿ ಅನೇಕ ಲೋಪದೋಷಗಳಿವೆ. ಒಬ್ಬರೇ ಲೇಖಕರ ಎರಡು ಲೇಖನಗಳಿವೆ. ಬರೆದವರ ವಿಳಾಸಗಳನ್ನು ಕೊಡುವುದಾಗಿಲ್ಲ. 'ಅಸಂಗತ ನಾಟಕ' ಕುರಿತ ಲೇಖನ ಮೂಲ ಇಂಗ್ಲಿಷಿನಲ್ಲಿದ್ದದ್ದನ್ನು ಬರೆದವರೇ ಕನ್ನಡಕ್ಕೆ ಅನುವಾದ ಮಾಡಬೇಕಾದ ಪ್ರಸಂಗ ಬಂದಿದ್ದರಿಂದ, ಈ ಭಾಷೆಯಲ್ಲಿ, ಅದರ ಮೂಲಕ ವಿಚಾರ ಮಂಡನೆಯಲ್ಲಿ ಅನೇಕ ಕಂದಕಗಳುಂಟಾಗಿವೆ.... ಇತ್ಯಾದಿ. ಈ ಸಾಹಿತ್ಯ ಸಂಕಲನ ಬರಲಿರುವ ಸಂಚಿಕೆಯಿಂದ ಇದರ ಸ್ವರೂಪವೇ ಬದಲಾಗಲಿದೆ. ಮುಖ್ಯವಾಗಿ ಸಾಹಿತ್ಯಿಕ, ಸಾಂಸ್ಕೃತಿಕ ಆಯಾಮಗಳ ಬಗ್ಗೆ, ಪ್ರೌಢ ಪ್ರಬುಧಗಳು, ಅವುಗಳ ಬಗ್ಗೆ ಚರ್ಚೆ, ಕನ್ನಡ ಪುಸ್ತಕಗಳ ನಿಯಮಿತ ವಿಮರ್ಶೆ, ಕೆಲವು ದೀರ್ಘ ಎನ್ನಬಹುದಾದ ಕವನಗಳು, ಆಗೀಗ ನಾಟಕಗಳು ಇವೆಲ್ಲ ಸಾಹಿತ್ಯ ಸಂಕಲನದ ಹೂರಣವಾಗಲಿವೆ.

ಎಂದಿನಂತೆ ನಿಮ್ಮ ಸಹಕಾರ ವಿರಲಿ.

—**ಸಂಪಾದಕ**

ಶಕುಂತಲಾ ಕುಂದೂರ

ಇಯೊನೆಸ್ಕೋವಿನ ಅಸಂಗತ ನಾಟಕಗಳು

ಒಂದು ಒಳ್ಳೆಯ ನಾಟಕವೆಂದರೆ, ಅದರಲ್ಲಿ ಒಳ್ಳೆಯ ವಿಷಯ, ಸರಿಯಾಗಿ ರಚಿಸಿದ ಕತೆ, ಒಳ್ಳೆಯ ಪಾತ್ರಗಳು ಮತ್ತು ನಾಟಕದ ಅಂತ್ಯ ಅತ್ಯುತ್ತಮವಾಗಿರಬೇಕು. ಆದರೆ, ಅಸಂಗತ ನಾಟಕಗಳಲ್ಲಿ ಗುರುತಿಸುವಂತಹ ಪಾತ್ರಗಳಾಗಲಿ, ಒಂದು ಆಧಾರವಾಗಲಿ, ಕತೆಯಾಗಲಿ ಇರುವುದಿಲ್ಲ. ಇದನ್ನು ಪ್ರೇಕ್ಷಕರಿಗೆ ಒಂದು ಗೊಂಬೆಯಾಟದ ಹಾಗೆ ತೋರಿಸುತ್ತಾರೆ. ಈ ನಾಟಕಗಳಿಗೆ ಆರಂಭವಾಗಲಿ, ಕೊನೆಯಾಗಲಿ ಇರುವುದಿಲ್ಲ. ಇವೆಲ್ಲಾ ಕನಸು ಮತ್ತು ಕನಸಿನ ಪಿಶಾಚಿಗಳ ಪ್ರತಿ ಫಲನ. ನೇರವಾದ ಸಂಭಾಷಣೆಗಿಂತ, ಅಸಂಬದ್ಧವಾದ ಹರಟೆಗಳೇ ಹೆಚ್ಚು. ವೈಚಾರಿಕತೆಯ ಬದಲು ಅಸಂಬದ್ಧವಾದ (irrational) ಅನುಭವಗಳನ್ನು ರಂಗಸ್ಥಳದಲ್ಲಿ ತೋರಿಸುತ್ತಾರೆ. ನಾಟಕದ ಉದ್ದೇಶವು ಪಾತ್ರಗಳಲ್ಲಿ ಅಡಗಿರುತ್ತದೆ. ಆದರೆ ಅವರ ನಟನೆಯು ಅರ್ಥವಾಗುವುದು ಕಷ್ಟದ್ದಾಗಿರುತ್ತದೆ.

ಅಸಂಗತ ನಾಟಕವೆಂದರೇನು ? ಅದರ ಅರ್ಥವೇನು ? ಸಂಗೀತದ ದೃಷ್ಟಿಯಲ್ಲಿ ಅಸಂಗತವೆಂದರೆ, ಸುಸಾಂಗತ್ಯವಿಲ್ಲದೆ ಇರುವುದು (out of harmony). ನಿಘಂಟುವಿನಲ್ಲಿ ಅಬಸರ್ಡ್ ಎನ್ನುವ ಪದಕ್ಕೆ ಅಸಂಬದ್ಧ, ಅಸಂಗತ, ಅವಿವೇಕ, ಹಾಸ್ಯಾಸ್ಪದ ಇವೇ ಮೊದಲಾದ ಅರ್ಥಗಳಿವೆ. ಅಸಂಗತ ನಾಟಕಗಳು ಸಾಹಿತ್ಯದ ಒಂದು ಚಳುವಳಿ. ಇದರ ವಿಷಯ ಮತ್ತು ವಸ್ತುಗಳು ಬರಹಗಾರನ ಮೂಲ, ಜನ್ಮಸ್ಥಾನ, ಮತ್ತು ಅವನ ಹಿನ್ನೆಲೆಯಿಂದ ಆಯ್ದ ವಸ್ತುವಾಗಿರುತ್ತದೆ. "ಅಸಂಗತ ನಾಟಕಕಾರರು" ಎಂಬ ಶಬ್ದವು ಒಂದು ಗುಂಪಿನ ಬರಹಗಾರರಿಗಷ್ಟೇ ಅನ್ವಯಿಸುತ್ತದೆ. ಭೂಮಿಯ ಮೇಲಿರುವ ಮನುಷ್ಯನ ಸುಖ ದುಃಖಗಳ ಬಗ್ಗೆ ಶೋಧನೆ ಮಾಡುವುದೇ ಇವರ ಗುರಿ. ಇದು ಕೆಲವು ನಾಟಕಗಳಲ್ಲಿ, ಪದ್ಯಗಳಲ್ಲಿ, ವರ್ಣ ಚಿತ್ರಗಳಲ್ಲಿ ಕಂಡು ಬಂದಿದೆ.

ಅಸಂಗತ ಬರೆಹಗಾರರು ಯಾರು? ಸಾಮ್ಯುಯೆಲ್ ಬೆಕೆಟ್, ಆರ್ಥರ್ ಅಡಮೋವ್, ಯೊಜಿನ್ ಇಯೊನೆಸ್ಕೊ, ಜಾನ್ ಜೆನೆಟ್ ಮೊದಲಾದವರು. ಕೆಲವೊಂದು ಬರಹ ಗಾರರಾದ ಗಿರಾಡೋ, ಆನೂಯಿ, ಸಾರ್ತ್ರ ಮತ್ತು ಕ್ಯಾಮು ಇವರುಗಳೂ ಸಹ ಅಸಂಗತ ಬರಹಗಾರರೇ. ಈ ಬರಹಗಾರರು ಮನುಷ್ಯನ ಅಸಂಬದ್ಧ ಪರಿಸ್ಥಿತಿ ಯನ್ನು ತರ್ಕಬದ್ಧವಾಗಿ ವಿವರಿಸುತ್ತಾರೆ.

ಅಸಂಗತ ನಾಟಕಕಾರರು ಸಮರ್ಥವಾದ ವಿಷಯಗಳನ್ನು ಮುಚ್ಚುಮರೆ ಯಿಲ್ಲದೆ ಬಹಿರಂಗಗೊಳಿಸಿದ್ದಾರೆ. ಅಸಂಗತ ನಾಟಕಗಳು, ಮನುಷ್ಯನ ಅಸಂಬದ್ಧ ಪರಿಸ್ಥಿತಿಯನ್ನು ರಂಗದ ಮೇಲೆ ವಾಸ್ತವಿಕವಾಗಿ ತೋರಿಸುತ್ತವೆ. ಭಾಷೆಗೆ ಪ್ರಮುಖ ಪಾತ್ರವಿದೆ ಭಾಷೆಯ ಮಟ್ಟ ಕೆಳಗಿರುತ್ತದೆ. ರಂಗದ ಮೇಲೆ ಆಗು ಹೋಗುಗಳಿಗೆ ಮತ್ತು ಸಂಭಾಷಣೆಗಳಿಗೆ ಒಂದಕ್ಕೊಂದು ಸಂಬಂಧವಿರುವುದಿಲ್ಲ. ಇದನ್ನು ಅಸಾಹಿತ್ಯ ಚಳುವಳಿ ಎನ್ನಬಹುದು. (Antiliterary movement)

ಯೂಜೆನ್ ಇಯೊನೆಸ್ಕೊ, ಅಸಂಗತ ನಾಟಕಗಳನ್ನು ಈ ರೀತಿ ವಿವರಿಸುತ್ತಾನೆ : "ಅಸಂಗತವೆಂದರೆ. ಉದ್ದೇಶರಹಿತವಾದುದು......ಧರ್ಮ, ಅಧ್ಯಾತ್ಮಿಕ ಮೂಲ ಗಳಿಂದ ದೂರವಿರುವುದು, ಮನುಷ್ಯನ ಎಲ್ಲಾ ಚರ್ಯೆಗಳು ಅಸ್ಪಷ್ಟವಾಗಿರುತ್ತವೆ ಮತ್ತು ಆದರ್ಶಗಳನ್ನು ಅಪಮೌಲ್ಯಗೊಳಿಸುತ್ತವೆ." ಇಯೊನೆಸ್ಕೋನಿಗೆ ಪದಗಳಲ್ಲಿ ಅರ್ಥವಿಲ್ಲ. ಅಸಂಗತ ನಾಟಕಕಾರರು ಒಂದು ನೀತಿಯ ಸಂದೇಶವನ್ನು ಕೊಡುವು ದಿಲ್ಲ. ಅವರಿಗೆ ಮನುಷ್ಯನು ಸಮಾಜಕ್ಕಿಂತ ಹೆಚ್ಚು. ಯಾವ ಸಮಾಜವೂ ಮನುಷ್ಯನ ದುಃಖವನ್ನು ಅಳಿಸಲಾಗುವುದಿಲ್ಲ. ಯಾವ ರಾಜಕೀಯವೂ ಜೀವನ ವನ್ನು ಕಷ್ಟಗಳಿಂದ ಮತ್ತು ಸಾವಿನಿಂದ ದೂರವಿಡಲಾಗುವುದಿಲ್ಲ. ಮನುಷ್ಯನ ಪರಿಸ್ಥಿತಿಯು ಸಾಮಾಜಿಕ ಪರಿಸ್ಥಿತಿಗೆ ಸಲ್ಲುತ್ತದೆ. ಆದರೆ ಸಾಮಾಜಿಕ ಪರಿಸ್ಥಿತಿಯು ಮನುಷ್ಯನ ಪರಿಸ್ಥಿತಿಗೆ ಸಲ್ಲುವುದಿಲ್ಲ. ಇದಕ್ಕೋಸ್ಕರ ಸಾಮಾಜಿಕ ಭಾಷೆಯನ್ನು ಯಥಾವತ್ತಾಗಿ ಬಳಸುವುದು ಅಗತ್ಯ. ಈ ನಾಟಕಗಳು ವಿಡಂಬನೆ (Satire) ಮತ್ತು ಸಾಮಾಜಿಕ ವಿಮರ್ಶೆಗಳಿಂದ ಕೂಡಿರುತ್ತವೆ.

ಅಸಂಗತ ನಾಟಕಗಳು ಒಂದು ಹೊಸ ರೂಪದಲ್ಲಿವೆ. ಅವುಗಳನ್ನು ಶುದ್ಧ ನಾಟಕಗಳ (pure theatre) ಕೆಳಗೆ ವಿಭಾಗಿಸಿದೆ. ಅಸಂಗತ ದೃಶ್ಯದ ಪ್ರತಿಮೆಗಳಿರುತ್ತದೆ. ಅದರಲ್ಲಿ ಸರ್ಕಸ್ಸು, ತಂತ್ರಗಾರರು, ದೊಂಬರಾಟ, ಗೂಳಿ ಕಾಳಗ, ಅಣಕಗಳಿಂದ ಕೂಡಿದ ಅಭಿನಯವಿರುತ್ತದೆ. ಕೆಲವೊಂದು ಸಲ ಹಾಸ್ಯವು ವ್ಯಂಗ್ಯವಾಗಿ ಮಾರ್ಪ ಡುತ್ತದೆ. ಈ ಎಲ್ಲಾ ಅಂಶಗಳು ಅಸಂಗತ ನಾಟಕಗಳಲ್ಲಿ ಅತ್ಯಂತ ಮಹತ್ವ ದಾಗಿರುತ್ತದೆ. ಒಟ್ಟಿನಲ್ಲಿ ಉದ್ದೇಶ ಮತ್ತು ಚಲನೆಗಳಿಗೆ ಒಂದಕ್ಕೊಂದು ಸಂಬಂಧ

ವಿರುವುದಿಲ್ಲ. ಆ ಪಾತ್ರಗಳನ್ನು ಹಾಸ್ಯ ಪಾತ್ರಗಳಲ್ಲಿ ಅಳವಡಿಸಿರುತ್ತಾರೆ. ಹಾಸ್ಯ ಮತ್ತು ದುರಂತದ ವಸ್ತುಗಳನ್ನು ಹರ್ಷ ಮತ್ತು ಕ್ರೋಧದ ಶೈಲಿಯಲ್ಲಿ ವಿವರಿಸುತ್ತಾರೆ.

ಅಸಂಗತ ನಾಟಕಗಳು ೧೯೨೦ರಲ್ಲಿ ಇದ್ದ ಸೂರಿಯಲಿಸಮ್ (surrealism) ಮತ್ತು ಕ್ಯೂಬಿಸಮ್ (cubism)ಗಳನ್ನು ರೂಪಿಸುತ್ತವೆ. ದಾದಾಯಿಸಮ್ ಫ್ರೆಂಚ್, ಜರ್ಮನ್ ಮತ್ತು ಯುರೋಪಿಯನ್ನರ ನಡುವೆ ಯುದ್ಧವಾದ ಕಾಲದಲ್ಲಿ ಜ್ಯೂರಿಚ್‌ಸಲ್ಲಿ ಶುರುವಾಯಿತು. ದಾದ ಎಂದರೆ—ಆಟದ ಕುದುರೆ ಎಂದರ್ಥ. ಸಾಂಪ್ರದಾಯಿಕ ಸಾಹಿತ್ಯವನ್ನು ನಾಶಗೊಳಿಸುವುದೇ ಇದರ ಉದ್ದೇಶ. ಮಧ್ಯಮ ತರಗತಿಯ ಸಾಮಾನ್ಯ ಅಭಿಪ್ರಾಯವುಳ್ಳ ಮನುಷ್ಯನ ಸಾಂಪ್ರದಾಯಿಕ ಕಲೆಯನ್ನು ಭಗ್ನಗೊಳಿಸುವುದೇ ಇವರ ಉದ್ದೇಶ. ಈ ಚಳುವಳಿಯು ರಂಗದ ಮೇಲೆ ಸರಿಯಾಗಿ ಸಂಘಟಿತಗೊಳ್ಳಲಿಲ್ಲ-ಇದು ರಚನಾತ್ಮಕ ಸಾಹಿತ್ಯವಲ್ಲ. ಇದರಲ್ಲಿ ವಿರೋಧ, ಅಸಂಬದ್ಧ, ಸ್ಫೋಟದ ಪ್ರವೃತ್ತಿ ಇದೆ. ಇವೆಲ್ಲವೂ ಸಂಭಾಷಣೆಯಲ್ಲಿ ಅರ್ಥ ಹೀನ ಪದ್ಯಗಳು ಮತ್ತು ಬೇಕಾರಾದ ಮುಖವಾಡಗಳು ಮತ್ತು ಉಡುಪುಗಳಿಂದ ಕೂಡಿರುತ್ತವೆ. ದಾದಯಿಸಮ್‌ನ್ನು ನಾಶಗೊಳಿಸಬೇಕೆಂದರೂ ಸಹ, ಇದು ಸೂರಿಯಲಿಸಮ್ ಎಂಬ ಹೆಸರಿನ ಮೇಲೆ ಪುನಃ ಹುಟ್ಟಿತು. ಆಂಡ್ರೆ ಬ್ರೆಟೋನ್ ಎಂಬುವನು, ಸ್ಯೂರಿಯಲಿಸ್ಟ್‌ರ ಸಾರ್ವಜನಿಕ ಪ್ರಕಟನೆಯಲ್ಲಿ, ೧೯೨೦ ರಲ್ಲಿ, ಈ ರೀತಿ ವಿವರಿಸಿದ್ದಾನೆ. 'ಸೂರಿಯಲಿಸಮ್ ಒಂದು ಮಾನಸಿಕ, ಸ್ವಯಂಚಲನಶಕ್ತಿ. ಇದನ್ನು ಮಾತುಗಳಲ್ಲಾಗಲಿ, ಅಥವಾ ಬರಹದಲ್ಲಾಗಲಿ ಅಥವಾ ಯಾವುದೇ ವಿಧಾನದಲ್ಲಾಗಲಿ ತನ್ನ ಆಲೋಚನೆಯನ್ನು ನಿರೂಪಿಸುವುದಕ್ಕೆ ಸೂರಿಯಲಿಸಮ್ ಎಂದು ಕರೆಯುತ್ತಾರೆ.

ಅಸಂಗತವು ನಾಟಕಗಳಲ್ಲಷ್ಟೇ ಇರದೆ, ಕಥೆ ಕಾದಂಬರಿಗಳಲ್ಲೂ ಇದೆ. ಇದರ ಕೇಂದ್ರ ಪ್ಯಾರಿಸ್‌ನಲ್ಲಿದೆ. ಇದು ಫ್ರೆಂಚ್ ಬರಹಗಾರರಿಗಷ್ಟೇ ಸೀಮಿತವಾಗಿಲ್ಲ. ಯೂರೋಪಿನ ಎಲ್ಲಾ ದೇಶಗಳಲ್ಲಿ ಹಬ್ಬಿದೆ. ಫ್ರಾನ್ಸ್‌ನಲ್ಲಿದ್ದು, ಫ್ರೆಂಚ್ ಭಾಷೆಯಲ್ಲೇ ಬರೆದರೂ, ಅವರು ಫ್ರೆಂಚ್ ಜನಾಂಗದವರಲ್ಲ. ಯಾವ ಬರಹಗಾರನಿಗೆ ಬರೆಯಲು ಸ್ವಾತಂತ್ರ್ಯ ಬೇಕೆನಿಸುತ್ತದೋ, ಅವರಿಗೆಲ್ಲಾ ಪ್ಯಾರಿಸ್ ಆಕರ್ಷಿಸುತ್ತದೆ. ಪ್ಯಾರಿಸದಲ್ಲಿ ನಾಟಕದ ಅರಿವುಳ್ಳ ಜನರು ಬಹಳವಿದ್ದು, ಪ್ರೇಕ್ಷಕರು ಹೊಸ ಕಲ್ಪನೆಗಳನ್ನು ಬೇಗನೆ ಅರ್ಥ ಮಾಡಿಕೊಳುತ್ತಾರೆ. ಈ ಅಸಂಗತ ನಾಟಕಗಳಿಗೆ ಮೊದಲು ಪ್ರೇರಣೆ ಸಿಕ್ಕಿದ್ದಿಲ್ಲ. ಆದರೆ, ಕಾಲ ಉರುಳಿದ ಹಾಗೆ, ಇವನ್ನು ಅರ್ಥ ಮಾಡಿಕೊಂಡು, ಬರಹಗಾರರಿಗೆ ಪ್ರೋತ್ಸಾಹ ಕೊಟ್ಟರು. ಹಾಗಾಗಿ, ಈ ಅಸಂಗತ ನಾಟಕಗಳು ಪ್ರಚಾರಕ್ಕೆ ಬಂದವು.

ಇಯೊನೆಸ್ಕೊ, ಸಾಲ್ಟಿನ್ (ರುಮೇನಿಯ)ದಲ್ಲಿ, ೨೬ ನವೆಂಬರ್ ೧೯೧೩ರಲ್ಲಿ ಜನಿಸಿದನು. ಅವನ ತಾಯಿ ಫ್ರಾನ್ಸಿನವಳು ತಂದೆ ರುಮೇನಿಯ.ದವನು. ಅವನು ಹುಟ್ಟಿದ ಕೆಲವೇ ದಿನಗಳಲ್ಲಿ, ಅವನ ತಂದೆ ತಾಯಿಯರು ಫ್ರಾನ್ಸಿನಲ್ಲಿ ವಾಸಿಸಲು ತೆರಳಿದರು. ಆದುದರಿಂದ, ಅವನ ಮೊದಲಭಾಷೆ ಫ್ರೆಂಚ್. ೧೩ ವರ್ಷಗಳ ನಂತರ, ಅವರು ರುಮೇನಿಯಾಗೆ ಹಿಂತಿರುಗಿದಮೇಲೆ, ಇಯೊನೆಸ್ಕೊ ರುಮೇನಿಯಾ ಭಾಷೆಯನ್ನು ಕಲಿಯಬೇಕಾಯಿತು.

ಪ್ಯಾರಿಸ್ ಶಾಲೆಯಲ್ಲಿ ಕೆಲವೊಂದು ವರ್ಷಗಳ ಕಾಲ ಅಭ್ಯಾಸ ಮಾಡಿದ ನಂತರ ರಕ್ತಹೀನತೆಯಾದುದರಿಂದ ಅವನನ್ನು ಗ್ರಾಮಾಂತರ ಪ್ರದೇಶಕ್ಕೆ ಕಳುಹಿಸಲಾಯಿತು. ಅಲ್ಲಿ ಧರ್ಮನಿಷ್ಠ ಪುಸ್ತಕಗಳನ್ನು ಓದಿ, ಅತಿಶಯ ಕೀರ್ತಿ ಸಲುವಾಗಿ ಬಡಿದಾಡಬಾರದೆಂದು ತಿಳಿದನು. ತನ್ನ ೧೩ನೇ ವಯಸ್ಸಿನಲ್ಲಿ ದೇಶಭಕ್ತಿಯ ನಾಟಕವನ್ನು ಬರೆದನು. ರುಮೇನಿಯಾ ದೇಶಕ್ಕೆ ಹಿಂದಿರುಗಿದಾಗ, ಅಲ್ಲಿ ಅತಿ ಕ್ರೌರ್ಯತನವನ್ನು ನೋಡಿದನು. ಹೋದ ಸ್ವಲ್ಪಕಾಲದಲ್ಲಿಯೇ, ಒಬ್ಬ ಸಣ್ಣ ಹುಡುಗನು ಒಬ್ಬ ಮುದುಕನನ್ನು ತನ್ನ ಬೂಟುಗಳಿಂದ ಹೊಡೆಯುವುದನ್ನು ನೋಡಿದ ಇಯೊನೆಸ್ಕೋನಿಗೆ, ಅವನಲ್ಲಿ ಅತಿಕ್ರೌರ್ಯತನ, ಕೋಪ, ನಿಷ್ಪ್ರಯೋಜಕತೆ, ಅತಿವಿಕಾರ, ದ್ವೇಷ ಇವುಗಳು ಅವನ ಮನಸ್ಸಿನಲ್ಲಿ ಅಚ್ಚಳಿದವು.

ರುಮೇನಿಯಾದಲ್ಲಿ, ಇಯೊನೆಸ್ಕೋನ ಶಿಕ್ಷಣ ಮುಗಿದ ನಂತರ, ಬುಚರೆಸ್ಟ್ ವಿಶ್ವವಿದ್ಯಾಲಯದಲ್ಲಿ ಫ್ರೆಂಚ್ ಭಾಷೆಯ ವಿದ್ಯಾರ್ಥಿಯಾದನು. ಅವನ ಮೊದಲನೆಯ ಪದ್ಯಗಳು ಹೊರಬಿದ್ದವು. ಸಾಹಿತ್ಯಕ ವಿಮರ್ಶೆಯ ಸಾಹಸವನ್ನು ಮಾಡಿದನು. ಆಗಿನ ಮೂರು ರುಮೇನಿಯನ್ ಬರಹಗಾರರ ಬರಹಗಳನ್ನು ವಿಮರ್ಶಿಸಿದನು. ಅದರಲ್ಲಿ ಕಲ್ಪನಾ ಶಕ್ತಿಗಳಿಲ್ಲವೆಂದು ಹೇಳಿದನು. ಆದರೆ, ಕೆಲವು ದಿನಗಳ ನಂತರ ಈ ಮೂರು ಬರಹಗಾರರನ್ನು ಹೊಗಳಿ ಮತ್ತೊಂದು ವಿಮರ್ಶೆಯನ್ನು ಬರೆದನು. ಇನ್ನೊಂದು ಪ್ರಬಂಧವನ್ನು "ನೋ" ಎನ್ನುವ ಶಿರೋನಾಮದಲ್ಲಿ ಬರೆದು, ಒಂದು ವಿಷಯವನ್ನು ಬೇರೆಬೇರೆ ದೃಷ್ಟಿಗಳಿಂದ ನೋಡಬಹುದೆಂದು ತೋರಿಸಿದನು.

೧೯೩೬ರಲ್ಲಿ, ತನ್ನ ವಿದ್ಯಾಭ್ಯಾಸದ ನಂತರ, ಇಯೊನೆಸ್ಕೊ ಫ್ರೆಂಚ್ ಭಾಷೆಯ ಪ್ರಾಧ್ಯಾಪಕವಾಗಿ, ಬುಚರೆಸ್ಟ್ ಸ್ಕೂಲಿನಲ್ಲಿ ಕೆಲಸ ಮಾಡಿದನು. ೧೯೩೮ರಲ್ಲಿ, ಸರಕಾರದ ಅನುಮತಿಯಿಂದ, ಫ್ರಾನ್ಸಿಗೆ ಹೋದನು. ಯುದ್ಧ ಪ್ರಾರಂಭವಾದಾಗ ಇಯೊನೆಸ್ಕೊ ಮಾರ್ಸೈನಲ್ಲಿದ್ದನು. ಪ್ಯಾರಿಸ್‌ಗೆ ಹಿಂದಿರುಗಿ, ಪ್ರಕಾಶಕರಲ್ಲಿ ಕೆಲಸ ಮಾಡಿದನು.

ಅವನಿಗೆ ನಾಟಕಗಳು ಇಷ್ಟವಾಗುತ್ತಿರಲಿಲ್ಲ. ಕತೆಗಳು ಅವನಿಗೆ ಪ್ರಿಯವಾಗಿದ್ದುವು. ಇಷ್ಟವಿಲ್ಲದಿದ್ದರೂ ಒಂದು ನಾಟಕವನ್ನು ಬರೆದನು. ಇದಕ್ಕೆ ಹಿನ್ನಲೆಯುಂಟು. ೧೯೪೮ರಲ್ಲಿ ಇಯೊನೆಸ್ಕೊ ಆಂಗ್ಲ ಭಾಷೆಯನ್ನು ಕಲಿಯಲು ಪ್ರಾರಂಭಿಸಿದನು. ಇಂಗ್ಲೀಷ್‌ನಲ್ಲಿ ವಾಕ್ಯಗಳನ್ನು ಬರೆದುಕೊಂಡು ಬಾಯಿಪಾಠ ಮಾಡುವಾಗ ಅದರ ನಿಜ ಅರ್ಥವನ್ನು ಅರಿತನು. ಶ್ರೀಮತಿ ಮತ್ತು ಶ್ರೀ ಸ್ಮಿತ್ ಎಂಬ ಎರಡು ವಾಕ್ಯಗಳನ್ನು ಪಾಠದಲ್ಲಿ ಪರಿಚಯ ಮಾಡಿದನು. ಇದರಲ್ಲಿನ ಆಶ್ಚರ್ಯವೇನೆಂದರೆ, ಶ್ರೀಮತಿ ಸ್ಮಿತ್ ತನ್ನ ಗಂಡನಿಗೆ ಮತ್ತು ತನಗೆ ಬಹಳ ಮಕ್ಕಳಿವೆಯೆಂದೂ, ಮತ್ತು ತಾವು ಲಂಡನ್ನಿನಲ್ಲಿ ವಾಸಿಸುತ್ತಿದ್ದೇವೆಂದೂ ಮತ್ತು ತಮ್ಮ ಹೆಸರು ಸ್ಮಿತ್ ಎಂದೂ ತಮ್ಮ ಆಳು ಮೇರಿ ಎಂದೂ ತಿಳಿಸುತ್ತಾಳೆ. ಈ ವಿಧಾನವು ನಿಜಸಂಗತಿಗೆ ಆಧಾರವಾಗಿತ್ತು. ಅವನು ಕಲಿಯುದ ಪಾಠ ಬರಿದು ಎಂದೆನಿಸಿತು. ಹೀಗೆ ಅವನ ಮೊದಲನೇ ನಾಟಕ ಹೊರ ಬಿದ್ದಿತು. ಅದನ್ನು ಮೊದಲು "ಕಷ್ಟವಿಲ್ಲದ ಇಂಗ್ಲಿಷ್ L'anglais sanspeine) ಎಂದು ಕರೆದು. ಅದನಂತರ "ಇಂಗ್ಲಿಷಿನ ಗಂಟೆ" (L' leme anglaise)ಎಂದು ಕರೆದು, ಕಡೆಗೆ "ಹಾಡುವವಳ ಬೋಳುತಲೆ" (La Cautatrice Chauve) ಎಂದು ಕರೆದನು.

ಹೀಗೆ ಹೆಸರಿಡುವುದಕ್ಕೆ ಒಂದು ಕಾರಣವಿದೆ. ಈ ನಾಟಕವನ್ನು ಇಯೊನೆಸ್ಕೋ ತನ್ನ ಸ್ನೇಹಿತರೆದುರು ಓದಿದನು. ಅವರಿಗೆ ಬಹಳ ತಮಾಷೆ ಎಂದೆನಿಸಿತು. ಆದರೆ ಇಯೊನೆಸ್ಕೋನಿಗೆ ಮಾತ್ರ ತಾನು ಒಂದು ಗಂಭೀರ ನಾಟಕ ಬರೆದಿದ್ದೇನೆಂದು, ಅದರಲ್ಲಿ ಭಾಷೆಯು ಬಹಳ ಗಂಭೀರವಾದದ್ದೆಂದು ಅರಿತನು. ಈ ನಾಟಕದಲ್ಲಿ ಅಗ್ನಿಶಾಮಕದಳದವನು ಮಾತನಾಡುವಾಗ, ಬಾಯಿತಪ್ಪಿ institutiu bald ಎನ್ನುವ ಬದಲು Cautatriu Chauve ಎಂದು ಹೇಳುತ್ತಾನೆ. ಅಲ್ಲೇ ಇದ್ದ ಇಯೊನೆಸ್ಕೋವಿಗೆ, ಈ ಹೆಸರು ನಾಟಕಕ್ಕೆ ಚೆನ್ನಾಗಿದೆ ಎನ್ನಿಸಿ, ೧೦ನೇ ದೃಶ್ಯದಲ್ಲಿ ಒಂದು ಸಣ್ಣ ಪರಿಚಯ ಕೊಡುತ್ತಾನೆ. ನಾಟಕದ ಕೊನೆಯೂ ಸಹ ಒಂದು ಕಥೆ. ಜೋಡಿಯ ಜಗಳವಾದ ನಂತರ ವೇದಿಕೆಯನ್ನು ಖಾಲಿ ಮಾಡಿ, ಸಭೆಯಲ್ಲಿರುವ ಕೆಲವೊಂದು ಜನರು ಗದ್ದಲ ಮಾಡುವುದೆಂದು ಇಯೊನೆಸ್ಕೋವಿನ ಯೋಚನೆಯಾಗಿತ್ತು. ಅನಂತರ ಮ್ಯಾನೇಜರ್ ವೇದಿಕೆಯ ಮೇಲೆ ಬಂದಾದಮೇಲೆ. ಪೋಲಿಸರು ವೇದಿಕೆಯ ಮೇಲೆ ಬಂದು. ಬಂದೂಕಿನಿಂದ ಸಭೆಯಲ್ಲಿರುವ ಜನರನ್ನು ಶೂಟ್ ಮಾಡಿ, ಮ್ಯಾನೇಜರ್ ಮತ್ತು ಪೋಲಿಸರು ಒಬ್ಬರಿಗೊಬ್ಬರಿಗೆ ವಂದಿಸುವುದು ಎಂದಿತ್ತು. ಇವಕ್ಕೆ ಬಹಳಷ್ಟು ಪಾತ್ರದಾರರು ಬೇಕಾಗಿದ್ದುದರಿಂದ, ಜಗಳವಾಡುತ್ತಿದ್ದ ಜೋಡಿಯ ಬಳಿ ಆಳನ್ನು ಕಳುಹಿಸಿ, "ಬರೆಹಗಾರ" ಎಂದು ಹೇಳಿಸಿ, ಬರಹಗಾರನು ವೇದಿಕೆಯ ಮೇಲೆ ಬಂದ ನಂತರ, ಪಾತ್ರಧಾರಿಗಳು ಒಂದಕ್ಕೆ ಸರಿಯದೆ, ಬರಹಗಾರನು "ನೀವು ಮೋಸಗಾರರು" ಎಂದು ಕೂಗುವ

ಯೋಜನೆ ಇತ್ತು. ಆದರೆ ಇದು ವಿವಾದಾತ್ಮವಾದದ್ದು ಎಂದೆನಿಸಿ, ಇದನ್ನು ಬಿಟ್ಟು ನಾಟಕ ಮುಗಿದ ಕೊಡಲೆ, ಪುನ: ನಾಟಕವನ್ನು ಪ್ರಾರಂಭಿಸಬೇಕೆಂದು ಯೋಚಿಸಿದರು.

ಈ ನಾಟಕದಲ್ಲಿ ಮದುವೆಯಾದ ಗಂಡಹೆಂಡಿರ ದೃಶ್ಯವು ಬಹಳ ಮೋಜಿನದಾಗಿದೆ. ಒಂದೇ ರಸ್ತೆಯಲ್ಲಿ, ಒಂದೇ ಮನೆಯಲ್ಲಿ, ಒಂದೇ ಹಾಸಿಗೆಯಲ್ಲಿ ವಾಸಿಸುತ್ತಿದ್ದ ಅವರು ಗಂಡ ಹೆಂಡಿರಿರಲೇಬೇಕೆಂದು ಹೇಳುವ ದೃಶ್ಯವೂ ಸಹ ಮೋಜಿದಾಗಿದೆ.

ಈ ನಾಟಕವಲ್ಲಿ ಅಗ್ನಿಶಾಮಕನು ಹೊರಗಿನ ಶಕ್ತಿಯನ್ನು ಪ್ರತಿನಿಧಿಸುತ್ತಾನೆ. ಇವನಿಗೆ ಯಾವ ಸಮಸ್ಯೆಯೂ ಇಲ್ಲ. ಜನರು ಭಾನುವಾರ ದಿನ ಬೇಜಾರು ಮಾಡಿಕೊಂಡು ಕಾಲಕಳೆಯುತ್ತಿದ್ದಾಗ ಇವನು ಬರುತ್ತಾನೆ. ಇವನ ಕೆಲಸವೆಂದರೆ, ಬೇಕಿಯನ್ನು ಆರಿಸುವ ಕೆಲಸ.

ಕೆಲಸದವಳ ಪಾತ್ರ ಅಸ್ಪಷ್ಟವಾದದ್ದು ಮತ್ತು ಭ್ರಾಂತಿಯುಳ್ಳದ್ದು. ಇವಳು ತನ್ನ ಹೆಸರು Sherloch Holmes ಎಂದು ಹೇಳುತ್ತಾಳೆ. ಇವಳು ಕಿಟಕಿ ಸಂದಿಯಿಂದ ಮತ್ತು ಬಾಗಿಲಿನ ಸಂದಿಯಿಂದ ಮಾತುಗಳನ್ನು ಕೇಳುತ್ತಾಳೆ.

ಲೋಲಕವು ಒಂದು ಪಾತ್ರ ಈ ಪಾತ್ರವು ಬಹಳ ಮುಖ್ಯವಾದದ್ದು. ದಿನಚರಿಯನ್ನು ತಿರಸ್ಕರಿಸುತ್ತದೆ. ಶ್ರೀಮತಿ ಸ್ಮಿತ್, "ನಮ್ಮ ಮನೆಯಲ್ಲಿ ಗಂಟೆಯೇ ಇಲ್ಲ" ಎಂದಾಗ, ಲೋಲಕವು ಕೋಪಗೊಂಡು, ಮೂರುಘಂಟೆಗಳನ್ನು ಹೊಡೆಯುತ್ತದೆ. ಸ್ವಲ್ಪ ಹೊತ್ತಿನನಂತರ ನಾಲ್ಕು ಘಂಟೆಗಳನ್ನು ಹೊಡೆಯುತ್ತವೆ. ಅಗ ೯ ಘಂಟೆ ಯೆಂದು ಎಲ್ಲರಿಗೂ ತಿಳಿಯುತ್ತದೆ. ಶ್ರೀ ಸ್ಮಿತ್‌ನು, "ಅದು ಸರಿಯಾಗಿ ನಡೆಯುವುದಿಲ್ಲ. ಅದಕ್ಕೆ ವಿರುದ್ಧ ಹೇಳುವ ಭಾವವಿದೆ. ಅದು ಯಾವಾಗಲೂ ಇರುವ ಘಂಟೆಗೆ ವಿರುದ್ಧ ತೋರಿಸುತ್ತದೆ" ಎಂದು ಹೇಳುತ್ತಾನೆ.

ದಿನಚರಿಯು ನಾಟಕದ ಮೊದಲಿನ ದೃಶ್ಯದಲ್ಲಿ ಶ್ರೀಮತಿ ಸ್ಮಿತ್‌ಳ ದೀರ್ಘ ಭಾಷಣದಲ್ಲಿದೆ. "ನೋಡು, ಈಗ ಒಂಬತ್ತು ಘಂಟೆ. ನಾವು ಸೂಪ, ಮೀನ, ಆಲೂಗಡ್ಡೆ, ಇಂಗ್ಲಿಷ್ ಶ್ಯಾಲಡ್‌ನ್ನು ತಿಂದಿದ್ದೇವೆ. ಮತ್ತು ಇಂಗ್ಲೆಂಡ್ ನೀರನ್ನು ಕುಡಿದಿದ್ದೇವೆ. ಈ ಸಾಯಂಕಾಲ ನಾವು ಚೆನ್ನಾಗಿ ಊಟಮಾಡಿದ್ದೇವೆ. ಅದರಿಂದ ನಾವು ಲಂಡನ್ನಿನ ಹತ್ತಿರ ವಾಸಿಸುತ್ತಿದ್ದೇವೆ. ನಮ್ಮ ಹೆಸರು ಸ್ಮಿತ್.

ಇಯೋನೆಸ್ಕೋ ನಾಟಕಗಳು ತರ್ಕಬದ್ಧವಾಗಿವೆ. ಇಯೊನೆಸ್ಕೋವಿನ ವಿಮರ್ಶಕರು ಈ ನಾಟಕವನ್ನು ವಿಶ್ಲೇಷಣೆ ಮಾಡುತ್ತಾ, ಈ ನಾಟಕವು ಮಧ್ಯಮ ತರಗತಿ

ಯುವರನ್ನು ವಿಶ್ಲೇಷಣೆ ಮಾಡಿದ್ದಾನೆಂದು ಹೇಳುತ್ತಾರೆ. ಇಯೊನೆಸ್ಕೊ ತನ್ನದೆ ಆದ ಪದ ವಿನ್ಯಾಸ, ವಾಕ್ಯ ಜೋಡಣೆಯಿಂದ, ಮಧ್ಯಮ ತರಗತಿಯ ಬದುಕನ್ನು ವಿಶ್ಲೇಷಣೆ ಮಾಡಿದ್ದಾನೆ. ಭಾಷೆಯನ್ನು ಕೂಡಿಸಿ, ಈ ನಾಟಕವನ್ನು ಬರೆದು, ಇದಕ್ಕೆ "ಭಾಷೆಯ ದುರಂತ" "Tragedy of lauguage" ಎಂದು ಕರೆದನು. ಪದೇ ಪದೇ ಒಂದೇ ಶಬ್ದವನ್ನು ಉಪಯೋಗಿಸಿ ಜೀವನದ ಅಸಂಗತ ಮತ್ತು ಹರ್ಷವನ್ನು ಎತ್ತಿ ತೋರಿಸಿದ್ದಾನೆ. ೬ನೆಯ ದೃಶ್ಯದಲ್ಲಿ ಬಾಗಿಲ ಘಂಟೆ ಬಾರಿಸುತ್ತದೆ. ಶ್ರೀಮತಿ ಸ್ಮಿತ್ ಬಾಗಿಲು ತೆಗೆಯುತ್ತಾಳೆ. ಆದರೆ ಯಾರೂ ಇರುವುದಿಲ್ಲ. ೪ನೇಬಾರಿ, ಅಗ್ನಿ ಶಾಮಕದಳದವನು ಬರುತ್ತಾನೆ. ಆಗ ಶ್ರೀ ಸ್ಮಿತ್, "ಘಂಟೆ ಹೊಡೆದರೆ, ಯಾರಾದರೂ ಘಂಟೆಯನ್ನು ಬಾರಿಸಿರಬೇಕು" ಎಂದು ಹೇಳುತ್ತಾನೆ.

ಇಯನೆಸ್ಕೋನು ನಾಟಕದಲ್ಲಿ ಅಭಿನಯಿಸಲು ಸಾಹಸ ಮಾಡಿದನು. ಅವನು ಅಭಿನಯಿಸಿದ ಪಾತ್ರದಲ್ಲಿ ಮುಳುಗಿದ್ದರಿಂದ, ತನ್ನನ್ನೇ ಒಂದು ಹೊಸರೀತಿಯಲ್ಲಿ ಕಂಡುಕೊಂಡನು.

೧೯೫೧ರಲ್ಲಿ, ಅವನ ಎರಡನೆಯ ನಾಟಕ ಹೊರಬಿದ್ದಿತು, "ಪಾಠ" (La Licm) ಈ ನಾಟಕದಲ್ಲಿ, ತಾನು ಕಲಿತ ಒಂದು ಪಾರದ ಪಾಠವನ್ನು ಬರೆದಿದ್ದಾನೆ. ಇದರಲ್ಲಿ ಒಬ್ಬ ಮುದುಕ ಉಪನ್ಯಾಸಕ, ಒಬ್ಬ ಪೆದ್ದ ಹುಡಿಗಿಗೆ ಭೂಗೋಳ, ಕೂಡುವುದು, ಗುಣಾಕಾರ ಮತ್ತು ಇತರ ವಿಷಯಗಳಲ್ಲಿ ಪಾಠ ಹೇಳುವ ದೃಶ್ಯವಿದೆ. ಭಾಷೆಯು ಮುಖ್ಯ ಪಾತ್ರವನ್ನು ಹೊಂದಿದೆ. ಉಪನ್ಯಾಸಕನ ಮನಸ್ಸಿನಲ್ಲಿ ಬಹಳ ವಿಚಾರಗಳಿರುವುದರಿಂದ, ಅವನಿಗೆ ಪಾಠ ಹೇಳಿ ಕೊಡುವುದು ಕಷ್ಟವಾಗುತ್ತದೆ. ಆ ಹುಡಿಗಿಗೆ ಕೂಡಲು ಬಂದರೆ, ಕಳೆಯಲು ಬರುವುದಿಲ್ಲ. ದೊಡ್ಡ ಅಂಕಿಗಳ ಗುಣಾಕಾರ ಮಾಡುತ್ತಾಳೆ. ಆದರೆ ತನಗೆ ೧೬ ತನಕಷ್ಟೇ ಎಣಿಸಲು ಬರುತ್ತದೆ ಎಂದು ಹೇಳುತ್ತಾಳೆ. ಪಾಠದ ಆರಂಭದಲ್ಲಿ, ಆ ವಿದ್ಯಾರ್ಥಿನಿಗೆ ಬಹಳ ಉತ್ಸಾಹವಿರುತ್ತದೆ. ಆದರೆ ನಾಟಕದ ಕಡೆಯಲ್ಲಿ ಉತ್ಸಾಹವು ಕಡಿಮೆಯಾಗಿ, ಅವನ ಮೇಲೆ ಅಧಿಕಾರ ಚಲಾಯಿಸುತ್ತಾಳೆ. ಕೆಲಸದವಳು. ಉಪನ್ಯಾಸಕನೊಂದಿಗೆ ತಾಯಿಯಂತೆ ವರ್ತಿಸುತ್ತಾಳೆ : "ಲೆಕ್ಕವು ಸಾಹಿತ್ಯ ಪ್ರೇಮಕ್ಕೆ ಮಾರ್ಗದರ್ಶನವಾಗುತ್ತದೆ. ಮತ್ತು ಸಾಹಿತ್ಯ ಪ್ರೇಮವು ಅಪರಾಧಕ್ಕೆ ಕಾರಣವಾಗುತ್ತದೆ ...." ಎಂದು ಹೇಳುತ್ತಾಳೆ. ವಿದ್ಯಾರ್ಥಿ ಹಲ್ಲು ನೋವಿನ ಕಾರಣ, ಮಾತಾಡಲು ಕಷ್ಟವಾಗಿ, ಭಾಷೆಯು ಮರೆತಂತಾಗಿ, ಮನಸ್ಸಿನ ಮೇಲೆ ಪರಿಣಾಮವಾಗುತ್ತದೆ. ತನ್ನ ಮೈ ಎಲ್ಲಾ ನೋವಾಗಿ, ಶಾರೀರವು ಬಹಳ ದುರ್ಬಲವಾಗುತ್ತದೆ. ಆಗ ಉಪನ್ಯಾಸಕನು, ಆಕೆಯನ್ನು ತಿವಿದು, "ಚಾಕು ಕೊಂದಿತು" ಎಂದು ಹೇಳುತ್ತಾನೆ. ಇದು ಸರ್ವಾಧಿಕಾರಿತನವನ್ನೂ ಎತ್ತಿ ತೋರಿಸುತ್ತದೆ. ವಿದ್ಯಾರ್ಥಿನಿಗೆ ಯಾವಾಗಲೂ ಹಲ್ಲು ನೋವು ಬಂದು. ಉಪನ್ಯಾಸಕನು

ಅವಳಿಗೆ ಬಲತ್ಕಾರ ಮಾಡಿ, ಅವಳನ್ನು ಚಾಕುವಿನಿಂದ ಕೊಲ್ಲುವುದೇ ಈ ನಾಟಕದ ಸಾರಾಂಶ. ತಾನು ಉಪಾಧ್ಯಾಯನಾಗದಲ್ಲಿ ತನ್ನ ಹಕ್ಕನ್ನು ವಿದ್ಯಾರ್ಥಿನಿಯ ಮೇಲೆ ತೋರಿಸಿ ಹಿಂಸಾಚಾರ ಕಾಮಕ್ಕೆ ಎರಗುತ್ತಾನೆ. ಇದರಿಂದ ಅವನ ಬಲ ತೋರುತ್ತದೆ. ಇದು ಅತಿಕ್ರೌರ್ಯದ ಕೆಲಸವೆನಿಸುತ್ತದೆ. ಈ ನಾಟಕವನ್ನು ಇಯೊನೆಸ್ಕೋ ಹಾಸ್ಯ ನಾಟಕವೆಂದು ಕರೆದರೂ, ಇದರಲ್ಲಿ ಕ್ರೌರ್ಯ ಮತ್ತು ಶೂರತನ, ಕಾಮ ಇವುಗಳೇ ಮುಖ್ಯವಾದುವು. ಉಪಾಧ್ಯಾಯನ ನಡುವಳಿಕೆಯು ಅವನ ಭಾಷೆಯಲ್ಲಿ ತಿಳಿಯುತ್ತದೆ. ಹೀಗೆ ಹುಡುಗಿಯು ಬಹಳ ಮೃದು ಸ್ವಭಾವದವಳಾಗಿ, ಉಪಾಧ್ಯಾಯನು ಆಕ್ರಮಣಕಾರಿ ಸ್ವಭಾವದವನಾಗಿ ತೋರಿದ್ದಾನೆ. ಈ ನಾಟಕದಲ್ಲಿ ನಿಜವಾದ ಸಮಸ್ಯೆಯು ಗಣಿತವನ್ನು ಕಲಿಸಲು ಪ್ರಾರಂಭಿಸಿದಾಗಲೆ ತಿಳಿಯುವುದು. ಭಾಷೆಯನ್ನು ಚೆನ್ನಾಗಿ ಹೆಣೆದಿದ್ದಾನೆ. "ಅದಲ್ಲ, ಅದಲ್ಲವೇ ಅಲ್ಲ. ನಿನಗೆ ಯಾವಾಗಲೂ ಕೂಡಿಸುವುದು ಬರುತ್ತದೆ. ಆದರೆ, ಅದನ್ನು ಕಳೆಯಬೇಕು. ಯಾವಾಗಲೂ ಕೂಡಿಸಬಾರದು, ಅದನ್ನು ಕಳೆಯಬೇಕು ಇದೇ ಜೀವನ ಇದೇ ತತ್ವಜ್ಞಾನ. ಇದೇ ವಿಜ್ಞಾನ ಇದೇ ನಾಗರಿಕತೆ…………". ಇದು ಹಾಸ್ಯ ಮತ್ತು ರುದ್ರ ನಾಟಕವಾಗಿ ಪರಿಗಣಿಸಿದೆ.

೧೯೫೦ರಲ್ಲಿ. ಇಯೊನೆಸ್ಕೋವಿನ ಮತ್ತೊಂದು ನಾಟಕ "ಜ್ಯಾಕ್ಸ" ತೆರೆಕಂಡಿತು. ಈ ನಾಟಕದಲ್ಲಿ, ಜಾಕ್ಸನ ಮನೆಯವರಿಗೆಲ್ಲಾ ಒಂದೇ ಹೆಸರು, ಅಂದರೆ ಜಾಕ್ಸ ಎಂದು ಕರೆಯಲಾಗಿದೆ. ಮನುಷ್ಯನ ವ್ಯಕ್ತಿತ್ವವನ್ನು ಮುಚ್ಚಿಡಲಾಗಿದೆ. ಜ್ಯಾಕ್ಸ ಕೆಲವೊಂದು ಪದಗಳನ್ನು ಹೇಳಲು ನಿರಾಕರಿಸುತ್ತಾನೆ. ಏಕೆಂದರೆ ಅದು ಅವನ ಮನೆತನದ ದರ್ಜೆಯನ್ನು ಕೆಳಗಿರಿಸಿದಂತಾಗುತ್ತದೆ ಎಂದು ಭಾವಿಸುತ್ತಾನೆ. ಕಡೆಗೆ "J'adore les Pommer de tere all land" ಎಂದು ಹೇಳುತ್ತಾನೆ. ಇದನ್ನು "ನಾನು ಜ್ಯಾಕೆಟನಲ್ಲಿರುವ ಆಲೂಗಡ್ಡೆಯನ್ನು ಇಷ್ಟಪಡುತ್ತೇನೆ" ಅಥವಾ "ತುಂಡು ತುಂಡಾದ ಆಲೂಗಡ್ಡೆಯನ್ನು ಇಷ್ಟಪಡುತ್ತೇನೆ" ಅಥವಾ "ಹುರಿದ ಆಲೂಗಡ್ಡೆಯ ತುಂಡನ್ನು ಇಷ್ಟಪಡುತ್ತೇನೆ" ಎಂದು ಭಾಷಾಂತರಿಸಿದ್ದಾರೆ.

ಜ್ಯಾಕ್ಸ್ ರೊಬೆರ್‌ನ ಮನೆತನದ ಎರಡು ಮೂಗಿನ ಹುಡುಗಿಯನ್ನು ಮದುವೆಯಾಗುತ್ತಾನೆ. ಆದರೆ ಎರಡು ಮೂಗು ಸಾಕಾಗದೇ, ಮೂರು ಮೂಗಿನ ಹುಡುಗಿ ಬೇಕೆನಿಸುತ್ತದೆ. ರೊಬೆರ್ಟ್ ಮನೆತನವು, ರೊಬೆರ್ಟ್ II ಎನ್ನುವ ಮೂರು ಮೂಗುಳ್ಳ ಹುಡುಗಿಯನ್ನು ಅವನಿಗೆ ಮದುವೆ ಮಾಡುತ್ತಾರೆ. ಆದರೆ, ಅವನಿಗೆ ಅವಳನ್ನು ಪ್ರೀತಿಸಲಾಗುವುದಿಲ್ಲ. ಒಂದು ಹಂದಿ, ತನ್ನ ತಾಯಿಯಲ್ಲವೆ. ಒಂದು ಸ್ನಾನದ ತೊಟ್ಟಿಯ ಕೆಳಗೆ ಬೆಳೆಯುತ್ತದೆಂದು ಅವಳು ಹೇಳಿದಾಗ ಅವನ ಮನಸ್ಸನ್ನು ಸೆಳೆಯುತ್ತಾಳೆ. ಒಬ್ಬನೇ ಅವಳ ಜೊತೆ ಇದ್ದಾಗ ಮಾರು ಹೋಗುತ್ತಾನೆ. ಇದಾದ್ನ ನಂತರ, ಮನೆಮಂದಿಗೆಲ್ಲಾ ಅವರಿಬ್ಬರ ಮುಂದೆ ಬಂದು, ಅಶ್ಲೀಲವಾದ ನೃತ್ಯವನು

ಮಾಡುತ್ತಾರೆ. ದೃಶ್ಯದಲ್ಲಿ ಪ್ರಾಣಿಗಳ ಕೂಗಾಟವಿದೆ. ಇವೆಲ್ಲಾ ಜನರಲ್ಲಿ ಜಿಗುಪ್ಸೆ, ಅಸಹ್ಯ, ನಾಚಿಕೆಯಾಗಲೆಂದು ಹೀಗೆ ಬರೆದಿದ್ದಾನೆ.

ಇಯೊನೆಸ್ಕೋನ "ಕುರ್ಚಿಗಳು" ("Les Chaises") ನಾಟಕವನ್ನು ಜೂನ್ ೧೯೫೧ರಲ್ಲಿ ಬರೆದನು. ಇದು ಇಯೊನೆಸ್ಕೋವಿನ ಅತ್ಯಂತ ಮಹತ್ವದ ನಾಟಕ. ಗಂಡ ಹೆಂಡತಿಯರು ಒಂದು ದ್ವೀಪದ ಗುಂಡಗಿರುವ ಗೋಪುರದಲ್ಲಿ ವಾಸಿಸುತ್ತಾರೆ. ಗಂಡನಿಗೆ ೯೫ ವಯಸ್ಸು ಹೆಂಡತಿಗೆ ೯೪ ವಯಸ್ಸು. ಈ ಗೋಪುರದಲ್ಲಿ ಮತ್ತಾರು ನಿವಾಸಿಗಳಿಲ್ಲ. ಗಂಡನು ಇದನ್ನು ನೋಡಿಕೊಳ್ಳುತ್ತಿರುತ್ತಾನೆ. ದೊಡ್ಡ ವ್ಯಕ್ತಿಗಳಿಗೆ ಒಂದು ಸಂದೇಶವನ್ನು ಹೇಳುವುದಕ್ಕಾಗಿ ಆಹ್ವಾನಿಸಿ ಅವರ ಬರುವಿಕಗಾಗಿ ಕಾಯುತ್ತಿರುತ್ತಾನೆ. ಈ ಸಂದೇಶವನ್ನು ಹೇಳಲು ಒಬ್ಬ ವೃತ್ತಿ ಭಾಷಣಕಾರನನ್ನು ಕರೆಸುತ್ತಾನೆ. ಆಹ್ವಾನಿತರು ಬರುತ್ತಾರೆ. ಆದರೆ ವೇದಿಕೆಯ ಮೇಲೆ ಅವರು ಕಾಣಿಸುವುದಿಲ್ಲ. ವೇದಿಕೆಯ ತುಂಬಾ, ಕುರ್ಚಿಗಳನ್ನು ಹಾಕಿ, ಸಹಜವಾಗಿ ಅವರ ಜೊತೆ ಸಂಭಾಷಣೆಯಲ್ಲಿ ತೊಡಗುತ್ತಾರೆ. ಹೆಚ್ಚು ಹೆಚ್ಚು ಕುರ್ಚಿಗಳನ್ನು ಹಾಕಿ, ವೇದಿಕೆಯ ತುಂಬಾ ಕುರ್ಚಿಗಳಿಂದ ತುಂಬಿ, ಅಲ್ಲಿ ಅಡ್ಡಾಡುವುದು ಕಠಿಣವಾಗಿ, ಜನದಟ್ಟಣೆ ಇದೆ ಎಂದು ತಿಳಿಯುತ್ತದೆ. ರಾಜನೂ ಸಹ ಬರುತ್ತಾನೆ. ಭಾಷಣಕಾರ ಬಂದನಂತರ, ಮುದುಕನು ತನ್ನ ಸಂದೇಶವನ್ನು ಈ ಭಾಷಣಕಾರ ಜಗತ್ತಿಗೆ ಹೇಳುವನೆಂದು ತಿಳಿದು, ಸಮುದ್ರದಲ್ಲಿ ಇಬ್ಬರೂ ಬೀಳುತ್ತಾರೆ, ಆದರೆ ಭಾಷಣಕಾರನು ಮೂಕ ಮತ್ತು ಕಿವುಡ. ಶಬ್ದವನ್ನಷ್ಟೇ ಮಾಡಬಲ್ಲ. ಅರ್ಥವಿಲ್ಲದ ಕೆಲವು ಅಕ್ಷರಗಳನ್ನು ಬೋರ್ಡಿನ ಮೇಲೆ ಬರೆಯುತ್ತಾನೆ. ಅಂದರೆ ಮನುಷ್ಯನು ತನ್ನ ಸುಖ ದುಃಖಗಳನ್ನು ಹೇಳಿ ತಿಳಿಸಲು ಸಾಧ್ಯವಾಗುವುದಿಲ್ಲವೆಂಬುದನ್ನು ತೋರಿಸಿದ್ದಾನೆ. ಮನುಷ್ಯ ಜೀವನದ ಸೋಲನ್ನು ತೋರಿಸಿದ್ದಾನೆ. ಖಾಲಿ ಕುರ್ಚಿಗಳು ಅಸಂಗತವನ್ನು ತೋರಿಸುತ್ತದೆ. ಸಂದೇಶದಲ್ಲಿ ಅರ್ಥವಿಲ್ಲ.

ಈ ದ್ವೀಪದಲ್ಲಿ ಬೇರೆ ನಿವಾಸಿಗಳಿಲ್ಲದಿರುವುದು. ಒಂಟಿತನ ಮತ್ತು ಮನುಷ್ಯನ ದುಃಖವನ್ನು ಚಿತ್ರಿಸುತ್ತದೆ. ಈ ನಾಟಕಕ್ಕೆ ಒಂದು ಖಾಲಿ ಕೋಣೆ ಮತ್ತು ಅದರಲ್ಲಿ ಆಕ್ರಮಿಸಿದ ಕುರ್ಚಿಗಳು, ಇವುಗಳ ಚಿತ್ರ ನನ್ನ ಮನಃಸ್ಸಿನಲ್ಲಿತ್ತು" ಎಂದು ಹೇಳಿದ್ದಾನೆ. "ಇದು ನಿಜವಾದದ್ದು ಅಲ್ಲ ನಿಜವಲ್ಲದ್ದೂ ಅಲ್ಲ. ಆದರೆ, ಎಲ್ಲವೂ ಕಣ್ಣಿಗೆ ಕಾಣುವುದು ಅಥವಾ ಕಾಣದೆ ಇರುವುದು......ಜನರು ಇದ್ದಾರೆಂಬುದು ತಿಳಿಯಬೇಕು" ಎಂದು ಹೇಳಿದ್ದಾನೆ ಪ್ರಪಂಚದ ಬಗ್ಗೆ ಯಾವ ವಿಚಾರವಿಲ್ಲದಿರುವುದನ್ನು ಖಾಲಿ ಕೊಠಡಿ ತೋರಿಸುತ್ತವೆ. ಈ ನಾಟಕದ ವಸ್ತು "ಏನೂ ಇಲ್ಲ"ದ್ದು "Nothi g ness". ಜಾ ಆನೂಯಿ ಈ ನಾಟಕವನ್ನು "ನಾಯಕ ಕೃತಿ" ಎಂದು ಕರೆದರು. ಇದರಲ್ಲಿ ತಮಾಷೆ, ನಗುವಂತಹ, ಕಳೆಯುಳ್ಳ, ಭಯಹುಟ್ಟಿಸುವ ದೃಶ್ಯಗಳಿವೆ. ಇವನ್ನು

ಅಯನೆಸ್ಕೋ "ರುದ್ರ ಅಣಕ" "tnagic farce" ನಾಟಕ ಎಂದು ಕರೆದನು.

"ದುಡಿಮೆಯ ಬಲಿ" [Victimes du devoir] ಎಂಬ ಇನ್ನೊಂದು ನಾಟಕದಲ್ಲಿ ಚೌಬೆರ್ ಎಂಬ ಸಾಹುಕಾರ ತನ್ನ ಹೆಂಡತಿಯೊಂದಿಗೆ ಸಾಯಂಕಾಲಗಳನ್ನು ಗದ್ದಲವಿಲ್ಲದೆ ಕಳೆಯುತ್ತಿರುತ್ತಾನೆ. ಆಗ ಒಬ್ಬ ಪತ್ತೇದಾರ ಅವನ ಮನೆಗೆ ಬಂದು, ಚೌಬೆರ್‌ನ ಹಳೆಯ ಬಾಡಿಗೆದಾರನ ಹೆಸರು Mallot ಅಥವಾ Mallod– 'ಟಿ' ಇಂದ ಕೊನೆಗೊಳ್ಳುತ್ತದೊ ಅಥವಾ 'ಡಿ' ಇಂದ ಲೋ ಎಂಬುದನ್ನು ವಿಚಾರಿಸಲು ಬರುತ್ತಾನೆ ಆದರೆ ಚೌಬೆರ್‌ಗೆ, ಆಪತ್ತೆದಾರ ಯಾರೆಂದು ತಿಳಿಯದಿದ್ದರೂ ಒಳಗೆ ಕರೆಯುತ್ತಾನೆ. ಪತ್ತೆದಾರ ಮನಃಶಾಸ್ತ್ರಜ್ಞನಾಗುತ್ತಾನೆ.

ಚೌಬೆರನು ಪ್ರಜ್ಞೆಯಲ್ಲಿ (Subconscious mind) ಹೋಗುತ್ತಿದ್ದಂತೆ, ಅವನ ಹೆಂಡತಿ ಮಡಲೀನ್ ಮೊದಲು ಪ್ರೇಯಸಿಯಾಗುತ್ತಾಳೆ, ಅನಂತರ ಮುದುಕಿಯಾಗಿ, ಕಡೆಗೆ ಒಡತಿಯಾಗುತ್ತಾಳೆ. ಚೌಬೆರನು ಶಬ್ದ ಮತ್ತು ಬೆಳಕಿನಿಂದ ಮುಂದೆ ಹೋಗಿ ಮರೆಯಾಗುತ್ತಾನೆ. ಪುನಃ ಅದರಿಂದ ಹೊರಗೆ ಬಂದಾಗ ಅವನೊಬ್ಬ ಚಿಕ್ಕ ಹುಡುಗನಾಗಿ, ಅವನ ಹೆಂಡತಿ ಮಡಲೀನ್ ಅವನ ತಾಯಿಯಾಗುತ್ತಾಳೆ ಮತ್ತು ಪತ್ತೇದಾರ ಅವನ ತಂದೆಯಾಗುತ್ತಾನೆ. ಅವನನ್ನು ಮೇಲೆ ತರಲು ಪ್ರಯತ್ನಿಸಿದಾಗ, ಬಹಳ ಕಷ್ಟವಾಗುತ್ತದೆ. ಪತ್ತೆದಾರನು ಚೌಬೆರನಿಗೆ ಬಹಳಷ್ಟು ಬ್ರೆಡ್ ತುಂಡುಗಳನ್ನು ತಿನ್ನಲು ಕೊಡುತ್ತಾನೆ. ಅವನ ಜ್ಞಾಪಕ ಶಕ್ತಿಯು ದೊಡ್ಡ ಶೂನ್ಯವಾಗುತ್ತದೆ. ಆಗ ಒಬ್ಬ ಗಡ್ಡಧಾರಿ ನಿಕಲೋಸ್‌ಯು ಎನ್ನುವನು ಆ ಪತ್ತೇದಾರಿಯನ್ನು ಚಾಕುವಿನಿಂದ ಕೊಲ್ಲುತ್ತಾನೆ. ಈ ನಿಕಲೋಸನು ಪತ್ತೇದಾರಿಯ ಪಾತ್ರವನ್ನು ಧರಿಸಿ, ಚೌಬೆರನಿಗೆ ಬ್ರೆಡ್‌ನ್ನು ತಿನ್ನಿಸಲು ಪ್ರಾರಂಭಿಸುತ್ತಾನೆ. ಅವನೂ ಸಹ ದುಡಿಮೆಯ ಬಲಿಯಾಗುತ್ತಾನೆ. Mallot ಅಥವಾ Mallod ಯಾವುದು ಸರಿಯಾದ ಹೆಸರು ಎಂಬುದನ್ನು ಕಂಡು ಹಿಡಿಯುವುದೇ ಅವನ ಕೆಲಸ.

ಅಯೊನೆಸ್ಕೋನು ಮನುಷ್ಯನು ಪ್ರಪಂಚದಲ್ಲಿ ಒಂದು ರಂಧ್ರವಿದ್ದ ಹಾಗೆ ಎನ್ನುತ್ತಾನೆ. ಈ ನಾಟಕವು ಬರೆಹಗಾರನ ಅಸಂಗತ ಅನುಭವ ಮತ್ತು ಬದುಕಿನ ಬಗ್ಗೆ ಇರುವ ಕ್ರೌರ್ಯಗಳನ್ನು ತಿಳಿಸುತ್ತವೆ.

ಹೀಗೆ, ಇವನ ಇತರ ನಾಟಕಗಳು ಅಂದರೆ "ಆಟೋಮೊ ಬಿಲ್ ಅಂಗಡಿ"—ಇವರಲ್ಲಿ ಕಾರುಗಳ ಮತ್ತು ಜನರ ಗೊಂದಲವಿದೆ. ಒಬ್ಬನು ಹೊಸಕಾರನ್ನು ಕೊಂಡುಕೊಳ್ಳುತ್ತಾನೆ. ಆ ಕಾರು ಒಂದು ಹೆಣ್ಣು. ಅವನ್ನು ಮದುವೆಯಾಗಲು ನಿಶ್ಚಯಿಸುತ್ತಾನೆ.

ಇದಾದನಂತರ ಮೂರು ದೃಶ್ಯವಿರುವ "ಅಮೆಡೆ" ಅಥವಾ "ಅವನ್ನು ಹೇಗೆ ತೊಲಗಿಸಬೇಕು" (How do get rid of it) ಎಂಬ ಹಾಸ್ಯ ನಾಟಕವನ್ನು ಬರೆಯುತ್ತಾನೆ.

ಅವನು ಮನಃಸ್ಥಿತಿ ಸರಿಯಾಗಿಲ್ಲದ್ದಾಗ ಈ ನಾಟಕವನ್ನು ಬರೆದನು.

ಅಮೆಡಿ ಮತ್ತು ಅವನ ಹೆಂಡತಿ ಮಡಲೀನ್ ೧೫ ವರ್ಷಗಳಿಂದ, ಪ್ರಪಂಚದ ಸಂಪರ್ಕವಿಲ್ಲದೆ. ತಮ್ಮ ಮನೆಯಲ್ಲಿ ವಾಸಿಸುತ್ತಿದ್ದಾರೆ. ಅವರು ದಿನನಿತ್ಯದ ಸಾಮಾನು ಗಳನ್ನೂ ಸಹ ಒಂದು ಚೀಲದಲ್ಲಿ ಕಿಟಕಿಯಿಂದ ತೆಗೆದುಕೊಳ್ಳುತ್ತಾನೆ. ಆದರೆ ಮಡ ಲೀನ್. ತನ್ನ ಕೋಣೆಯಲ್ಲಿ Switch boardನಲ್ಲಿ ಕೆಲಸ ಮಾಡುತ್ತಿದ್ದರಿಂದ, ಟೆಲಿಫೋನ್ ಮುಖಾಂತರ ಹೊರಗಿನ ಸಂಪರ್ಕವನ್ನಿಟ್ಟು ಕೊಂಡಿರುತ್ತಾಳೆ ಗಂಡ ಹೆಂಡತಿಗೆ ಸರಿಯಾಗಿರುವುದಿಲ್ಲ. ಅವರ ಪಕ್ಕದ ರೂಮಿನಲ್ಲಿ ೧೫ ವರ್ಷಗಳಿಂದ ಒಂದು ಮೃತ ದೇಹ. (ಅಮೇಲೆ ಕೊಂದಿರುವ)ಬಿದ್ದಿರುತ್ತದೆ. ಅದು ಅವಳ ಪ್ರಿಯನ ದಲ್ಲ. ಅದು ಹೆಣವಾದರೂ ಅದರ ಗಡ್ಡ, ಉಗುರುಗಳು ಬೆಳೆಯುತ್ತಿರುತ್ತದೆ. ಕಣ್ಣುಗಳು ಹೊಳೆಯುತ್ತಿರುತ್ತದೆ. ಒಂದು ದಿನ ಆ ರೂಮಿನ ಬಾಗಿಲು ಒದೆದು, ಒಂದು ದೊಡ್ಡ ಪಾದ ಹೊರಗೆ ಕಾಣಿಸುತ್ತದೆ. ಆ ಹೆಣ ಬೆಳೆದು ವಂಚಕತನವನ್ನು ತೋರಿಸುತ್ತದೆ. ಈ ಹೆಣವು ಗಂಡ ಹೆಂಡಂದಿರ ಸತ್ತಪ್ರೀತಿ, ಲೈಂಗಿಕ ಅತೃಪ್ತಿಯನ್ನು ತೋರಿಸುತ್ತದೆ. ಆದರೆ ಈ ಹೆಣವನ್ನು ಹೇಗಾದರೂ ಸಾಗಿಸಬೇಕೆಂದು ಕಿಟಕಿಯಿಂದ ಹೊರ ಎಸೆಯಲು ನೋಡುತ್ತಾನೆ, ಸಾಧ್ಯವಾಗುವುದಿಲ್ಲ. ಹೇಗೋ, ಇದನ್ನು ರೋಡಿನ ಮೇಲೆ ಎಳೆದುಕೊಂಡು ಸೇನ್ ನದಿಯ ಹತ್ತಿರ ಹೋಗುತ್ತಾನೆ. ಆಗ ಒಬ್ಬ ಪರದೇಶದವನನ್ನು ಭೆಟ್ಟಿಯಾಗಿ, ತಾನು ಒಂದು ನಾಟಕ ಬರೆಯುತ್ತಿರುವು ದಾಗಿಯೂ, ಹೊಸ ಮಾನವ ಹಿತನಿಷ್ಠೆಯಿಂದ ಕೂಡಿದ್ದು ಧಾರ್ಮಿಕ, ಅಥವಾ ನೈತಿಕ ವಿಷಯಗಳಲ್ಲಿಯ ನಂಬಿಕೆಗಳ ವಿರುದ್ಧವಾಗಿ ಬರೆಯುತ್ತಿರುವುದಾಗಿ ವಿವರಿಸುತ್ತಾನೆ. ಆಗ ಹೆಣವು ಬಲೂನ್ ಆಗಿ, ಅಮೆಡಿ ಗಾಳಿಯಲ್ಲಿ ತೂರಾಡುತ್ತಿರು ತ್ತಾನೆ. ಅವನ ಹೆಂಡತಿ ಮಡಲೀನ್ ಅವನಿಗಾಗಿ ಹಂಬಲಿಸುತ್ತಿರುತ್ತಾಳೆ. ಈ ಹಾಸ್ಯನಾಟಕ, ಅಸಂಗತತೆಯಿಂದ ಕೂಡಿದೆ.

ಇನ್ನು "ಖಡ್ಗಮೃಗ" "Rhinoceros" ಎಂಬ ನಾಟಕದಲ್ಲಿ, ಬೆರೆಂಜರ್ ಎಂಬ ಹೊಸಪಾತ್ರವನ್ನು ಸೃಷ್ಟಿಸುತ್ತಾನೆ. ಇವನು ಈ ನಾಟಕದ ನಾಯಕ. ಸಾಧಾರಣ ವಾದ ವಿಕಾರವಾದ ಮನುಷ್ಯ. ಇವನು ಡೇಸಿ ಎನ್ನುವವಳನ್ನು ಪ್ರೀತಿಸುತ್ತಾನೆ. ಇವನು ಮತ್ತು ಇವನ ಸ್ನೇಹಿತ 'ಜಾ' ಒಂದು ಭಾನುವಾರ ಮಾತನಾಡುತ್ತಾ ಕುಳಿತಿ ದ್ದಾಗ, ಎರಡು ಖಡ್ಗಮೃಗಗಳು ಜನರನ್ನು ಹೆದರಿಸುವುದು ಕಾಣಿಸುತ್ತದೆ. ಹೀಗೆ ಅವರು ಹೆಚ್ಚು ಖಡ್ಗಮೃಗಗಳನ್ನು ಹಾದಿಯಲ್ಲಿ ನೋಡುತ್ತಾರೆ. ಆ ಊರಿನ ಜನ ರಿಗೆಲ್ಲಾ ರೈನಾಸೆರೊಸ್ ಎಂಬ ಕಾಯಿಲೆ ಸೋಂಕಿ, ಖಡ್ಗ ಮೃಗಗಳಹಾಗೆ ಬದಲಿ ಸುತ್ತಾರೆ. ಎಲ್ಲರೂ ಖಡ್ಗಮೃಗಗಳಾದರೆ, ಬೆರೆಂಜರ್ ಮತ್ತು ಡೇಸಿ ಮನುಷ್ಯ ರಾಗಿ ಉಳಿದಿರುತ್ತಾರೆ. ಆದರೆ ಡೇಸಿ ಸಹ ಬದಲಿಸುತ್ತಾನೆ.

ಇದಾದನಂತರ, "ರಾಜಸಾಯುತ್ತಿದ್ದಾನೆ" ಎಂಬ ನಾಟಕವನ್ನು ಬರೆದನು. ಈ ನಾಟಕದಲ್ಲಿ ಬೆರೆಂಜಲ್ ಒಬ್ಬ ರಾಜ. ಆದರೆ ಅವನ ಶಕ್ತಿ ಕುಂದಿ ಹೋಗಿರುತ್ತದೆ ಅವನ ರಾಜ್ಯವೂ ಸಹ ಕುಂದಿ ಹೋಗಿರುತ್ತದೆ. ಡಾಕ್ಟರನು, ರಾಜನು ೧½ ಘಂಟೆ ಯೊಳಗೆ ಸಾಯುತ್ತಾನೆಂದು, ರಾಜನಿಗೇ ಹೇಳುತ್ತಾನೆ. ಈ ನಾಟಕವು. ರಾಜನ ಸಾಯುವಿಕೆಯನ್ನು ಚಿತ್ರಿಸುತ್ತದೆ. ನಾಟಕದ ಕಡೆಯಲ್ಲಿ, ರಾಣಿ, ಸೈನಿಕರ ಮೇಲೆ ಇವನ ನಿಯಂತ್ರಣ ಕಳೆದು ಹೋಗಿ, ಅವನ ಇಡೀ ಪ್ರಪಂಚವೇ ಮುಳುಗಿಹೋಗಿ. ಅವನ ಕೋಣೆಯಲ್ಲಿರುವ ಕುರ್ಚಿ, ಟೇಬಲ್‌ಗಳೂ ಸಹ ಕಾಣದಂತಾಗುತ್ತದೆ. ಕಡೆಗೆ,ಇಡೀ ಪ್ರಪಂಚದಲ್ಲಿ ಅವನೊಬ್ಬನೇ ತನ್ನ ಸಿಂಹಾಸನದೊಂದಿಗೆ ಉಳಿಯುತ್ತಾನೆ. ಅದು ಸಹ ಕಾಣದಂತಾಗುತ್ತದೆ.

ಈ ಅಸಂಗತ ನಾಟಕಗಳು, ಅಣಕದಿಂದ ಮನುಷ್ಯ ಜೀವನದ ಅಸಂಗತವನ್ನು ಬಯಲು ಮಾಡುತ್ತದೆ. ಮನಷ್ಯನ ಸ್ಥಿತಿ, ಮೂಢ ನಂಬಿಕೆಗಳು, ಇವುಗಳನ್ನು ಬಹಿರಂಗಗೊಳಿಸುತ್ತವೆ. ಈ ನಾಟಕಗಳು ಎಷ್ಟೇ ಅಪೂರ್ಣವೆನಿಸಿದರೂ, ಒಂದ ಕ್ಕೊಂದು ಸಂಬಂಧವಿಲ್ಲವೆಂದರೂ, ಮನುಷ್ಯನ ಸುಖದುಃಖಗಳನ್ನು ಎತ್ತಿ ತೋರಿಸು ತ್ತದೆ. ಇವು ಪ್ರೇಕ್ಷಕರಿಗೆ ಅಸಹ್ಯವಾಗಿ ತಲೆತಗ್ಗಿಸುವಂತಾದರೂ, ಮನುಷ್ಯ ಜೀವ ನದ ಮರ್ಮವನ್ನು ವಿವರಿಸುತ್ತವೆ.

ಕೇಶವ ಶರ್ಮ ಕೆ.

ಕೆರೂರ "ಮಲ್ಲೇಶಿಯ ನಲ್ಲೆಯರು"

"ಸಾಮಾನ್ಯವಾಗಿ ರಾಷ್ಟ್ರೀಯ ಆಂದೋಲನಗಳಲ್ಲಿ ಆ ನಾಡಿನ ಸಾಂಪ್ರದಾಯಿಕ ಮೌಲ್ಯಗಳ ಪುನರುತ್ಥಾನವೂ ನಡೆದಿರುತ್ತದೆ; ಗಾಂಧೀವಾದಿ ರಾಷ್ಟ್ರೀಯತಾ ಆಂದೋಲನದ ಆಯಾಮಗಳಲ್ಲಿ ಇದು ಮುಖ್ಯವಾದದ್ದು." (ಅಮೃತ ಮತ್ತು ಗರುಡ-- ಕುವೆಂಪು ಕೃತಿಗಳಲ್ಲಿ ವರ್ಣ – ವರ್ಗ ಸಂಘರ್ಷ : ಡಿ. ಆರ್ ನಾಗರಾಜ) ಇಡೀ ಭಾರತವು ಬ್ರಿಟಿಷ್ ಸಾಮ್ರಾಜ್ಯ ಶಾಹಿ ಜಗತ್ತಿಗೆ ಪ್ರತಿಕ್ರಿಯಿಸಿದ ರೀತಿಯು ನಮ್ಮೆಲ್ಲ ಸಾಹಿತ್ಯಿಕ, ಸಾಂಸ್ಕೃತಿಕ ಪ್ರಪಂಚಕ್ಕೆ ಇರಿಸಿದ ಕಾಣಿಕೆಯಾಗಿದೆ. ಬಹುಶಃ ಬ್ರಿಟಿಷ್ ಸಾಮ್ರಾಜ್ಯಶಾಹಿಯು ಭಾರತೀಯ ಸಂಸ್ಕೃತಿಯ ಮೇಲೆ ಇಟ್ಟ ದಾಳಿಯನ್ನು ಎದುರಿಸಿದಾಗಿನ ಸ್ಥಿತಿಯು ನಮಗೀಗ ರೋಮಾಂಚಕಾರಿಯೆನಿಸುತ್ತದೆ. ಆದರೆ, ಇಂಗ್ಲೀಷ್ ವಿದ್ಯಾಭ್ಯಾಸಕ್ಕೆ ತೆರೆದುಕೊಂಡ ವರ್ಗವು ಒಂದೆಡೆಯಿಂದ ಬ್ರಿಟೀಷ್ ಜಗತ್ತಿಗೆ ರೋಮಾಂಚಕವಾಗಿ ಮಾರುಗೊಂಡೂ ಇನ್ನೊಂದೆಡೆಯಿಂದ ಈ ಎಲ್ಲಾ ಅನುಭವಕ್ಕೆ ಒಗ್ಗಿಕೊಂಡು ಅದನ್ನೇ ನಿರಾಕರಿಸಿ ರಾಷ್ಟ್ರೀಯ ಆಂದೋಲನಕ್ಕೆ ಸಹಕಾರಿ ಯಾಗಿದ್ದುದರಿಂದ— ನಮ್ಮ ರಾಷ್ಟ್ರೀಯ ಆಂದೋಲನವು ಒಂದಲ್ಲ ಒಂದು ರೀತಿಯ ನಮ್ಮ ಆಗಿನ ಸಾಂಸ್ಕೃತಿಕ ಚಟುವಟಿಕೆಗಳಿಗೆ ಪ್ರೇರಕ ಶಕ್ತಿಯಾಗಿ ಕೆಲಸಮಾಡಿದೆ.

ಇಡೀ ಜೀವನ ನಿಯಂತ್ರಿಸಿರುವ ಈ ಹೋರಾಟವು ಹೆಚ್ಚು ಅರ್ಥ ಪೂರ್ಣವಾದ ನೆಲೆ ಯನ್ನು ಪಡೆದಿರುವುದು ಉಗ್ರಗಾಮಿಗಳಲ್ಲಿ. 'ಸ್ವತಂತ್ರ'ದ ಪರಿಕಲ್ಪನೆಯು ನೇರ ಮುಖಾಮುಖಿಯಾದ ಹೋರಾಟದ ಅನುಭವದಲ್ಲಿ ಪರ್ಯವಸಾನಗೊಂಡಿದ್ದರೆ, ಮಂದ ಗಾಮಿಗಳಲ್ಲಿ ಇದು ಈ ನೆಲದ ಒಟ್ಟು ಸಾಂಸ್ಕೃತಿಕ ಚಟುವಟಿಕೆಗಳ ಮೇಲೆಯೂ ಕೇಂದ್ರೀಕರಿಸಿರುವುದು ಸದ್ಯ ಗಮನಾರ್ಹವಾಗಿದೆ.

೧೮೫೦ರ ಹೊತ್ತಿಗೆ ರಾಜಾರಾಮ ಮೋಹನರಾಯ, ದಯಾನಂದ ಸರಸ್ವತಿ, ಗಾಂಧಿ ಯಂತಹ ವ್ಯಕ್ತಿಗಳು ಈ ರಾಷ್ಟ್ರೀಯ ಆಂದೋಲನವನ್ನು ಸಂಸ್ಕೃತಿಯ ಚಟು

ವಟಿಕೆಯಯತ್ತಲೂ ಲಕ್ಷ್ಯ ಹರಿಸಿರುವುದು ಈ ದೇಶದ ಸಾಂಸ್ಕೃತಿಕ ಪಲ್ಲಟದ ಬದಲಾವಣೆಗೆ ಸಾಕ್ಷಿಯಾಗಿವೆ. ಇಡೀ ದೇಶವೇ ಆರ್ಥಿಕವಾಗಿ ರಕ್ತಹೀನತೆಯಿಂದ ಬಳಲುತ್ತಿರುವಾಗಲೇ (ಅಂದರೆ ಮೊದಲನೇ ಮಹಾಯುದ್ಧದ ತರುವಾಯ ಬ್ರಿಟೀಷ್ ವಸಾಹತು ರಾಷ್ಟ್ರಗಳಲ್ಲಿ ಉಂಟಾದ ಮಹತ್ವದ ಬದಲಾವಣೆಯೆಂದರೆ ಆರ್ಥಿಕ ಸ್ವರೂಪದ್ದು.) ಆಗಿರುವುದದರಿಂದ ವರ್ಗಸಂಘರ್ಷದ ಕಲ್ಪನೆಯು ಇಲ್ಲಿಂದ ಪಲಾಯನ ಹೇಳಿದೆ. ಇಲ್ಲಿ ಗಮನಿಸತಕ್ಕ ಅಂಶವೆಂದರೆ ಈ ಆರ್ಥಿಕ ಮುಗ್ಗಟ್ಟಿನ ಬಳಲುವಿಕೆಯೇ ಇಲ್ಲಿಯ ರಾಷ್ಟ್ರೀಯವಾದಿ ಮನೋಭಾವಕ್ಕೆ ಮೂಲ ಪ್ರೇರಣೆಯಾಯಿತು. ಮೊದಲನೆಯ ಮಹಾಯುದ್ಧದ ಒಟ್ಟು ಪರಿಣಾಮವೆಂದರೆ, ವಸಾಹತು ರಾಷ್ಟ್ರಗಳಲ್ಲಿ — ಮತ್ತು ಅಲ್ಲಿಯ ವರ್ಗಗಳಲ್ಲಿ ಉಂಟಾದ ಪಲ್ಲಟ. ಈ ಉತ್ಪಾದನಾ ಸಂಬಂಧಗಳಲ್ಲಿ ಉಂಟಾದ ಬದಲಾವಣೆಯೇ ನಂತರ ನಮ್ಮ ದೇಶೀಯ ಸಾಂಸ್ಕೃತಿಕ ಪರಂಪರೆಯ ಚಲನೆಗೆ ಕಾರಣವಾಯಿತು. ಈ ಸಾಂಸ್ಕೃತಿಕ ಬದಲಾವಣೆಯ ಕೇಂದ್ರ ಬಿಂದುವಿರುವುದು ಉತ್ಪಾದನಾ ಸಂಬಂಧಗಳಲ್ಲಿ. ಈ ಆರ್ಥಿಕ ಶಿಥಿಲತೆಯ ಕಾರಣವಾಗಿ ಉಂಟಾಗಿರುವ ವರ್ಗದ ಸ್ಥಿತ್ಯಂತರವು ಕೂಡಾ ಸಾಂಸ್ಕೃತಿಕ ಸ್ವರೂಪದ ಬದಲಾವಣೆಗೆ ಕಾರಣವಾಗಿರುವುದರಿಂದ. ಈ ಸ್ಥಿತ್ಯಂತರವೇ ನಮ್ಮ ಸ್ವಾತಂತ್ರ್ಯದ ಉದಾರವಾದಿ ಹೋರಾಟಗಾರರಿಗೆ ಮುಖ್ಯ ಅವಕಾಶವನ್ನು ಕಲ್ಪಿಸಿತು. ಹೀಗೆಂದಾಗ, ನಮ್ಮ ಮನಸ್ಸಿನಲ್ಲಿ ಮತ್ತೆ ಮೂಡಿಬರುವುದು ಗಾಂಧಿ, ರಾಜಾರಾಮಮೋಹನ ರಾಯರಂತಹವರು. ಇವರು ಈ ರಾಷ್ಟ್ರೀಯವಾದವನ್ನು ಕಂಡುಹಿಡಿಯುವುದು ದೇಶೀಯ ಸಂಪನ್ಮೂಲಗಳನ್ನು ಹೆಚ್ಚಿಸುವಲ್ಲಿ: ಮತ್ತು ರಾಮರಾಜ್ಯವನ್ನು ಕಟ್ಟುವಲ್ಲಿ. ಇವರ ಪರಿಣಾಮವೆಂದರೆ, ರಾಜಾರಾಮ ಮೋಹನರಾಯರಂತವರು ಸತಿಸಹಗಮನ ವಿರುದ್ಧ ಹೋರಾಡುವುದರಲ್ಲಿ, ದಯಾನಂದ ಸರಸ್ವತಿಯವರು ಆರ್ಯ ಸಮಾಜದಂತಹ ವ್ಯವಸ್ಥೆಯನ್ನು ಕಟ್ಟುವಲ್ಲಿ ಮತ್ತೊಮ್ಮೆ ಚರಿತ್ರೆಯತ್ತ ಮುಖಮಾಡುತ್ತಾ ನಿಂತಿರುವುದು ಕಾಣಿಸುತ್ತದೆ. ಇಲ್ಲಿ ಸ್ಪಷ್ಟಪಡಿಸಬೇಕಾದ ಅಂಶವೆಂದರೆ, ಈ ದೇಶದ ಒಟ್ಟು ಮೂಢನಂಬಿಕೆಗಳ ವಿರುದ್ಧ ಸಮರ ಸಾರಿದ ಈ ಮಹಾನುಭಾವರ ಒಟ್ಟು ಹೋರಾಟವನ್ನು ಅಲ್ಲಗಳೆಯುತ್ತಿಲ್ಲ. ಆದರೆ, ಈ ಎಲ್ಲಾ ರಾಷ್ಟ್ರೀಯ ಉದಾರವಾದಿ ನಾಯಕರ ಚಿಂತನೆಗಳು ಹುಟ್ಟಿರುವುದು ಮತ್ತು ಇವರು — ರಾಷ್ಟ್ರೀಯ ಪರಿಕಲ್ಪನೆಗಳನ್ನು ಕುರಿತು ಆಡಿರುವುದು ಬ್ರಿಟೀಷ್ ರಾಜ್ಯದ ವಿರುದ್ಧವಾಗಿದ್ದರೂ— ಇವರ ಗಾಢ ಪರಿಣಾಮ ಉಂಟಾಗಿರುವುದು ಪಲ್ಲಟಗೊಂಡ ವರ್ಗವ್ಯವಸ್ಥೆಯಲ್ಲಿ ಎಂಬುದು ಮುಖ್ಯ.

ಗಾಂಧಿ ವಿಚಾರಧಾರೆಯಲ್ಲಿ-ಅವನ ಆದರ್ಶರಾಜ್ಯ ಕಲ್ಪನೆಯಲ್ಲಿ-ಮತ್ತೆ ತೊಡಗಿರುವುದು ಉಚ್ಚವರ್ಣದ ದೆಸೆಯೇ ಎಂಬುವನ್ನು ಅಲ್ಲಗಳೆಯುವ ಹಾಗಿಲ್ಲ. ಹೀಗಾಗಿ

ಅಂಬೇಡ್ಕರ್ ಗಾಂಧಿಯ ವಿರುದ್ಧ ಎತ್ತುವ ಪ್ರಶ್ನೆಗಳು ಕೇವಲ ರಾಜಕೀಯವಾದು ವಲ್ಲ. ಅವು ಇಡೀ ಸಂಸ್ಕೃತಿಯೊಂದು ಗಾಂಧಿಗೆ ಕೇಳಬೇಕಾದ ಪ್ರಶ್ನೆ.

ರಾಜಾರಾಮ ಮೋಹನರಾಯ್ ಮತ್ತು ದಯಾನಂದ ಸರಸ್ವತಿಯವರ ವಿಚಾರವಾಹಿನಿಯೂ ಕೂಡಾ ಬ್ರಿಟೀಷ್ ಕಂಪನಿಯ ಕೃಪೆಯಿಂದ ಹೆಚ್ಚು ಪ್ರಚಾರ ಪಡೆದಿರುವುದು ಇಲ್ಲಿ ಉಲ್ಲೇಖನೀಯ.

ಈ ಮೇಲಿನ ವಿಚಾರಗಳನ್ನು ಉಲ್ಲೇಖಿಸಿರುವುದು ಉದಾರವಾದಿ ನೆಲೆಯೊಂದು ಭಾರತದ ರಾಷ್ಟ್ರೀಯ ಚಿಂತನೆಗಳನ್ನು ನಿರ್ದೇಶಿಸಿದೆ ಎಂದು ಹೇಳುವುದಕ್ಕಾಗಿ. ಈ ಮುಂದಗಾಮಿ ಚಟುವಟಿಕೆಯು ಅತ್ಯಂತ ವ್ಯಾಪಕವಾಗಿ ಈ ನೆಲದ ಸಾಂಸ್ಕೃತಿಕ ಚಟುವಟಿಕೆಗಳತ್ತ ಬೇರು ಇಳಿಸಿರುವುದನ್ನು ಲಿಖಿತ ಪರಂಪರೆಯಲ್ಲಿ ನಾವು ಕಾಣುತ್ತೇವೆ.

ಲಿಖಿತ ಪರಂಪರೆಯೆಂದರೇ ನಾವು ಗ್ರಹಿಸಿಕೊಳ್ಳಲು ಸಾಧ್ಯವಾಗುವುದು; ಇದು ಅಕ್ಷರದೊಂದಿಗಿನ ಒಪ್ಪಂದ. ಅಮೂರ್ತ ಮತ್ತು ಮೂರ್ತಗಳ ನಡುವಿನ ಮೈತ್ರಿಯ ಸ್ವರೂಪದಲ್ಲಿ ಲಿಖಿತ ಪರಂಪರೆಯು ಮತ್ತು ಭಾರತದ ಮೇಲ್ವರ್ಗವು ಪರಸ್ಪರ ಹತ್ತಿರದ ಸಂಬಂಧ ಇಟ್ಟು ಕೊಂಡಿದೆ. ಮೊದಲಿಗೆ ಬ್ರಿಟೀಷ್ ವಿದ್ಯಾಭ್ಯಾಸ ಕ್ರಮ ಬಂದಾಗ ಈ ವರ್ಗವು ಸಂಸ್ಕೃತದಿಂದ ಇಂಗ್ಲೀಷ್ ವಿದ್ಯಾಭ್ಯಾಸದತ್ತ ಒಲಿದಿರುವುದು ಕೇವಲ ಭಾಷೆಯಿಂದ ಭಾಷೆಗೆ ವರ್ಗಾಂತರ ಹೊಂದಿರುವುದಷ್ಟೇ ಆಗಿದೆ. ಹೀಗಾಗಿ ಒಂದು ನಿರ್ದಿಷ್ಟ ವರ್ಗವು ಇಂಗ್ಲೀಷ್ ವಿದ್ಯಾಭ್ಯಾಸಕ್ಕೆ ಮನಸ್ಸು ತೆರೆದುಕೊಂಡುದರ ಫಲವಾಗಿ ಜ್ಞಾನದ ಶಾಖೆಯು ವಿಸ್ತೃತಗೊಂಡರೂ ಮತ್ತೆ ಒಟ್ಟು ಸಾಂಸ್ಕೃತಿಕ ಬಿಕ್ಕಟ್ಟಿಗೆ, ಸಾಮಾಜಿಕ ಜಂಜಾಟಕ್ಕೆ ಉತ್ತರವನ್ನು ವೈದಿಕ ಪರಂಪರೆಯಲ್ಲಿಯೇ ಹುಡುಕಿರುವ ಯತ್ನವು ನಮ್ಮನ್ನು ಚಕಿತಗೊಳಿಸುತ್ತದೆ. ಸುಸಂಸ್ಕೃತವೆಂದುಕೊಂಡುದರ ಫಲವನ್ನು ಸಾಂಸ್ಕೃತಿಕ ಕ್ಷೇತ್ರವು ಉಣ್ಣಬೇಕಾಯಿತು; ಇರಲಿ.

ಇಂಗ್ಲೀಷ್ ವಿದ್ಯಾಭ್ಯಾಸಕ್ಕೆ ಬೇಗ ಒಲಿದಿರುವುದು ಮೇಲುಜಾತಿಯ ಜನ. ಈಗಾಗಲೇ ಉಲ್ಲೇಖಿಸಿರುವ ಆರ್ಥಿಕ ಮುಗ್ಗಟ್ಟು ೧೮೩೦ ರ ವೇಳೆಗೆ ಭಾರತದ ಒಟ್ಟು ಸಾಮಾಜಿಕ ಪರಿಸ್ಥಿತಿಯಲ್ಲಿ ಹತಾಶೆಯನ್ನು ಒದಗಿಸಿತ್ತು. ಈ ಹತಾಶೆಗೆ, ಈ ಉಧ್ವಸ್ತಗೊಂಡ ಸ್ಥಿತಿಗೆ, ಅಷ್ಟೇ ಅಲ್ಲ, ಸ್ವತಂತ್ರವಾಗುವ ಕನಸಿಗೆ ಮೇಲು ಮಧ್ಯಮ ವರ್ಗವು ತುತ್ತಾದ್ದರಿಂದ; ಸಾಮಾಜಿಕ ರೋಗದಿಂದ ವಿಮುಕ್ತಗೊಳ್ಳುವ ರಾಷ್ಟ್ರೀಯ ಭಾವನೆಗಳನ್ನು ಉಕ್ಕಿಸುವ ಭಾವನಾತ್ಮಕ ನಿಲುವನ್ನು ಈ ವಿದ್ಯಾವಂತ ಮೇಲ್ಜಾತಿಯ ಚಿಂತಕ ವರ್ಗವು ದ್ವಂದ್ವಪೂರ್ಣವಾಗಿ ಎದುರಿಸಬೇಕಾಯಿತು.

ಈ ಹತಾಶವಾದ ಮನೋಭಾವವನ್ನು ಹೆಚ್ಚು ಉದ್ವಿಗ್ನಪೂರ್ಣವಾಗಿ ಸ್ವೀಕರಿಸಿದ ಸಾಂಸ್ಕೃತಿಕ ಕ್ಷೇತ್ರವಲ್ಲಿ 'ವಿಧವಾ ವಿವಾಹ' 'ಹರಿಜನೋದ್ಧಾರ'ದ ಕನಸು ಅತ್ಯಂತ

ಅರ್ಥಪೂರ್ಣವಾದ ಕೆಲಸವನ್ನು ಮಾಡಿತ್ತು. ಗಮನಿಸಿ: ಈ 'ರಾಷ್ಟ್ರೀಯ'ದ ಭಾವನಾತ್ಮಕ ನಿಲುವೇ ಹೆಚ್ಚು ಮುಖ್ಯವಾದ ಪ್ರಚೋದನೆಯಾಗುವುದಕ್ಕೆ ಹಿನ್ನೆಲೆಯಿದು.

ಬರಹದ ಕುರಿತಂತೆ ಹೇಳಿದೆ. ಅಕ್ಷರ ಪರಂಪರೆಯು ಅರ್ಥ ಅಮೂರ್ತವನ್ನು ಅರ್ಥ ಮೂರ್ತವನ್ನು ಕಡೆದು ನಿಲ್ಲಿಸುತ್ತದೆ. ಅಕ್ಷರದ ಸಂವಹನವು ಹೆಚ್ಚು ಅರ್ಥಪೂರ್ಣವಾಗುವುದು, ಓದುಗನಲ್ಲಿ ಆಗಿರುವುದರಿಂದ ಅದರ ಪರಿಣಾಮದ ನೆಲೆಯೇ ಓದುಗರ ಮನಸ್ಸಿನ ಮೇಲೆ. ಬರಹದ ಒಟ್ಟು ಉದ್ದೇಶವೇ ಇದಾಗಿರುವುದರಿಂದ ಈ ಮೊದಲು ಮಂಡಿಸಿದ ಅನೇಕ ಭಾವನಾತ್ಮಕವಾದ ನಿಲುವುಗಳು ಸಾಹಿತ್ಯ ಕ್ಷೇತ್ರದಲ್ಲಿ ಧಾಳಿಯಿಟ್ಟವು. ಬರೆಯುವುದೇ ಕ್ರಾಂತಿಯಾಗಿದ್ದ ಸನ್ನಿವೇಶವದು. ನಿರ್ದಿಷ್ಟ ಗುರಿಯನ್ನು ತಲುಪುವುದಕ್ಕೆ ಸಾಹಿತ್ಯವು ಮುಖ್ಯವಾದ ಕ್ಷೇತ್ರವಾಯಿತು. ಅದರ ಕಲಾತ್ಮಕವಾದ ಮಟ್ಟವನ್ನು ಹೇಳುತ್ತಿಲ್ಲ. ಬ್ರಿಟೀಷ್ ವಿರುದ್ಧದ ಹೋರಾಟದಲ್ಲಿ ಸಾಮಾಜಿಕ ಪಿಡುಗನ್ನು ಹೋಗಲಾಡಿಸುವಲ್ಲಿ ಮೇಲು ಮಧ್ಯಮ ವರ್ಗವನ್ನು ಚೆನ್ನಾಗಿಯೇ ಬಳಸಿಕೊಳ್ಳಲಾಯಿತು.

ಕಲೆಯ ಯಾವುದೇ ಪ್ರಕಾರವು ಮಧ್ಯಮ ವರ್ಗಕ್ಕೆ ತಲುಪುವಷ್ಟು, ಮತ್ತು ಆ ವರ್ಗವನ್ನು ತಲ್ಲಣಗೊಳಿಸುವಷ್ಟು ಇನ್ಯಾವ ವರ್ಗಕ್ಕೂ ತಲುಪುವುದಿಲ್ಲ ಮತ್ತು ತಲ್ಲಣಗೊಳಿಸುವುದಿಲ್ಲ. ಅಕ್ಷರದ ಕ್ರಾಂತಿಯು ಈ ದೇಶದಲ್ಲಿ ಆಗಿದ್ದ ಹೊತ್ತಿನಲ್ಲಿ ಈ ಮಧ್ಯಮವರ್ಗವು ಹೊಸತಾಗ ಬಯಸಿ, ಹಳೆಯ ಜೀವನ ಶ್ರದ್ಧೆಗೆ ಮಾಗಿದ್ದನ್ನು ನಾವು ಕಾಣುತ್ತೇವೆ. ಅದನ್ನು ಬಿಟ್ಟರೆ ಇನ್ನೊಂದು ಅಂಶದತ್ತ ಗಮನ ಸೆಳೆಯಬಹುದು. ಈ ರೀತಿಯ ಬರಹಗಾರರು ಮತ್ತೆ 'ಆದರ್ಶ'ದ ಸ್ವಾತಂತ್ರ್ಯದ ಕುರಹು ಮತ್ತು ಕನಸುಗಾರಿಕೆಯ ಮೂಲಕ ತಮ್ಮ ಬರಹಗಳ ವಿಸ್ತಾರವನ್ನು ಸ್ಥಾಪಿಸಲೆಳಸಿದ್ದು ಕಾಣುತ್ತೇವೆ. ಕನ್ನಡದ ಅರುಣೋದಯ ಕಾಲದ ಬರಹಗಾರರು ತಮ್ಮೆದುರಿನ ನಿಷ್ಠುರ ಅನುಭವವನ್ನು ಮತ್ತು ಆದರ್ಶದ ಮಟ್ಟವನ್ನು. ಸಾಮಾಜಿಕ ಸುಧಾರಣೆಯ ಹಂಬಲವನ್ನು ವ್ಯಕ್ತಪಡಿಸುತ್ತಿರುವಂತೆಯೇ ಈ ಕಾಲದ ಸೃಜನಾತ್ಮಕ ಬರಹಗಳ ಚೌಕಟ್ಟು ಕೂಡಾ ಹೆಚ್ಚು ಪ್ರತಿಕ್ರಿಯಾತ್ಮಕವಾಗಿರುವುದು ಈ ದೇಶದ ಒಟ್ಟಾರೆ ಸ್ಥಿತಿಯಸೂಚಕಗಳು. ಬರಹಗಾರರು ತಮ್ಮ ಬರಹಗಳನ್ನು ನಿರೂಪಿಸುವಾಗಿನ ತಮ್ಮ ಸಾಮಾಜಿಕ ಜವಾಬ್ದಾರಿಯನ್ನು ಅತ್ಯಂತ ಎಚ್ಚರಪೂರ್ಣವಾಗಿ ಕಲೆಯೊಂದಿಗೆ ಒಪ್ಪಂದ ಮಾಡಿಕೊಂಡು ಬಂದವಾದರೂ ಆ ಹೊತ್ತಿಗಿನ ಕವಿತೆಗಳು, ಕತೆ, ಕಾದಂಬರಿಗಳು ನಿಷ್ಠುರವಾಸ್ತವವನ್ನು, ಭಾವನಾತ್ಮಕ ಒಲವುಗಳಲ್ಲಿ ಹೊಂದಾಣಿಕೆ ಮಾಡಿಕೊಂಡವು. ಈಗಾಗಲೇ ಹೇಳಿರುವ ಹಾಗೆ ಅಕ್ಷರದೊಂದಿಗಿನ ಒಪ್ಪಂದವು ಸತ್ಯವನ್ನು ಪೂರ್ಣವಾಗಿ ಹೇಳುವುದಿಲ್ಲ. ಸತ್ಯ ಮತ್ತು ಮಿಥ್ಯೆಗಳ ಪರಸ್ಪರ ಹೋರಾಟವೇ ಕಾವ್ಯವಾಗುತ್ತದೆ: ಕಥೆಯಾಗುತ್ತದೆ.

ಹೀಗಾದಾಗ ಏನಾಗುತ್ತದೆ ? ಯಾವುದೇ ಪಠ್ಯವೂ ಕೂಡಾ ವಾಸ್ತವದಿಂದ ಪಲಾಯನ ಹೇಳುವ ಮಂತ್ರವಾಗುತ್ತದೆ. ಸಂಸ್ಕೃತಿಯ ಕಷ್ಟಗಳಿಂದ ಪಾರಾಗಲು, ಹಿಂಸೆಯ ವಿರುದ್ಧ ಜಗಳವಾಡಲು, ಅಮೂರ್ತದಿಂದ ಮೂರ್ತಕ್ಕೆ ಬರಲು ಬರಹಗಾರ ತನ್ನ ಪಠ್ಯವನ್ನು ಮಾಧ್ಯಮವಾಗಿ ಬಳಸಿಕೊಳ್ಳುತ್ತಾನೆ. ಈ ಪಠ್ಯಗಳೆಲ್ಲವೂ ಅವನ ಭಾವನಾತ್ಮಕ ನಿಲುವಿನ ಪ್ರತೀಕಗಳಾದರೂ, ತಾನೊಪ್ಪಿಕೊಂಡ ಜೀವನ ಮೌಲ್ಯ ಗಳನ್ನು ಆ ಪಠ್ಯದೊಳಗಡೆ ತರಲು ಯತ್ನಿಸುತ್ತಾನೆ; ಹೆಣಗಾಡುತ್ತಾನೆ. ಅದು ಹೆಚ್ಚು ಸ್ಪಷ್ಟವಾಗಿ ತನ್ನೊಳಗೇ ತಿಳಿದಿದ್ದಾಗ ಬರಹಗಾರ ತನ್ನೊಳಗಿನ ಸತ್ಯದೊಂದಿಗೆ ಆ ಪಠ್ಯದಲ್ಲಿ ಪ್ರತ್ಯಕ್ಷವಾಗಿ ಬರುತ್ತಾನೆ. ಅಥವಾ ಯಾವುದಾದರೊಂದೆಡೆಯಲ್ಲಿ ಅಂದರೆ: ಭಾಷೆಯಲ್ಲಿ, ಪಾತ್ರದಲ್ಲಿ, ಅದರ ವಿವರಣೆಯಲ್ಲಿ ಬಂದೇ ಬರುತ್ತಾನೆ. ಇಷ್ಟೆಲ್ಲವನ್ನು ಹೇಳುವುದಕ್ಕೆ ಕಾರಣವಿದೆ; ಕನ್ನಡ ಅರುಣೋದಯ ಕಾಲದ ಬರಹಗಾರರು ಗಾಢ ವಾಗಿ ತಮ್ಮೆಲ್ಲ ನಂಬಿಕೆಗಳನ್ನು ಬಳಸಿಕೊಂಡು ಬರಹದ ನಿರೂಪಣೆಯನ್ನು ವಿವರಣಾ ತ್ಮಕ ಬಂಧದಲ್ಲಿ ರೂಪಿಸಿಕೊಂಡರು. ಈ ವಿವರಣಾತ್ಮಕ ಬಂಧಕ್ಕೂ ಜೀವನ ವಿಧಾನಕ್ಕೂ ಸಂಬಂಧವಿರಬಹುದೆ ? ಮತ್ತು ಈ ಬಂಧವು ಮತ್ತೆ ಜನಪದ ಕಥಾನಕ ಪರಂಪರೆಯ ರೀತಿಯಲ್ಲಿ ಪೋಂದಾಣಿಕೆ' ಮಾಡಲು ಕಾರಣವೇನಿರಬಹುದು ? ಈ ರೀತಿಯ ವಿವರಣಾತ್ಮಕವಾದ ಥಾಗೆಯೇ ಸರಳವಾದ ಬಂಧದ ಕೃತಿಗಳು ನಾಗರಿಕ ಜಗತ್ತಿಗೆ, ಯಾಂತ್ರಿಕ ಜಗತ್ತಿಗೆ ಪ್ರತಿರೋಧವಾಗಿ ಮಗ್ಗುಲು ಬದಲಿಸಿಕೊಂಡ ರೀತಿಯೇ ? ಮತ್ತೆ ಪುನಃ ಪ್ರಕೃತಿಗೆ ಮರಳುವ ಯತ್ನವಲ್ಲವಷ್ಟೆ ? ಈ ರೀತಿಯ ಕೆಲವು ಪ್ರಶ್ನೆಗಳು ನಮಗೆ ಅರುಣೋದಯ ಕಾಲದ ಬರಹಗಳನ್ನು ಓದುವಾಗ ನಮಗೆ ಉದ್ಭವಿಸುತ್ತದೆ.

೨

ಐತಿಹ್ಯಗಳ ಸ್ವರೂಪದ ಬಗೆಗೆ ಚರ್ಚೆಗಳನ್ನು ಎತ್ತುತ್ತಾ ಲೆವಿಸ್ಟ್ರಾಸ್ ಐತಿಹ್ಯಗಳು ಒಂದು ಜನಾಂಗದ ಸುಪ್ತಪ್ರಜ್ಞೆಯ ಕನಸಿನ ಸಂಕೇತಗಳು, ಮತ್ತು ಅವುಗಳು ಐತಿಹ್ಯ ದಲ್ಲಿ ರೂಪು ಪಡೆದಾಗ ವಿವರಣಾತ್ಮಕ ಬಂಧದಲ್ಲಿರುತ್ತವೆ. ಇವು ವಿರೋಧಿ ಜಗತ್ತಿನ ಕುರಿತಂತೆ ಪ್ರತಿರೋಧ ಮಾತುಗಳನ್ನು ಆಡುತ್ತವೆ—ಎಂದ ನೆನಪು. ಕತೆಯ ಆಕೃತಿ ಯನ್ನು ಅರ್ಥಮಾಡಿಕೊಳ್ಳುವಾಗ ಅದುವೇ ಅಂತಿಮ ತೀರ್ಮಾನವೆಂದು ಇಲ್ಲಿ ಹೇಳು ತ್ತಿಲ್ಲ. ಕತೆಯ ಆಕೃತಿಯೂ ಮತ್ತೆ ಒಳಗಿನ ವಸ್ತುವಿಗೆ, ಆಶಯಕ್ಕೆ ಪೂರಕವಾಗಿರು ತ್ತದೆ. ಇದು ಸಾಮಾನ್ಯವಾಗಿ— ಉತ್ಪಾದನಾ ಸಂಬಂಧಕ್ಕೆ ಅನುಗುಣವಾಗಿ ಹುಟ್ಟಿ ಕೊಳ್ಳುವ ಸಾಂಸ್ಕೃತಿಕ ಸ್ವರೂಪದ ಹಾಗೆ ಇರುತ್ತವೆ. `ಮಲ್ಲೇಶಿಯ ನಲ್ಲೆಯರು' ಕತೆಯ ಆಕೃತಿಯು ಜನಪದ ಕತೆಯ ಆಕೃತಿಯ ಮಾದರಿಯಲ್ಲಿವೆ. ಜನಪದ ಕತೆಯಲ್ಲಿ ಹೆಚ್ಚು ಸಂಕೀರ್ಣವಾದ ಬಂಧಗಳು ಇರುವುದಿಲ್ಲ ಎನ್ನುವುದನ್ನು ನಿಮ್ಮ ಮನಸ್ಸಿಗೆ ತರುತ್ತೇನೆ. ನಾಯಕನು ವಾಸ್ತವದ ಪ್ರತಿನಿಧಿಯಾಗಿರುತ್ತಾನೆ. ಬಳನೆಯೆಗ್ಗಿಯು

ಕೂಡಾ ಹೆಚ್ಚು ಸಂಕೀರ್ಣವಾಗದೇ ಇರುವುದರಿಂದ, ಕತೆಯ ಒಟ್ಟು ಆಕೃತಿಯೂ ಕೂಡಾ ಸಂವಹನಕ್ಕೆ ಮುಖ್ಯ ಮಾಧ್ಯಮವಾಗಿರುತ್ತದೆ. ಜನಪದ ಕತೆಯಲ್ಲಿ ಆಶಯವು ಪಾತ್ರದೊಂದಿಗೆ ವರ್ಗಾವಣೆ ಹೊಂದಿ ಮತ್ತೆ ಅದು ಆಕೃತಿಯೊಂದಿಗೆ ತನ್ನ ತಾತ್ವಿಕ ನೆಲೆಗಳನ್ನು ವರ್ಗಾವಣೆ ಮಾಡುತ್ತದೆ. ಇಷ್ಟು ಹೇಳುವುದಕ್ಕೆ ಮುಖ್ಯ ಕಾರಣ: 'ಮಲ್ಲೇಶಿಯ ನಲ್ಲೆಯರ' ಕತೆಯ ಆಕೃತಿಯು ತಟ್ಟನೆ ನಮಗೆ ಜನಪದ ಕತೆಯ ಆಕೃತಿಯ ಮಾದರಿಯಲ್ಲಿಯೇ ಕಾಣಿಸುತ್ತದೆ.

ಈ ಕತೆಯ ಬಂಧವು ಅತ್ಯಂತ ಸರಳವಾಗಿದೆ. ಅಷ್ಟೇ ಅಲ್ಲ, ಈ ಕತೆಯು ವಿವರಣಾತ್ಮಕವಾಗಿದೆ. ಕತೆಯು ಪ್ರಾರಂಭವಾಗುವ ರೀತಿಯನ್ನು ಗಮನಿಸಿ : "ಹೇಮರೆಡ್ಡಿ ಪ್ರಭುಗಳು ಒಂದು ಊರಿನ ದೇಸಾಯರು. ಆ ಗ್ರಾಮದ ಉತ್ಪನ್ನವು ಆರೇಳು ಸಾವಿರ ರೂಪಾಯಿ ಇರುವುದಲ್ಲದೆ ದೇಸಾಯರಿಗೆ ತೋಟಪಟ್ಟಿ ಮನೆಯ ಒಕ್ಕಲುತನಗಳಿಂದಲೂ ಪ್ರಾಪ್ತಿಯು ಚೆನ್ನಾಗಿತ್ತು. ಅವರೊಂದುದಿನ ತಮ್ಮ ತೋಟವನ್ನು ನೋಡಲಿಕ್ಕೆ ಹೋದಾಗ ಅಲ್ಲಿಯ ಕಾವಲುಗಾರನಾದ ಮಲ್ಲೇಶಿಯು ತನ್ನ ಯ-ಜಮಾನರನ್ನು ತೋಟದಲ್ಲೆಲ್ಲಾ ಅಡ್ಡಾಡಿಸಿಕೊಂಡು ಬಂದನು. ಮಲ್ಲೇಶಿಯ ದಕ್ಷತೆಗಾಗಿ ಆ ತೋಟದಲ್ಲಿ ಕಾಗೆ ಗುಬ್ಬಿಗಳು ಕೂಡಾ ಅಡ್ಡಹಾಯುತ್ತಿರಲಿಲ್ಲ. ತೋಟದ ಬೇಲಿಗಳು ಅಚ್ಚಳಿಯದೆ ಕೋಟೆಯ ಗೋಡೆಗಳಂತೆ ಭದ್ರವಾಗಿ ಕಂಗೊಳಿಸುತ್ತಿದ್ದವು.

(ಮಲ್ಲೇಶಿಯ ನಲ್ಲೆಯರು--- ಪು. ೨)
ಸಣ್ಣ ಕಥೆಗಳ ಸಂಕಲನ, ವಿಶ್ವ ಕನ್ನಡ ಸಮ್ಮೇಳನ ಸಾಹಿತ್ಯಮಾಲೆ
೧೧೭. ಸಂ. ಗಿರಡ್ಡಿ ಗೋವಿಂದರಾಜ.

ಈ ವಿವರಣೆಯ ಒಟ್ಟು ಪ್ರಾರಂಭವೇ ಜನಪದ ಕಥನ ಪರಂಪರೆಯ ಸಂವಿಧಾನದಲ್ಲಿದೆ ಇದೊಂದು ಮುಖ್ಯವಾದ ಅಂಶವಾಗಿದ್ದರೆ. ಕತೆಯು ಅಂತ್ಯಗೊಳ್ಳುವುದು ಹೀಗೆ — "...ಮಲ್ಲೇಶಿಯನ್ನು ಓರೆಕಣ್ಣಿನಿಂದ ನೋಡುತ್ತ ಬರುವ ಗಿರಿಜಾಬಾಯಿಯನ್ನು ನೋಡಿ ದೊರೆಸಾನಿಯವರು ನಕ್ಕರು. ಜಾಣರು ಮತ್ತಿನ್ನೆಷ್ಟು ಪರೀಕ್ಷೆ ಮಾಡಿ ನೋಡುವರು? ಎಲ್ಲರಿಗೂ ಬೇಕಾದ ಮಾತಿದು. ಅಂದಮೇಲೆ ಗಿರಿಜಾ ಮಲ್ಲೇಶ್ವರರ ಕಲ್ಯಾಣೋತ್ಸವವು ಬೇಗನೆ ಆಗಿಹೋಯಿತು.

—(ಪುಟ ೨೦), ಅದೇ ಸಂಪುಟ.

ಕತೆಯು ಕೊನೆಗೊಳ್ಳುವುದು ಮಲ್ಲೇಶಿಯ ಕಲ್ಯಾಣ ಮಹೋತ್ಸವದಲ್ಲಿ. ಈ ಕಲ್ಯಾಣ ಮಹೋತ್ಸವದ ಒಟ್ಟು ಕಲ್ಪನೆಯನ್ನು ಕನ್ನಡದ ಅರುಣೋದಯದ ಹೆಚ್ಚಿನ ಕವಿತೆಗಳು ಕಂಡಿವೆ. ಕಾಲದ ಹಿನ್ನೆಲೆಯಿಂದ ಲಕ್ಷಿಸುವುದಿದ್ದರೆ ಇದು ಆ ಕಾಲದ ಕನಸು. ರೋಮಾಂಚನ ಗೊಳಿಸುವ ಆದರ್ಶ. ಹೀಗಾಗಿ, ಆದಿ ಮತ್ತು ಅಂತ್ಯ ಈ ಕಾಲದ

ಕತೆಗಳಲ್ಲಿ ಏಕರೂಪಶಿಲ್ಪವನ್ನು ಹೊಂದಿಕೊಂಡ ಹಾಗೆ ಕಾಣುತ್ತವೆ. ಕತೆಯ ಒಟ್ಟು ಲಕ್ಷ್ಯವನ್ನು ಹೆಚ್ಚು ಸುಖಾಂತ ಗೊಳಿಸುತ್ತವೆ. ಇದು ಆಕೃತಿಯ ನಿರ್ಣಯಕ್ಕೆ ಸಹಾಯಕವಾಗುವ ಅಂಶಗಳಾಗಿವೆ. ಬದುಕಿನ ಒಟ್ಟು ಸಂಘರ್ಷವನ್ನು ದೂರವಿಟ್ಟು ಕಲ್ಯಾಣದ ಸುಖವನ್ನು ಕಂಡುಕೊಳ್ಳುವ ಈ ಉತ್ತರವು ಭೌತಿಕ ಪ್ರಪಂಚವನ್ನು ನಿರ್ಲಕ್ಷಿಸುವ ತಂತ್ರವಾಗಿದ್ದರೂ, ಇದನ್ನು ನೇರವಾಗಿ ಅಷ್ಟೇ ಎಂಬ ಸರಳವಾದ ನಿರ್ಣಯಕ್ಕೆ ನಾವು ಬರುವ ಹಾಗಿಲ್ಲ. ಯಾಕಂದರೆ ಸುಖದ ಕಲ್ಪನೆಯೇ ಭಾರತೀಯ ಮನೋಸ್ಥಿತಿಯ ಆದರ್ಶದ ಮಟ್ಟವಾಗಿದೆ. ವಾಸ್ತವವನ್ನು ಕತೆಯೊಳಗಡೆ ತಂದು ಅದರೊಂದಿಗೆ ಜೀವನ ಒಟ್ಟು ಸಂಘರ್ಷಕ್ಕೆ ಆಶಾದಾಯಕವಾದ ಉತ್ತರವನ್ನು ಕಂಡು ಕೊಳ್ಳುವುದಿದೆಯಲ್ಲ—ಇದು ಜಡದಿಂದ ಚಲನೆಯ ಜಗತ್ತಿಗೆ; ಮತ್ತು ಸಾವಿನಿಂದ ಮುಕ್ತ ಜೀವನದ ಸ್ಥಿತಿಗೆ ಮರಳುವ ರೀತಿಯಾಗಿದೆ. ಈ ಕತೆಯನ್ನು ನೋಡಿ, ಇಲ್ಲಿ ಮಲ್ಲೀಶಿಗೆ ಕೊನೆಗೆ ಮದುವೆಯಾಗುತ್ತದೆ. ಅಂದರೆ: ಕಲ್ಯಾಣ ಉತ್ಸವವು ಜರುಗುತ್ತದೆ. ಈ ಕಲ್ಯಾಣದ ಉತ್ಸವವು ಮತ್ತೆ ಅದಮ್ಯ ಜೀವನಕ್ಕೆ ಮರಳುವ ರೀತಿ. ಇದು ಕತೆಯು ಹೇಳುವ ಒಟ್ಟು ಆಶಾದಾಯಕ ನಿಲುವು.

ಇದರಿಂದ ಕತೆಯ ಆಕೃತಿಯು ನಿಯತಿಯಿಂದ ಹೊರಟು ಮತ್ತೆ ನಿಯತಿಗೆ ಬಂದು ನಿಲ್ಲುತ್ತದೆ. ಗಾಲಿಯ ಮಾದರಿಯ ಈ ವಿನ್ಯಾಸವು ಕೇಂದ್ರ ತಾತ್ವಿಕತೆಯ ಬಿಂದುವಿನ ಸುತ್ತವೇ ಸುತ್ತುತ್ತವೆ ಎನ್ನುವುದನ್ನು ಮರೆಯುವ ಹಾಗಿಲ್ಲ.

"ಸಣ್ಣಕತೆ ಒಂದು ರಸಬಿಂದು; ಒಂದು ರಸದ ಗಟ್ಟಿ, ಅದರ ಗುರಿ-ಸೂಜಿಯ ಮೊನೆಯಂತೆ ಚೂಪು. ಅದರ ಶೈಲಿಯ ವೇಗ ಜೂಜಿನ ಕುದುರೆಯ ನಾಗಾಲೋಟ."
(ವಾಸುದೇವ ಪ್ರಶಸ್ತಿ—ಕೆ.ಡಿ. ಕುರ್ತಕೋಟಿ (ಸಂ) ೧೯೬೪ ಆಚಾರ್ಯರ ಸಣ್ಣಕಥೆಗಳು ಕೃಷ್ಣಮೂರ್ತಿ ಪುರಾಣಿಕ. ಪು. ೨೧೬)

ಸಣ್ಣಕತೆಯ ಕುರಿತು ಬಂದಿರುವ ಈ ಅಭಿಪ್ರಾಯವನ್ನು ನೋಡೋಣ—ಸಣ್ಣಕತೆಯು ಒಂದು ರಸದ ಬಿಂದು. ಜೀವನದ ಒಂದು ಅನುಭವವನ್ನು ಮಾತ್ರ ಸಣ್ಣಕತೆಯು ತನ್ನ ಮಿತಿಯೊಳಗೆ ಅಳವಡಿಸುತ್ತದೆ. ಅದರ ಒಟ್ಟು ತಾತ್ವಿಕನೆಲೆಯನ್ನು ಸೂಚಿಸು ಮೊನೆಯಂತೆ ಅದರಸ್ವರೂಪವು ಚುಚ್ಚುತ್ತದೆ. ಕತೆಗೆ ಹೆಚ್ಚು ತೀವ್ರವಾದ ಚಲನೆಯಿರುತ್ತದೆ. ಚಲನಶೀಲತೆಉಳ್ಳ ಸಣ್ಣಕತೆಯು ತನ್ನ ಮಿತಿಯುಳ್ಳ ಆಕೃತಿಯೊಳಗೆ ಜೀವನದ ಕೆಲವಂಶವನ್ನು ಸ್ಪರ್ಶಿಸಲು ಸಾಧ್ಯವಾಗುತ್ತದೆ. ತುಂಬಾ ಮಿತಿಯುಳ್ಳ ಸ್ವರೂಪವು ಸಣ್ಣಕತೆಯಾಗುವುದರಿಂದ ತರ್ಕದ ಸಾಧ್ಯತೆಯು ತುಂಬಾ ಕಡಿಮೆಯಾಗುತ್ತದೆ.

ಇದೇ ಕತೆಯು ಕೇಂದ್ರೀಕೃತಗೊಂಡಿರುವುದು ಮಲ್ಲೇಶಿಯ ಬದುಕಿನಲ್ಲಿ. ಈ ಮಲ್ಲೇಶಿಯು ಹೇಮರೆಡ್ಡಿ ದೇಸಾಯಿಯ ಊಳಿಗದ ವ್ಯಕ್ತಿ. ತನ್ನ ಕಾಯಕದಲ್ಲಿ ಪ್ರಾಮಾಣಿಕನಾದ ಈ ವ್ಯಕ್ತಿಯ ಕುರಿತೇ ಕತೆಯನ್ನು ಹೆಣೆಯಲಾಗಿದ್ದರೂ ಅವನ ವ್ಯಕ್ತಿತ್ವದ ಪ್ರತಿಪಾದನೆಗೆ ಹೇಮರೆಡ್ಡಿ ದೇಸಾಯಿ; ಇರಸಂಗಯ್ಯನ ಮಗಳು; ಛಾಯವ್ವ ಮೊದಲಾದವರು ಬರುತ್ತಾರೆ. ಅಂದರೆ ಕತೆಯ ಸ್ವರೂಪದೊಳಗಡೆ ಮಲ್ಲೇಶಿಯು ಮುಖ್ಯ ನಾಯಕನ ಪಾತ್ರವನ್ನು ವಹಿಸುತ್ತಾನೆ. ಇವನನ್ನು ಬಳಸಿಕೊಳ್ಳುವ ಹೇಮರೆಡ್ಡಿ ದೇಸಾಯಿ ಮತ್ತು ಅವನ ವರ್ತನೆ: ಹೊರಳುವಿಕೆಯ ನುಡಿಯು ಬಂಡವಾಳಶಾಹಿ ಜಗತ್ತಿನ ಪ್ರತೀಕವಾಗುತ್ತದೆ. ಈ ರೀತಿಯ ಬಂಡವಾಳಶಾಹಿಯು (ಅರೆ ಬಂಡವಾಳಶಾಹಿ)ಜೀತಪದ್ಧತಿಯನ್ನು ಉಳಿಸಿಕೊಂಡು ಬಂದಿರುವುದಕ್ಕೆ ಉದಾಹರಣೆಗಳು ಸಾಕಷ್ಟು ಸಿಗುತ್ತದೆ. ತನ್ನ ಲಾಭಕಾಗಿ ಮಲ್ಲೇಶಿಯಂತಹ ಜೀತದಾಳುಗಳನ್ನು ದುಡಿಸಿಕೊಳ್ಳುವ, ಅದೇ ಪದ್ಧತಿಯನ್ನು ಉಳಿಸಿ ಕೊಂಡು ಬರುವುದರ ಮೂಲಕ ತನ್ನ ಸ್ವತ್ತನ್ನು ಹೆಚ್ಚು ಕೇಂದ್ರೀಕರಣಗೊಳಿಸುವ ಒಡೆಯನ ಬುದ್ಧಿ'ಯ ಪ್ರತಿಬಿಂಬವನ್ನು ಹೇಮರೆಡ್ಡಿ ದೇಸಾಯಿಯಲ್ಲಿ ಕಾಣಬಹುದಾಗಿದೆ. ಕತೆಯಲ್ಲಿ ಮಲ್ಲೇಶಿಯು ವ್ಯವಸ್ಥೆಯನ್ನು ಒಪ್ಪಿಕೊಳ್ಳುವವನು. ಈ ವ್ಯವಸ್ಥೆಯ ವಿರುದ್ಧ ಹೋರಾಡುವ ಅಥವಾ ಸಂಘರ್ಷದ ಚಿತ್ರಣವಿಲ್ಲ. ಸಂಘರ್ಷದಮುಖಾ ಮುಖಿಯಾಗಬೇಕಾದ ನೆಲೆಯನ್ನು ಬರಹಗಾರರು. ತಪ್ಪಿಸಿದ್ದಾರೆ. ಈ ಆಕ್ಷೇಪವನ್ನು ಆಕಾಲದ ಸಾಮಾಜಿಕತೆಯೊಂದಿಗೆ ಇಟ್ಟು ಚರ್ಚೆಯನ್ನು ಎತ್ತಬಹುದು :

ಈಗಾಗಲೇ ಗುರುತಿಸಿರುವ ಸಾಂಪ್ರದಾಯಿಕ ಮೌಲ್ಯಗಳ ವಿಜೃಂಭಣೆಯಿದು. 'ಜೀತ' ಎನ್ನುವುದು ಸಾಮಾಜಿಕ ಪಿಡುಗು. ಆದರೆ ನಮ್ಮೆಲ್ಲಾ ರಾಷ್ಟ್ರೀಯ ಹೋರಾಟಗಾರರು ಈ ಪಿಡುಗಿನ ಮುಕ್ತತೆಯತ್ತ ಯೋಚಿಸಿಲ್ಲ. ಹಾಗೆ ನೋಡಿದರೆ ಈ ಬರ್ಬರತೆಯು ರಾಷ್ಟ್ರೀಯ ಚಿಂತಕರಿಗೆ ಮುಖ್ಯವಾಗಲೇ ಇಲ್ಲ. ಸಾಂಸ್ಕೃತಿಕ ರಾಷ್ಟ್ರೀಯತೆಯು ಹೀಗಾಗಿ; ಏಕಮುಖವಾಗಿ ಮತ್ತು ಸ್ವರೂಪದ ಬದಲಾವಣೆಗಾಗಿ ತಹತಹಿಸಿದ್ದು ಕಾಣುತ್ತದೆ. ಈ ಹಿನ್ನೆಲೆಯಲ್ಲಿ ಬಂದ ಈ ಕತೆಯು ಕೂಡಾ ಬರೀ ಸಾಂಸ್ಕೃತಿಕ ಸ್ವರೂಪದ ಬದಲಾವಣೆಗೆ ಯತ್ನಿಸಿರುವುದೇ. ಸಂಘರ್ಷದ ಮುಖವನ್ನು ತಪ್ಪಿಸಿದ ಹಾಗಾಗಿದೆ. ಹೇಮರೆಡ್ಡಿ ದೇಸಾಯಿಯ ವರ್ತನೆಯು ಕ್ರೂರವೆಂದು ನಮಗೆ ಕಾಣಿಸುವುದಿಲ್ಲ. ಅದನ್ನು ಬಯಸುವುದು ತಪ್ಪಾಗಿರಬಹುದು. ಈ ಸಂಘರ್ಷದ ಮುಖವು ಯಾಕೆ ತಪ್ಪಿದೆ ? ಇದರ ಉತ್ತರವನ್ನು ಕತೆಯಲ್ಲಿ ಹುಡುಕಬೇಕು. ಈ ಕತೆಯಲ್ಲಿ ಬರುವ ಮಲ್ಲೇಶಿಯು ಖಾಸಗಿಯಾದ ಆಸ್ತಿಯು ಇಲ್ಲದವನು. ಒಡೆಯನ ಆಸ್ತಿಗಾಗಿ ತನ್ನ ಬೆವರನ್ನು ಹರಿಸಿದವನು. ಅಷ್ಟೇ ಅಲ್ಲ,ತಾನು ಬೆವರನ್ನು ಹರಿಸಿರುವುದರ: ತಾನೇ ಉತ್ಪಾದಿಸಿದ ಉತ್ಪಾದನೆಗಳ ಮೇಲೆ ಹಿಡಿತವಿರಬೇಕೆಂಬುದರತ್ತ ಸ್ವಲ್ಪವೂ ಲಕ್ಷ್ಯವನ್ನು ಹರಿಸದವನು. ಈ ಮೂಕತನವು ಒಡೆಯನನ್ನು ಒಲಿಸಿಕೊಳ್ಳುವ ಬಗೆಯದಾದರೆ,

ಅವನಲ್ಲೇ ಅಂತರ್ಗತವಾಗಿರುವ ಮೂರ್ಖತನವು ಮತ್ತೊಂದು ಬಗೆಯದು. ಇದ ರಿಂದಾಗಿ ಅವನು ನೋಡುವ ಹೆಣ್ಣುಗಳ ಅಪಹಾಸ್ಯಕ್ಕೆ ಗುರಿಯಾಗುತ್ತಾನೆ. ಒಡತಿಯು ಮಾರುಕಟ್ಟೆಯಿಂದ ಸಾಮಾನು ತರಲು ಹೇಳಿದಾಗ ಅದರ ಚಿತ್ರವನ್ನು ಬಿಡಿಸಿದಾಗ ನಮ್ಮ ನಗೆಗೂ ಗುರಿಯಾಗುತ್ತಾನೆ. ಅವನ ಬದುಕಿನ ಒಟ್ಟಾರೆ ಜೀವನ ಚಿತ್ರವನ್ನು ಈ ಮೂಲಕವೆ ಚಿತ್ರಿಸುತ್ತಾ ಕತೆಗಾರರು ನಮ್ಮನ್ನು ಕಲುಕುತ್ತಾರೆ.

'ಮಲೆಗಳಲ್ಲಿ ಮದುಮಗಳು' ಮತ್ತು 'ಚೋಮ' ಕಾದಂಬರಿಯಲ್ಲಿ ಬರುವ ನಾಯಿ ಗುತ್ತಿ ಮತ್ತು ಚೋಮನನ್ನು ತೌಲನಿಕವಾಗಿ ನೋಡುತ್ತಾ ಯು. ಆರ್. ಅನಂತ ಮೂರ್ತಿಯವರು ಹೇಳುವ ಮಾತನ್ನು ಇಲ್ಲಿ ಉಲ್ಲೇಖಿಸಬಹುದು.:

"ಅವುಗಳನ್ನು ಸದ್ಯಕ್ಕೆ ಕಡೆಗಾಣಿಸಿ. ಗಂಭೀರನಾದ ಚೋಮನನ್ನೂ, ಮೃದು ಹಾಸ್ಯ ದಲ್ಲಿ ತನ್ನ ಜೀವಂತಿಕೆಯಿಂದ ಹೊಳೆಯುವ ವೈನೋದಿಕ ಪಾತ್ರವಾದ ಗುತ್ತಿಯನ್ನೂ ದಲಿತ ಇರುವ ಸ್ಥಿತಿ ಮತ್ತು ಭವಿಷ್ಯದ ಸಾಧ್ಯತೆಗಳನ್ನು ಒಟ್ಟಾಗಿ ಬಿಂಬಿಸಬಲ್ಲ ಎರಡು ಸಾಹಿತ್ಯ ಮಾದರಿಗಳೆಂದು ತಿಳಿದು ಮುಂದುವರಿಯುವೆ. ಚೋಮ ತಾನು ಹಾಯ ಲಾರದ ಗೋಡೆಗಳಿಗೆ ತಲೆ ಚಚ್ಚಿಕೊಂಡು ಸಾಯುತ್ತಾನೆ. ತನ್ನ ಹೋರಾಟದಲ್ಲಿ, ಹಠದಲ್ಲಿ ನಮ್ಮ ಅನುಕಂಪವನ್ನೂ ಗೌರವವನ್ನೂ ಗಳಿಸಿಕೊಳ್ಳುತ್ತಾನೆ. ದುಃಖ ದುಮ್ಮಾನಗಳನ್ನು ಹೇಳಿಕೊಳ್ಳಲು ದುಡಿಯನ್ನು ಉನ್ಮಾದದಲ್ಲಿ ಬಾರಿಸುವ ಚೋಮ ನಮಗೆ ಗೊತ್ತಿರಬಹುದಾದ ಯಾವ ವಿಶಿಷ್ಟ ಪರಿಜನನಿಗಿಂತಲೂ ದೊಡ್ಡವನು. ಅವನ ಗಾತ್ರ ಹೀಗೆ ವಾಸ್ತವಕ್ಕಿಂತ ಸ್ವಲ್ಪ ದೊಡ್ಡದಾದ್ದು ಎನಿಸುವುದರಿಂದಲೇ ಅವನು ಎಲ್ಲಾ ಕಾಲದ, ದೇಶದ ದಲಿತರನ್ನೂ ಪ್ರತಿನಿಧಿಸಬಲ್ಲ ಕಾವ್ಯ ಪ್ರತಿಮೆಯಾಗಿ ರುತ್ತಾನೆ. ಇಂಗ್ಲೀಷ್‌ನಲ್ಲಿ "ಹೈ ಮೆಮಟಿಕ್ (Highmimetie = ಘನ ಅನುಕರಣ?) ಎಂಬ ಬಗೆಯ ಚಿತ್ರಣ ಚೋಮನದು. ನಾಯಿಗುತ್ತಿಯಾದರದೋ 'ಲೋ ಮೈಮ ಟಿಕ್' (Low mimetic = ಲಘು ಅನುಕರಣ ?) ಎಂಬ ಬಗೆಯದು, ಇವನು ತಲೆ ಘಟ್ಟಿಸಿಕೊಳ್ಳುವುದಿಲ್ಲ. ಇವನಿಗೆ ತಾಳಿ ಬಾಳುವ ಒಳದಾರಿಗಳು ಗೊತ್ತು."

(ಸಾಹಿತ್ಯ ವಿಮರ್ಶೆ ೧೯೮೩—ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರಕಟಣೆ

'ದೇವನೂರ ಮಹಾದೇವರ "ಒಡಲಾಳ"—ಯು.ಆರ್. ಅನಂತಮೂರ್ತಿ)

ಅನಂತಮೂರ್ತಿಯವರು ಗುರುತಿಸುವ ಈ ಲಘು ಅನುಕರಣೆಯ ಧಾಟಿಯೇ ಇಲ್ಲಿ 'ಮಲ್ಲೇಶಿ'ಗೂ ಸ್ವಲ್ಪ ಮಟ್ಟಿಗೆ ಅನ್ವಯವಾಗುತ್ತದೆ. ಇಲ್ಲಿಯ ಮಲ್ಲೇಶಿಯ ಒಟ್ಟು ಜೀವನ ಸ್ಥಿತಿಯ ನಿಯಂತ್ರಣವಿರುವುದು ಈ ಹಾಸ್ಯದ ರೂಪದಲ್ಲಿ. ಆದರೆ ಈ ಹಾಸ್ಯದ ರೂಪವು ಉಂಟಾಗುವುದು ಅನುಕರಣೆಯನ್ನು ವಿಕೃತಗೊಳಿಸುವಲ್ಲಿ. ಅನು ಕರಣೆಯ ವಿಕೃತಿಯು ಎರಡು ಬಗೆಯದು : ತನ್ನನ್ನು ಅವರಲ್ಲಿ ಒಳಗು ಮಾಡಿ

ಕೊಳ್ಳುವುದು ಅಥವಾ ಅದಕ್ಕಿಂತ ದೂರವಾಗಿ ನಿಂತು ಅನುಕರಿಸುವುದು. ಇಲ್ಲಿಯು ಮಲ್ಲೇಶಿ ನಮ್ಮನ್ನು ನಗಿಸುತ್ತಾನೆ. ಅವನಿಗೆ ತಾನು ಅದಕ್ಕೆ ಗುರಿಯಾಗಿದ್ದೇನೆ ಎಂಬುದರ ಅರಿವಿಲ್ಲ. ವಾಸ್ತವದ ಈ ಲಘು ಅನುಕರಣೆಯು ಕಥೆಯ ಮುಖ್ಯ ತಾತ್ವಿಕ ಹಿನ್ನೆಲೆಯಾಗಿದೆ. ಕಥೆಯ ಕೊನೆಗೆ ಬರುವ ಗಂಭೀರತೆಯ ತಿರುವು ಇದುವೇ ಕಥೆಯ ತಾತ್ವಿಕ ಹಿನ್ನೆಲೆಯಾಗಿದೆ ಎಂಬುದನ್ನು ಸೂಚಿಸುತ್ತದೆ. ಕೆಲವೇ ಮಾತುಗಳ ಹಿಂದೆ ಎತ್ತಿದ ಆಕ್ಷೇಪ, ಈ ಕಥೆಯು ಸಂಘರ್ಷದ ಮುಖವನ್ನು ಹೊಂದಿಲ್ಲವೆನ್ನುವುದಕ್ಕೆ ಕಾರಣವಿದು.

ಈ ಕಥೆಯು ವಿವರಣಾತ್ಮಕ ಬಂಧದಲ್ಲಿ ಸೃಷ್ಟಿಯಾಗಿರುವ ಹಾಸ್ಯದ ರೀತಿ ದಾಟುವುದು ನಮ್ಮ ಓದಿನ ವಿಚಾರಕ್ಕೆ. ಈ ವಾಸ್ತವವು ಹೀಗೆ ಓದುವ ನಮ್ಮನ್ನು ಕೆಣಕುತ್ತದೆ. ಮಲ್ಲೇಶಿಯ ವಸ್ತುಸತ್ಯಕ್ಕೂ ಓದುವ ನಮಗೂ ಉಂಟಾಗುವ ಸಂಬಂಧ ಕಥೆಯೊಳಗಿನ ಜಗತ್ತಿಗಿಂತ ಹೊರಗಿನದು. ಅದುದರಿಂದ ಈ ಹಾಸ್ಯಕ್ಕೆ ಗುರಿಯಾಗುವ ಮಲ್ಲೇಶಿಯು ನಮ್ಮೊಳಗೆ ಗಟ್ಟಿಯಾಗುತ್ತಾನೆ. ವಿಚಾರಕ್ಕೆ ಗುರಿ ಮಾಡುತ್ತಾನೆ. ಹಾಗೆಂದು ಕಥೆಯೊಳಗೆ ಅವನು ಬರಿ ಪದಾರ್ಥವಷ್ಟೆ. ಇವನ್ನು ಹೇಳಲು ಕಾರಣವಿಷ್ಟೆ: ಹೇಮರೆಡ್ಡಿಯಂತಹ ಬಂಡವಾಳಶಾಹಿಯ ವಿರುದ್ಧ ಜಗಳವನ್ನು ಎತ್ತುವಷ್ಟು ಕಥೆಯೊಳಗೆ ಪುಷ್ಟಿಯಿಲ್ಲ. ಅವರ ಅರ್ಥ ಕಥೆಗಾರರು ಮತ್ತೆ ಪುನರುತ್ಥಾನವಾದಕ್ಕೆ ಪುಷ್ಟಿಕೊಡುತ್ತಾರೆಂದಲ್ಲ. ಅವರು ಅದನ್ನು ವಾಚ್ಯವಾಗಿಸಿ ಲಕ್ಷಿಸುವುದಿಲ್ಲವೆಂದಷ್ಟೆ.

ಹಾಸ್ಯವನ್ನೇ ಮುಖ್ಯ ಚೇತನವನ್ನಾಗಿಸಿಕೊಂಡು ಒಳಗಿನ ವಿಷಾದವನ್ನು ಧ್ವನಿಶಕ್ತಿಯ ಮೂಲಕ ಈ ಮಲ್ಲೇಶಿಯು ವ್ಯಕ್ತಪಡಿಸುವನು. ಗಂಭೀರವಾದ ಒಂದೆರಡು ಅಭಿಪ್ರಾಯಗಳು ಹೀಗಿವೆ :

"ಮದುವೆಯ ಗೋಳಿಗೆ ನನ್ನನ್ನು ಹಾಕಬೇಡಿ ದೇವರು, ಕೈ ಜೋಡಿಸುತ್ತೇನೆ. ಮನುಷ್ಯನಿಗೆ ಈಗಿದ್ದ ಸ್ವಾತಂತ್ರ್ಯವು ಮದುವೆಯಾದ ಮೇಲೆ ಹೇಗೆ ಬಂದೀತು? ಸೀರೆ ತಾ; ಕುಪ್ಪಸ ತಾ; ತೋಳಬಂದಿ ತಾ; ಚಕ್ಕಿ ತಾ; 'ತಾ' ಎಂಬ ಸೊಲ್ಲು ತಪ್ಪುವುದೇ ಇಲ್ಲ. ಹೆಂಡತಿಯು ಜಾತ್ರೆಗೆ ಹೊರಕೆ ನಾವು ಹಿಂಬಾಲಿಸಿ ನಡೆಯಲೇ ಬೇಕು."

(ಪುಟ ೨)

ಮತ್ತು,

"ಕಡಿಮೆಯಿಲ್ಲ ನನ್ನೊಡೆಯರೆ, ಅರ್ಧ ದೇಶವೇ ಹೆಣ್ಣಾಗಿರುವುದು. ಎಲ್ಲಿ ನೋಡಿದಲ್ಲಿಯೂ ಹೆಂಗಸರಾಗಿದ್ದರೂ ಹಿಡಿಯಲಿಕ್ಕೆ ಹೋದರೆ ಒಬ್ಬಳೂ ಕೈಗೆ ಹತ್ತುವುದಿಲ್ಲ. ಆದರೂ ಎರಡು ದಿವಸ ನನ್ನನ್ನು ಬಿಡಿರಿ, ಹೇಗಾದರೂ ಮಾಡಿ ಒಂದು ಹೆಣ್ಣನ್ನು ಗೊತ್ತು ಮಾಡಿಕೊಂಡು ಬರುವೆನು."

(ಪುಟ. ೩)

ಈ ಮಾತುಗಳ ಸ್ವರೂಪವನ್ನು ಗಮನಿಸಿ. ಮೇಲುನೋಟಕ್ಕೆ ಮಲ್ಲೇಶಿಯ ವ್ಯಕ್ತಿತ್ವದಂತೆ ಸರಳದಾಗಿ ಕಾಣಿಸುತ್ತದೆ. ಕತೆಯು ಹುಟ್ಟಿದ ಕಾಲವನ್ನು ಗಮನಿಸಿಕೊಂಡು ಈ ಮಾತನ್ನು ಪರಿಶೀಲಿಸಬೇಕು. ಅಗಾಧವಾದ ಧ್ವನಿಶಕ್ತಿಯನ್ನು ಪಡೆದುಕೊಂಡ ಮಾತಿದು. ಕಾಲಾತೀತವಾದ ಕತೆಯನ್ನು ನಾನಿಲ್ಲಿ ಹೇಳುತ್ತಿಲ್ಲ. ಕಾಲಬದ್ಧವಾದ ಕತೆಯು ಹೇಗೆ ತನ್ನೆಲ್ಲಾ ಕಾಲದ ಸ್ವರೂಪವನ್ನು ತನ್ನ ಗರ್ಭದಲ್ಲಿ ಅಡಗಿಸಿಕೊಳ್ಳುತ್ತದೆ ಎಂಬುದಕ್ಕೆ ಇದು ಅತ್ಯಂತ ಒಳ್ಳೆಯ ಉದಾಹರಣೆಯಾಗಬಲ್ಲುದು.

ಪಠ್ಯದಲ್ಲಿ ಹೇಳಿರುವ ಈ ಮಾತು ಸರಳವಾದುದು. ಮಲ್ಲೇಶಿಯಂತಹ ಪಾತ್ರಕ್ಕೆ ಅನುಗುಣವಾಗಿ ಹೊಮ್ಮಿರುವಂಥದ್ದು. ಮದುವೆಯೆಂದರೆ ತನ್ನ ಸ್ವಾತಂತ್ರ್ಯವನ್ನು ಕಳೆದು ಕೊಳ್ಳುತ್ತೇನೆ ಎಂಬ ಭಯವಿದೆಯಲ್ಲಾ, ಇದು ಹುಟ್ಟಿರುವುದು ಒಬ್ಬ ಜೀತದಾಳುವಿನಲ್ಲಿ; ತನ್ನನ್ನು ಧನಿಗೆ ಮಾರಿಕೊಂಡವನಲ್ಲಿ. ಎಂಥ ವಿಪರ್ಯಾಸ ? ಮತ್ತೊಂದು ಮಾತನ್ನು ಲಕ್ಷಿಸಿ.: ಅವನ ಆಲೋಚನೆಯ ಕೋನದಲ್ಲಿ ನೋಡಿದರೆ, ಇದು ಅವನ ದೃಷ್ಟಿಯಲ್ಲಿ ಸರಳವಾದ ತೀರ್ಮಾನವಾಗಿದೆ.

ಕತೆಯು ಕಾಲದ ಕುರಿತಂತೆ ಹೇಳಿದೆ. ಕತೆಗಾರರು ಈ ಕತೆಯನ್ನು ಹೊಸೆದಿರುವುದು ೧೯೧೭ರಲ್ಲಿ. ಇದು ಸ್ವಾತಂತ್ರ್ಯ ಪೂರ್ವದ ಕತೆಯಾಗಿದೆ. ಸ್ವಾತಂತ್ರ್ಯ ಹೋರಾಟದ ಕನಸು ತೀವ್ರವಾದ ಈ ಕಾಲವನ್ನು ಲಕ್ಷಿಸಿದಾಗ ಈ ಮೇಲೆ ಉಲ್ಲೇಖಗೊಂಡ ಮಾತಿಗೆ ಹೊಸತೊಂದು ಆಯಾಮ ದೊರೆಯುತ್ತದೆ. ಮೊದಲ ಮಾತು ಸ್ವಾತಂತ್ರ್ಯವನ್ನು ಪಡೆಯುವ ತೀವ್ರವಾದ ಹಂಬಲವನ್ನು ಪ್ರತಿಪಾದಿಸುತ್ತದೆ. ಎರಡನೆಯ ಮಾತು, ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿಯಾಗದ ಜನರನ್ನು ಲೇವಡಿ ಮಾಡುವ ವ್ಯಂಗ್ಯವಿದೆ.

ಈ ಧ್ವನಿಶಕ್ತಿಯನ್ನು ಗಮನಿಸುತ್ತಾ, ಇದರ ಕ್ರೂರ ನೆಲೆಯೂ ಕೂಡಾ ಹೇಗೆ ಪುನರುತ್ಥಾನವಾದವನ್ನು ಹೇಳುತ್ತದೆ ಎಂಬುದನ್ನು ಗಮನಿಸಬೇಕು. ಹೆಣ್ಣಾಗುವುದೆಂದರೆ ನಿಶ್ಶಕ್ತಿಯ, ದುರ್ಬಲತೆಯ ಸೂಚಕವಾಗಿ ಇಲ್ಲಿ ಬಳಕೆಯಾಗಿದೆ ಇಡಿ ಪರಂಪರೆಯ ಕುರಿತಂತೆ ಎತ್ತಬಹುದಾದ ಪ್ರಶ್ನೆಯೆಂಬುದು ಗಮನದಲ್ಲಿದೆ.

ಡಾ. ಪ್ರೋಲಂಕಿ ರಾಮಮೂರ್ತಿ ಹೇಳುತ್ತಾರೆ: "ಹೆಣ್ಣನ್ನು ಪ್ರಾಣಿಯಾಗಿ ಮಾಡಿಕೊಂಡದ್ದರಿಂದಲೇ ಈ ಸಂಸ್ಕೃತಿಯಲ್ಲಿ ಗಂಡು ಅನಿವಾರ್ಯವಾಗಿ ಪಶುವಾಗಿದ್ದಾನೆ ಎಂಬುದು ಭಯಂಕರವಾದ ವಿಷಯ. ಗಂಡಿನ ಪಾಲಿಗೆ ಹೆಣ್ಣು ಸರ್ವ ಸುಲಭಳು. ಅನಾಯಾಸವಾಗಿ ಲಭಿಸುವವಳು. ಬೇರೆ ಸಂಸ್ಕೃತಿಗಳಲ್ಲಿರುವಂತೆ ಇಲ್ಲಿ ಗಂಡು ಹೆಣ್ಣನ್ನು ಒಲಿಸಬೇಕಾಗಿಲ್ಲ."

—ಸೀತಾಯಣ—ಭಾರತೀಯ ಸಂಸ್ಕೃತಿಯಲ್ಲಿ ಸ್ತ್ರೀ.
ಡಾ. ಪ್ರೋಲಂಕಿ ರಾಮಮೂರ್ತಿ ಎರಡನೆಯ ಮುದ್ರಣ ೧೯೮೪ ಪುಟ ೧೨೩

ಬಹುಶ: ಈ ಪ್ರಶ್ನೆಯನ್ನು ಮುಂದುವರಿಸಿದರೆ ಲೇಖಿಸವ ಮುಗ್ಗುಲು ಬದಲಾಗಿ ಬಿಡಬಹುದು. ಯಾಕೇದರೆ, ಇಲ್ಲಿ ಬರುವ ಹೆಣ್ಣುಗಳು ಬೇರೆಯೇ ಆದ ಲೇಖನ ವನ್ನು ಬಯಸುವಷ್ಟು ಶಕ್ತವಾದುವುಗಳು. ಹಾಗಿದ್ದರೆ, ಇಲ್ಲಿಯೇ ಸಂಶಯವನ್ನು ಎತ್ತಿರುವುದು ಏಕೆ ? ಕಾರಣವಿದೆ, ಇಲ್ಲಿ ಬರುವ 'ಭಾಯವ್ವ' ಒಂದು ಮಾತನ್ನು ಹೀಗೆ ಹೇಳುತ್ತಾಳೆ. ಇವಳು ವಿಧವೆ.

"ಗೈಯಾಳೀ; ಹಳೆ ಗೈಯಾಳಿ; ಇಂಥ ಮಾತು ಆಡುವಿಯಾ ? ಅರೆ ಮುದುಕಿಯೂ ವಿಧವೆಯೂ ಆದ ನಾನು ನಿನಗಾದ ಇನ್ನು ಮೇಲೆ ಮೊದಲಗಿತ್ತಿಯಾಗಬೇಡವೆ ?"

(ಪು. ೮)

ಭಾಯವ್ವ 'ವಿಧವೆ' ಎನ್ನುವುದು ಮತ್ತು "ಮೊದಲಗಿತ್ತಿಯಾಗುವುದರ" ಕುರಿತಂತೆ ಆಡಿರುವುದು ಪತ್ಯದಾಚೆಗೂ ಸರಿಯುತ್ತದೆ. ಭಾಯವ್ವ ಎನ್ನುವ ವಿಧವೆಯ ವಿಷಾದದ ಧ್ವನಿಯಿದು. ಈ ವಿಷಾದವು ವಾಸ್ತವ ನಿಷ್ಠುರತೆಯಿಂದ ಹುಟ್ಟಿದೆ ಮತ್ತು ಬದಲಾವಣೆಯನ್ನು ಸೂಚಿಸುತ್ತದೆ. ಈ ಬದಲಾವಣೆಯ ಸೂಚನೆಯು ಪುನರುತ್ಥಾನದ ತಾತ್ವಿಕತೆಯನ್ನು ವಿರೋಧಿಸುವಂಥದ್ದು, ಮತ್ತು ಹೆಚ್ಚು ಗೌರವಯುತವಾದಂಥದ್ದು. ಅದೇ ನಿಲುವೆಯು ಉಳಿದ ಹೆಣ್ಣುಗಳನ್ನು ನೋಡುವ ಹೊತ್ತಿಗೆ ಬರುವುದಿಲ್ಲ ಎಂಬುದು ಗಮನಾರ್ಹವಾಗಿದೆ. ಇದನ್ನು ಆ ಕಾಲದ ಓದುಗ ವರ್ಗವನ್ನು ಗಮನಿಸಿ ಬರೆದಿರುವಂಥದ್ದು, ಅಥವಾ ಆ ಕಾಲದ ಜೀವನ ಮೌಲ್ಯವೆಂದು ಸುಮ್ಮನೆ ಬಿಟ್ಟು ಬಿಡಬಹುದು. ಇರಲಿ.

ಕಥೆಯ ಓಟವನ್ನು ತಡೆಯುವ ಕಥೆಗಾರರು ಕಥೆಯಲ್ಲಿ ಆಗಾಗ ಆಗಂತುಕರಾಗಿ ಬರುತ್ತಾರೆ. ಓದುಗನ ಮಾನಸಿಕ ಸಿದ್ಧತೆಯನ್ನು ನಡೆಸುತ್ತಾರೆ. ಒಂದೆರಡು ಉದಾಹರಣೆಗಳನ್ನು ಕೊಟ್ಟು ಮುಂದುವರಿಯಬಹುದು.

"ಮಲ್ಲೇಶಿಯು ಹೊಸ ಹರೆಯದ ಹುಡುಗನಾಗಿದ್ದರೂ ನಾರಿಯರ ಹೃದ್ಗತವನ್ನು ಕಂಡುಹಿಡಿಯುವಷ್ಟು ಚಾತುರ್ಯವು ಅವನಲ್ಲಿದ್ದಿಲ್ಲ."

(ಪುಟ. ೪)

"ವಂಚನಾ ರಹಿತನೂ, ತರುಣನೂ ಆದ ಮಲ್ಲೇಶಿಗೆ ತನಗಿದ್ದಷ್ಟೇ ಅಲ್ಪ ಕೆಲಸದಿಂದ ಸಮಾಧಾನವಿದ್ದಿಲ್ಲ. ಅನಲಸನಾದ ಆ ಬಂಟನಿಗೆ ಕೆಲಸವಿಲ್ಲದೆ ಸುಮ್ಮನೆ ಬಿದ್ದು ಕೊಂಡಿರುವುದು ಸೇರುತ್ತಿದ್ದಿಲ್ಲ."

(ಪು. ೧೪)

ಮಲ್ಲೇಶಿಯ ವ್ಯಕ್ತಿತ್ವಕ್ಕೆ ಲೇಖಕರು ಬಣ್ಣ ಬಳಿಯುವ ಈ ರೀತಿಯು ನಮ್ಮೆದುರು ದೃಷ್ಟಾಂತವಾಗಿವೆಯೆಂಬುದು ನಿಜ. ಇವರ ಮೂಲಕ ಲೇಖಕರು ಮಲ್ಲೇಶಿಯ

ವ್ಯಕ್ತಿತ್ವಕ್ಕೆ ಮಾರುಹೋಗುವಂತೆ ನಮ್ಮನ್ನು ಪರ್ಥೀಕರಿಸುತ್ತಾರೆ. ಈ ಮಾತುಗಳು ಕಥೆಯ ಬಂಧನ ರಚನೆಯ ದೃಷ್ಟಿಯಿಂದಲೂ ಸಲ್ಲುತ್ತದೆ.

ಈ ಕಥೆಯ ಕೇಂದ್ರ ತಾತ್ವಿಕತೆಯು ಇರುವುದು, ಮಲ್ಲೇಶಿಯು ವಿದ್ಯಾಭ್ಯಾಸ ಕಲಿತು ಬುದ್ಧಿವಂತನಾಗುವುದರಲ್ಲಿ. ಅನಾಗರಿಕನೂ, ಮೂರ್ಖನೂ ಆದ ಅವನು ಅಕ್ಷರ ಕಲಿತು ನಾಗರಿಕನಾಗುವಲ್ಲಿ. ಇದರ ಪರಿಣಾಮವನ್ನು ಲೇಖಕರು ಗಿರಿಬಾಯಿ ಮದುವೆಯಾಗುವ ಲೋಭವನ್ನು ಒಡ್ಡುತ್ತಾರೆ. ಅವನು ಅಕ್ಷರ ಕಲಿತನಾದ್ದರಿಂದ ಅವನಿಗೆ ಕೋಶಾಧಿಕಾರಿಯಾಗುವ ಯೋಗವು ಲಭ್ಯವಾಗುತ್ತದೆ. ಹೇಮರೆಡ್ಡಿಯು ಅವನಿಗೆ ಉದ್ಯೋಗ ವರ್ಗಾಂತರವನ್ನು ಮಾಡುತ್ತಾನೆ.

ಗಿರಿಬಾಯಿಯು ಮಲ್ಲೇಶಿಗೆ ಅಕ್ಷರವನ್ನು ಹೇಳಿಕೊಡುವ ದೃಶ್ಯದ ವಿವರವು ಇಂತಿದೆ—

"ಅಂದಿನಿಂದ ಅವಳು ಜನರ ಕಣ್ಣು ತಪ್ಪಿಸಿ ಮಲ್ಲೇಶಿಗೆ ಅಕ್ಷರಗಳ ಪರಿಚಯವನ್ನು ಮಾಡಿ ಕೊಡಲಾರಂಭಿಸಿದಳು. ಮಲ್ಲೇಶಿಯು ಏಕಪಾಠಿಯಾಗಿರದಿದ್ದರೂ ವಿಶೇಷ ಪ್ರಯಾಸವಿಲ್ಲದೆ ತಿಂಗಳೆರಡು ತಿಂಗಳುಗಳಲ್ಲಿ ಸುಲಭವಾದ ಶಬ್ದಗಳನ್ನು ಬರೆಯ ಬಲ್ಲಷ್ಟು ಅಕ್ಷರಸ್ಥನಾದನು. ಗಿರಿಬಾಯಿಯು ತನ್ನ ಚಿಕ್ಕಮ್ಮನ ಮನೆಯಲ್ಲಿರುವಾಗ ಶಾಲೆಗೆ ಹೋಗಿ ಐದು ಇಯತ್ತೆಗಳ ವರೆಗೆ ಅಭ್ಯಾಸ ಮಾಡಿದ್ದಳು."

(ಪು. ೧೬)

ಗಿರಿಬಾಯಿಯು ದೊರೆಸಾನಿಗೆ ಸೇವಕಿ. ಈ ಸೇವಕಿಯು ತನ್ನ ವರ್ಗದವನೆ ಆದ ಮಲ್ಲೇಶಿಗೆ ಅಕ್ಷರವನ್ನು ಹೇಳಿಕೊಡುವುದು ಮುಖ್ಯವಾದ ನೆಲೆಯನ್ನು ಸೂಚಿಸುತ್ತದೆ. ಇದು ವರ್ಗೀಕೃತ ವ್ಯವಸ್ಥೆಯ ಪ್ರತಿಬಿಂಬ. ಮಲ್ಲೇಶಿಯು ಒಡೆಯನಿಗಾಗಲಿ; ಒಡತಿಗಾಗಲಿ ಇಲ್ಲದ ಆಸಕ್ತಿಯು ಈ ಗಿರಿಬಾಯಿಗೆ ಉಂಟಾಗಿರುವುದು—ನಂತರ ಕಥೆಯಲ್ಲಿ ಲೈಂಗಿಕ ಆಸಕ್ತಿಯ ಸ್ವರೂಪವನ್ನು ಪಡೆಯುತ್ತದೆ. ಕತೆಯ ಆಕೃತಿಯಲ್ಲಿ ಬರುವ ಮುಖ್ಯ ಕೊರತೆಯನ್ನು ಮೊದಲಿಗೆ ಗುರುತಿಸಿ ಮತ್ತೆ ಈ ಅಂಶವನ್ನು ಬೆಳೆಸ ಬಹುದು. ಈ ವಾದವು ವಾಸ್ತವದೊಂದಿಗೆ ಇಟ್ಟು ನೋಡುವ ತಾರ್ಕಿಕ ಕೋನ ವಾಗಿದೆ. ಅದೆಂದರೆ, ಕತೆಯಲ್ಲಿ ಎಲ್ಲಾ ಬದಲಾವಣೆಗಳು ಗಳಿಗೆಗೆ ಬದಲಾವಣೆಯಾಗುತ್ತವೆ. ಮೊದಲಿಗೆ ಮೂರ್ಖನಾಗಿ ನಮ್ಮ ನಗುವಿಗೆ, ನಮ್ಮ ಕರುಣೆಗೆ ತುತ್ತಾಗುವ ನಾಯಕನು ಹೆಣ್ಣುಗಳ ಮನಸ್ಸನ್ನು ಅರ್ಥಮಾಡಿಕೊಳ್ಳುವಲ್ಲಿ ವಿಫಲನಾಗುವನು. ಈ ಮೂರ್ಖನು ಎರಡು ತಿಂಗಳುಗಳಲ್ಲಿ ಅಕ್ಷರಸ್ಥನಾಗುತ್ತಾನೆ. ಇದನ್ನು ಹೇಳುತ್ತಾ; "ಗಿರಿಬಾಯಿಯು ತನ್ನ ಚಿಕ್ಕಮ್ಮನ ಮನೆಯಲ್ಲಿರುವಾಗ ಶಾಲೆಗೆ ಹೋಗಿ ಐದು ಇಯತ್ತೆಗಳವರೆಗೆ ಅಭ್ಯಾಸ ಮಾಡಿದ್ದಳು" ಎನ್ನುವ ವಿವರವು ನಂತರ ಬರುತ್ತದೆ.

ಇದು ಘಟನೆಗಳಿಗೆ ಅನುಸಾರವಾಗಿ ಪಾತ್ರಗಳನ್ನು ಹೊಂದಾಣಿಕೆ ಮಾಡಿಕೊಳ್ಳುವ ರೀತಿಯೊಂದು ಬೇರೆ ಹೇಳಬೇಕಿಲ್ಲ. ಇದರ ಆಧಾರದ ಮೇಲೆ ಇತ್ತಬಹುದಾದ ವರಾತೇವರೆ—ಇಡೀ ಪಠ್ಯವೇ ಹೆಚ್ಚು ಪ್ರಜ್ಞಾನಪೂರ್ವಕವಾದ ಎರಕ. ಈ ಪ್ರಜ್ಞಾಪೂರ್ವಕವಾದ ಎರಕವು ಕೇಂದ್ರ ತಾತ್ವಿಕತೆಯನ್ನು ನಿರೂಪಿಸುವಾಗ ಮಾತ್ರ ಮಹತ್ವಪೂರ್ಣವಾಗಿ ಮತ್ತು ಗಂಭೀರವಾಗಿ ತಿರುಗಿಕೊಂಡು ಉಳಿದೆಡೆಗಳಲ್ಲಿ ಬರಿ ಲಘು ಅನುಕರಣೆಯಷ್ಟೆ ಆಗುತ್ತದೆ. ತಾತ್ವಿಕತೆಯನ್ನು ನಿರೂಪಿಸುವಾಗ ಅಂದರೆ, ಮಲ್ಲೇಶಿಯು ಅಕ್ಷರಸ್ಥನಾಗಿ ನಾಗರಿಕ ಜಗತ್ತಿಗೆ ಬರುವುದು ಕಥೆಯ ಓಟಕ್ಕೆ ಗಂಭೀರತೆಯ ಮುಖವನ್ನು ಕೊಡುತ್ತದೆ. ಲಘುವಿನಿಂದ ಘನಕ್ಕೆ ತಿರುಗುತ್ತದೆ. ಆಕೃತಿಯ ಈಸಡಿಲತೆಯೂ, ವಿವರಣೆಯೂ ಮತ್ತೆ ಜನಪದ ಕಲೆಯ ಪರಂಪರೆಯತ್ತ ವಾಲುತ್ತದೆಯೆಂಬ ನನ್ನ ಪ್ರಾರಂಭಿಕ ಮಾತಿಗೆ ಕಾರಣವಿದು. ಈ ಸರಳ ತೀರ್ಮಾನವು ಕೃತಿಯ ತಾತ್ವಿಕ ಬಂಧವಾಗಿದೆ ಎನ್ನುವುದಕ್ಕಾಗಿ.

ಈಗ ನೆನಪಿಗೆ ಬರುವುದು ಕುಮಾರ ವ್ಯಾಸ. ತನ್ನ ಕೃತಿಯ ಮೂಲಕ ಅವನು ಸಾಧಿಸುವುದು ಮಂತ್ರಿ ಜನಕೆ, ಬುದ್ಧಿ ಗುಣ; ವಿರಹಿಗಳಿಗೆ ಶೃಂಗಾರವನ್ನು. ಅದರಂತೆ ಇಲ್ಲಿ ಮಲ್ಲೇಶಿಯು ಅಕ್ಷರಸ್ಥನಾದುದಕ್ಕೆ ಗಿರಿಬಾಯಿಯನ್ನು ಮದುವೆಯಾಗುವ ಲಾಭವು ಅವನಿಗೆ ದೊರೆಯುತ್ತದೆ. ಈ ಮೂಲಕ ಸರಳ ತೀರ್ಮಾನವು ಹೀಗಿದೆ : ಅಕ್ಷರವು ಉದ್ಯೋಗದಲ್ಲಿ ವರ್ಗಾವಣೆಯನ್ನು ಮಾಡುತ್ತದೆ. ಮತ್ತು ಅದರ ಮೂಲಕ ಮದುವೆಯಾಗುತ್ತದೆ. ಅರಿವು ಮೂಡುತ್ತದೆ.

ಈ ಘೋಷಣಾತ್ಮಕವಾದ ಮೌಲ್ಯವನ್ನು ಪ್ರತಿಪಾದಿಸುವುದಕ್ಕೆ ಕಥೆಯನ್ನು ಹೆಣೆಯಲಾಗಿದೆ. ಆ ಮೂಲಕ ಮತ್ತೆ ಮೂಢನಂಬಿಕೆಯ ವಿರುದ್ಧ ಹೋರಾಡುವ ತಿಳಿವನ್ನು ಮೂಡಿಸುತ್ತದೆ. ಈ ಕತೆಯು ವಿಧವೆಯ ಬಗೆಗೆ, ಅಕ್ಷರದ ಬಗೆಗೆ, ಜೀವನದ ಬಗೆಗೆ ಹೇಳುತ್ತದೆ. ಆದರೆ, ಅದರೊಂದಿಗೆ ಕತೆಯು ಒಂದು ಐತಿಹಾಸಿಕ ಪ್ರಕ್ರಿಯೆಯ ಅಂಶವಾಗಿದೆ.

●

ಸಿರಿಮನೆ ಕವನಗೋಷ್ಠಿ

ಒಂದು ಐತಿಹಾಸಿಕ ದಾಖಲೆ

ಬರದಲ್ಲಿ ಬಳಲುತ್ತಿದ್ದ ಜನರ ಮೇಲೆ ಜನತಾ ಸರಕಾರ ಬಸ್ಸು, ಹಾಲು, ಕರೆಂಟು, ರೇಷನ್ ಮುಂತಾದ ಜೀವನಾವಶ್ಯಕ ವಸ್ತುಗಳ ದರಗಳನ್ನೇರಿಸಿದ್ದರ ವಿರುದ ಹೋರಾಟ ಮಾಡಲು ಪ್ರಗತಿಪರ ವಿದ್ಯಾರ್ಥಿ ಕೇಂದ್ರ (ಪಿ. ವಿ. ಕೆ) ಮತ್ತು ರೈತ ವಿದ್ಯಾರ್ಥಿ ಒಕ್ಕೂಟಗಳು ಒಟ್ಟಾಗಿ ಕೆಲಸ ಮಾಡಿದವು. ಆ ಸಮಯದಲ್ಲಿ ವಿಶ್ವ ಕನ್ನಡ ಸಮ್ಮೇಳನ(ವಿ. ಕ. ಸ.) ನಡೆಸುತ್ತವೆಂಬ ಸರಕಾರ ಪ್ರಕಟಣೆ ಹೊರಬಂತು. ವಿದ್ಯಾರ್ಥಿ ಒಕ್ಕೂಟವು ವಿ.ಕ.ಸ. ವಿರೋಧಿಸಲು ಕಾರ್ಯಕ್ರಮ ಹಾಕಿಕೊಂಡು ಮೇಳ ವನ್ನು ಬಹಿಷ್ಕರಿಸಲು ಸಾಹಿತಿ ಮತ್ತು ಕಲಾವಿದರಿಂದ ಮತ್ತು ಸಮ್ಮೇಳನದ ಆಹ್ವಾನಿತರಿಂದ ಸಹಿ ಸಂಗ್ರಹಿಸುವ ಕಾರ್ಯಕ್ರಮ ಹಾಕಿಕೊಂಡು ಮುಂದುವರಿಯಿತು. ಜೊತೆಗೆ ವಿವಿಧ ಪ್ರಗತಿಪರ ಸಂಘಗಳ ಜೊತೆಗೂ ಚರ್ಚೆ ನಡೆಸಿತು. ಅವರ ಫಲವೇ ೮–೧೨–೮೫ರಂದು ಮಾನಸ ಗಂಗೋತ್ರಿ ಗಾಂಧಿ ಭವನದಲ್ಲಿ ನಡೆದ ಬಂಡಾಯ ಸಾಹಿತ್ಯ ಸಂಘಟನಾ ಸಮಿತಿ ಸಭೆ. ಆ ಸಭೆಯಲ್ಲಿ ವಿ. ಕ. ಸ. ವನ್ನು ಖಂಡಿಸಿ ಬಹಿಷ್ಕರಿಸಲು ಬಂಡಾಯ ಸಾಹಿತಿಗಳಲ್ಲದೇ ಎಲ್ಲ ಜನರಿಗೂ ಕರೆ ನೀಡಲಾಯಿತು. ಮತ್ತು ಅದೇ ಸಭೆಯಲ್ಲಿ ೮ ಪ್ರಗತಿಪರ ಸಂಘಗಳು–ಬಂಡಾಯ ಸಾಹಿತ್ಯ ಸಂಘಟನಾ ಸಮಿತಿ, ಕನ್ನಡ ಕ್ರಿಯಾಸಮಿತಿ, ಪ್ರಗತಿಪರ ವಿದ್ಯಾರ್ಥಿ ಕೇಂದ್ರ, ರೈತ ವಿದ್ಯಾರ್ಥಿ ಒಕ್ಕೂಟ, ಜನ ಕಲಾ ಮಂಡಲಿ. ಹಸಿರು ನಾಡಿನ ಕಲಾವಿದರು, ಕರ್ನಾಟಕ ವಿಚಾರವಾದಿ ಒಕ್ಕೂಟ ಮತ್ತು ವೇದಿಕೆ ಬಳಗಗಳನ್ನು ಒಳಗೂಡಿದ ವಿ. ಕ. ಸ. ವಿರೋಧಿ ಒಕ್ಕೂಟ ವನ್ನು ರಚಿಸಲಾಯಿತು.

ಸಭೆಯಲ್ಲಿ ನಿರ್ಧರಿಸಿದ್ದಂತೆ ೧೧–೧೨–೮೫ ರಿಂದಲೇ ಮೈಸೂರು ನಗರದ ಬೀದಿಗಳಲ್ಲಿ ಹಾಡು ಮತ್ತು ಬೀದಿ ಭಾಷಣಗಳ ಮೂಲಕ ಮೇಳವನ್ನು ವಿರೋಧಿಸುವ ಕಾರ್ಯಕ್ರಮ ಮುಂದುವರೆಯಿತು. ಈ ಬೀದಿ ಸಭೆಗಳಲ್ಲಿ ೧೨ ಕೋಟಿ ರೂಪಾಯಿ ದುಂದು ವೆಚ್ಚವನ್ನು ಕರ್ನಾಟಕದ ೧೯ ಜಿಲ್ಲೆಗಳಲ್ಲಿ ೧೭ ಭೀಕರ ಬರದಲ್ಲಿರುವುದು,

ದನಗಳಿಗೆ ಮೇವಿಲ್ಲದೇ ಕಸಾಯಿಖಾನೆಗಳಿಗೆ ಕಳುಹಿಸುತ್ತಿರುವುದನ್ನು, ಜನ ಗುಳೆ ಹೋಗುತ್ತಿರುವುದನ್ನು ಜನರ ಕಣ್ಣೆದುರಿಗೆ ಚಿತ್ರಿಸಲಾಗಿತ್ತು. ಈ ಜನಪರ ಪ್ರಚಾರವನ್ನು ಹತ್ತಿಕ್ಕುವ ಕ್ರಮವಾಗಿ, ೧೪–೧೨–೮೫ ಸಂಜೆ ೬ ಗಂಟೆಗೆ ನಗರದ ಬಸ್ ನಿಲ್ದಾಣದ ಹತ್ತಿರ ಬೀದಿ ಕಾರ್ಯಕ್ರಮ ನಡೆಯುವಾಗಲೇ ೨೧ ಒಕ್ಕೂಟದ ಕಾರ್ಯಕರ್ತರನ್ನು ಪೋಲೀಸರು ಬಂಧಿಸಿದರು. ಇವರನ್ನು ಒಂದು ದಿನ ಪೊಲೀಸ್ ಕಸ್ಟಡಿಯಲ್ಲಿಯೂ ೩ ದಿನ ಸೆರೆಮನೆಯಲ್ಲಿಯೂ ಇಟ್ಟರು. ಇನ್ನೂ ೨೦ ಜನರನ್ನು ಮನೆಗಳಿಂದ. ಅರಮನೆ ಆವರಣದಲ್ಲಿ ಪ್ರತಿಭಟಿಸುವಾಗ ಬಂಧಿಸಿ ೩–೪ ದಿನ ಜೈಲಲ್ಲಿಟ್ಟರು. ಜೊತೆಗೆ ಯುವ ಬರಹಗಾರರ ಕೇಂದ್ರ ಸಮಿತಿಗೆ ಸೇರಿದ ೧೩ ಜನರನ್ನು, ವಿವಿಧ ಸಂಘ ಸಂಸ್ಥೆಗಳಿಗೆ ಸೇರಿದ ಸುಮಾರು ೧೦೦ ಜನರನ್ನು ಬಂಧಿಸಿದರು.

ಸೆರೆಮನೆಯಲ್ಲಿರುವ ನಾಲ್ಕು ದಿನಗಳಲ್ಲೂ ಬಂಧಿತ ಸಾಹಿತಿ, ಕಲಾಕಾರ, ವಿಮರ್ಶಕ ಯುವಕರು, ಬೆಳದವರು ವಿಚಾರ ಗೋಷ್ಠಿಗಳನ್ನು, ಕವನ ಗೋಷ್ಠಿಗಳನ್ನು, ಕಲಾ ಮಾಧ್ಯಮದ ಬಗ್ಗೆ ಅಧ್ಯಯನ ಶಿಬಿರಗಳನ್ನು, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಬಿಡುವಿಲ್ಲದೇ ಮಾಡುವುದರಲ್ಲಿ ಲೀನವಾದರು. ೧೫–೧೨–೮೫ ಮಧ್ಯಾಹ್ನ ಜ್ಯೋತಿನಗರದ ಡಿ.ಎ.ಆರ್. ಕಾರಾಗೃಹ ಆವರಣದಲ್ಲಿ ನಡೆಸಿದ ಕವನಗೋಷ್ಠಿಯಲ್ಲಿ ೧೪ ಜನ ಸಾಹಿತಿಗಳು ಸೆರೆಮನೆಯಲ್ಲಿಯೇ ಬರೆದ ಕವನಗಳನ್ನು ಓದಿದರು. ಈ ಕವನಗಳ ಸಾಹಿತ್ಯ ಚರ್ಚೆಯೂ ನಡೆಯಿತು.

ರಾಮಕೃಷ್ಣ ಹೆಗಡೆಯವರ 'ಮೌಲ್ಯಾಧಾರಿತ ರಾಜಕೀಯ'ದ ಕಲಂಕದ ಸಂಕೇತಗಳಲ್ಲಿ ಒಂದಾದ ವಿಶ್ವ ಕನ್ನಡ ಮೇಳವನ್ನು ವಿರೋಧಿಸಿದ್ದು, ಬಂಧನಕ್ಕೆ ಒಳಗಾಗಿದ್ದು ನಮ್ಮ ಸಾಂಸ್ಕೃತಿಕ ಚರಿತ್ರೆಯಲ್ಲಿ ಒಂದು ಮುಖ್ಯ ಘಟನೆ. ಆಳರಸರ ತುತ್ತೂರಿಗಳಾಗಿ ಕೆಲಸ ಮಾಡುತ್ತಿರುವ ಬಹುತೇಕ ಪತ್ರಿಕೆಗಳು, ಇತರ ಸಮೂಹ ಮಾಧ್ಯಮಗಳು ನಿರ್ಲಕ್ಷ್ಯದಿಂದ ಕಂಡ ಈ ಘಟನೆಯ ದಾಖಲೆಗಳನ್ನು 'ಸಂಕ್ರಮಣ' ಕನ್ನಡ ಜನತೆಯ ಮುಂದೆ ಇಡುತ್ತಿದೆ.

—**ಸಂಪಾದಕ**

ಕೆ. ವಿ. ರಂಗರಾಜು

ತಾಯಿಗಂಡರು

ಕಾಡು ಕಡಿದು ನಾಡು ಕಟ್ಟೋ ಜನರು ಬಂದರು
ಇರುವ ಕಾಡನೆಲ್ಲಾ ಕಡಿದು ಮನೆಗೆ ತಂದರು
ಮರದ ಮಂಚ ಕುರ್ಚಿಮಾಡಿ ಮನೆಯಲ್ಲಿಟ್ಟರು
ಮಂಚದಲ್ಲಿ ಮಲಗಿ ಅವರು ನಿದ್ದೆ ಹೋದರು
ಬೋಳು ಕಾಡ ನೋಡಿ ಮೋಡ ಚದುರಿ ಹೋಯಿತು
ನಾಡಿನಿಂದ ಮಳೆಯು ಬೇಗ ದೂರವಾಯಿತು.
ಜನರ ರೋದನ ಮುಗಿಲ ಮುಟ್ಟಿತು
ಕ್ಷಾಮ. ಡಾಮರ ರೋಗಗಳು ಮುತ್ತಿಕೊಂಡವು
ಪರಿಹಾರ ಕಾಮಗಾರಿ ಪ್ರಾರಂಭವಾಯಿತು
ಕೋಟಿ ಕೋಟಿ ರೂಪಾಯಿ ದುಡ್ಡು ಬಂದಿತು
ಧೂಳು ಎಬ್ಬಿಸಿ ಜೀಪುಗಳು ಓಡಾಡಿದವು
ಬಡವರನ್ನು ಮುಟ್ಟುವಲ್ಲಿ ವಿಫಲವಾದವು
ಆಳುವವನಿಗೆ ಚಿಂತೆ ಹತ್ತಿತು
ಕನ್ನಡ ಮಾತೆಗೆ ಮೊರೆ ಹೋದರು
ವಿಶ್ವ ಕನ್ನಡ ಸಮ್ಮೇಳನ ಮಾಡುವ ಎಂದರು
ದುಡ್ಡು ಹೊಡೆದು ಮೇಜು ಮೇಲೆ ಮಲಗಿಕೊಂಡರು.

ಸೆರೆಮನೆ
೧೫-೧೨-೮೫

ಡಿ. ಹೊಸಳ್ಳಿ ಶಿವು

ಪಾಳು ಮನೆ

ಮೊನ್ನೆ ಮೊನ್ನೆ ಎದ್ದ ಭೋರ್ಗರೆವ ಅಲೆಗಳು
ಕರಾಳಗರ್ಭದಲ್ಲಿ ಮಡುಗಟ್ಟಿ ರಾತ್ರೋ ರಾತ್ರಿ
ಕೇಸರಿ ಬಿಳಿ ಹಸಿರು ಕಣ್ಣಿಲ್ಲದ ಕೂಪ ಹಡೆದಾಗ
ನನ್ನೂರ ಪಾಳು ಮನೆಗೆ ಜೀವ ಬಂದಿದೆ.
ಅಲ್ಲಿ ನೇತು ಬಿದ್ದ ತೊಲೆಗಳು ಉಸಿರಾಡುತ್ತಿದೆ.
ಮೋಟು ಗೋಡೆಗಳು ಕತೆ ಹೇಳುತ್ತಿವೆ.
ಒಳ–ಹೊರಗೆಲ್ಲ ಉಗ ನಿರೋಜಾರು
ಏನೆಲ್ಲ ಬೆಳೆದು ನಿಂತಿವೆ.
ಕೆಂಪು ಕೆಂಪು ಹೂವುಗಳು ಅರಳಿ
ಚಕ್ಕಂದವಾಡುತ್ತಿದೆ.
ಜೇಡರ ಹುಡುಗಳು
ಇತಿಹಾಸದ ಚಿತ್ತಾರ ಬಿಡಿಸಿದೆ.
ಹಿತ್ತಲ ಬಾವಿಯ ಆಳದಲ್ಲಿ ಕಪ್ಪೆಗಳು
ವಟ ವಟ ಕೂಗುತ್ತಿವೆ.
ಮಧ್ಯೆ ಮಧ್ಯೆ ನಿಂತ ಕಂಬಗಳು
ಮತ್ತೊಂದು ಬಾವುಟಕೆ ಅಣಿಯಾಗಿವೆ.
ಮರೆತಿದೆ,
ಅದೇ ಹಾಳು ಮನೆಯಲ್ಲಿ
ಹಾವುಗಳು ಹರಿದಾಡುತ್ತಿವೆ
ಎಲ್ಲೆಂದರಲ್ಲಿ ತತ್ತಿ ಇಟ್ಟು.

ಎಸ್. ಬಿ. ನಾಗಭೂಷಣಸ್ವಾಮಿ

ಜೈಲಿನಲ್ಲಿ ವಿಶ್ವಕನ್ನಡ ಮೇಳ

ಜೈಲಿನಲ್ಲಿ ನಮ್ಮ ಮಿಲನ
ವಿಶ್ವ ಕನ್ನಡ ಸಮ್ಮೇಳನ
ಗೆಳೆಯ ಇದೇನೆಂದು ಕೇಳುವೆಯ.?
ನಮ್ಮ ದುರದೃಷ್ಟಕರವಾದ ವ್ಯಥೆಯ.
        ರಾಜ ಮಹಲಿನೊಳಾಂಗಣದಿ
        ಗಾಯತ್ರಿದೇವಿಯ ಸಾನ್ನಿಧ್ಯದಿ!
        ಪ್ರತಿ ವಾರದಂತೆ ನಡೆಸುತ್ತಿತ್ತು
        ನಮ್ಮ ವಿಚಾರ ಕೂಟ ಒಗ್ಗೂಡಿತ್ತು.
ಸಂಜೆಯ ಹೊಂಗಿರಣ ನಗರ ತುಂಬಿತ್ತು
ಸಂಪಿಗೆಯ ಸುವಾಸನೆ ಎಲ್ಲೆಲ್ಲೂ ಆವರಿಸಿತ್ತು!
(ಸ್ನೇಹ ಬಳಗ ಬರಲು ಸಭೆ ತುಂಬಿತ್ತು)
ಹರ್ಷದಿಂದ ನಗೆ ತುಂಬಿ ವಿಚಾರ ಬಂದಿತು.
        ವಿಶ್ವ ಕನ್ನಡ ಮೇಳದಲ್ಲಿ
        ಕಾರಂತ ಕುವೆಂಪುರವರ ಪಾತ್ರವೇನಲಿ
        ಎಂಬ ವಿಚಾರ ಚಕಮುಖಿ
        ಸಹೃದಯ ಹೃದಯ ಉಕ್ಕಿ
ಏಕೋ ದಿಗ್ಭ್ರಮೆ ಗೊಂಡಂತೆ
ಪೋಲೀಸರಿಗೆ ಬಂತು ನಮ್ಮ ಚಿಂತೆ
ಧಾವಿಸಿತು ಬೂಟುಶಬ್ದ ಲಾರಿಯೊಂದಿಗೆ ನಮ್ಮ ಕೂಟವತ್ತು
ವಿಚಾರ ವಿಮರ್ಶೆಗಳೆಲ್ಲ ನಿಂತು.
        ಗೂಬೆಯಂತೆ ಮುಖಮಾಡಿ

ಹದ್ದಿನಂತೆ ಕಣ್ಣನಿರಿದ ನೋಡಿ
ಯಮಧರ್ಮನಂತೆ ಪಾಶಮಾಡಿ
ನಮ್ಮನ್ನೆಲ್ಲ ವ್ಯಾನಿನಲ್ಲಿ ಕೂಡಿ
ನಾವು ಬಂದೆವು ಅವರ ಆಮಂತ್ರಣಕ್ಕೆ
ನೀವು ನಾವುಗಳೆಲ್ಲ ಸೇರಿದೆವು ಒಕ್ಕೂಟಕ್ಕೆ
ಜೈಲಿನಲ್ಲಿ ವಿಶ್ವ ಕನ್ನಡ ಸಮ್ಮೇಳನಕ್ಕೆ
ನಿಮ್ಮ ನಮ್ಮ ಮಧುರ ಬಾಂಧವ್ಯಕ್ಕೆ
ಭವ್ಯ ಮೇಳ ನಮ್ಮದಲ್ಲ
ಬಡವ ಬಲ್ಲಿ ನಮ್ಮವೆಲ್ಲ
ಫ್ಯಾನು, ಕುರ್ಚಿ ಧ್ವನಿವರ್ಧಕಗಳೊಂದೂ ಇಲ್ಲ
ಹೇಗೋ ಸಾಗಿತು ನಮ್ಮ ನಿಜ ಮೇಳ
ವಿದೇಶದ ಜನರು ಇಲ್ಲಿಲ್ಲ
ನಮ್ಮನಾಡಿನ ವಿವಿಧ ಜನರೆಲ್ಲ
ನಾಡಿನಾದ್ಯಂತ ಬರಗಾಲ
ನಮಗಿಲ್ಲ ಇನ್ನೂ ಚಳಿಗಾಲ
ರಾಜಕಾರಣಿ ಶ್ರೀಮಂತರ ಮೇಳ
ಮಾಡಿತು ಅದ್ದೂರಿಯ ಮೋಜಿನ ವಿಶ್ವಮೇಳ
ಕನ್ನಡ ಜನರ ಅದ್ದೂರಿಯ ಸಮ್ಮೇಳ
ಬಡವರಿಗಾಯ್ತು ಇದರಿಂದ ಗೋಳ.

ಕಾಂತರಾಜ್

ಈ ಜನ

ತಲೆ ಹಿಡುಕರಿವರು
ಮುದಿ ತಾಯಿ ಮೈಸೂರ
ತಲೆ ಹಿಡಿಯುವ
ದೀಪ ಸಿಮೆಂಟುಗಳ
ಮೇಕಪ್ಪು ಮಾಡಿ
ಖಯಾಲಿಗಳಿಗೆ ಮಾರಿ
ಮಂಚಕ್ಕೆ ದಿಂಬಾಗಿಸಿ
ಹಾಸಿಗೆಯಾಗಿಸುವ
ಬತ್ತಿಹೋದ ಬಾವಿಗೆ
ಜಲ ಬರಿಸಿ, ಮಿಂಡರನ್ನು
ಕೈ ಬೀಸಿ ಆಹ್ವಾನಿಸುವ
ಅಮಲಿನ ಗಬ್ಬೆನಿಸುವ
ವಾಸೆಯಲ್ಲಿ ಅಂಧತೆಯ
ಪ್ರತಿಪಾದಿಸುವ
ಬೇಳೆ ಬೇಯಿಸಿ ನೆಕ್ಕಿ
ರುಚಿ ತಿನ್ನ ಬಯಸುವ
ಈ ಜನ.

ಎ. ರಾಮಲಿಂಗಂ

ಅಲ್ಲಿ ಇಲ್ಲಿ—ವ್ಯತ್ಯಾಸ

ಹನ್ನೆರಡು ಕೋಟಿಯ ಲೂಟಿ ಅಲ್ಲಿ
ಪೈಸೆ ಖರ್ಚಿಲ್ಲದ ಸಮ್ಮೇಳನವಿಲ್ಲಿ
        ಬುದ್ಧಿ ಮಾರುಕೊಂಡಿರುವ ಮುದುಕರು ಅಲ್ಲಿ
        ಬಂಡಾಯವೆದ್ದಿಹ ನವಯುವಕರು ಇಲ್ಲಿ
ಮಹಲುಗಳಲ್ಲಿ ಮುಜುಗರ ಅಲ್ಲಿ
ಮರನೆರಳಲಿ ವಿಚಾರವಿಲ್ಲಿ
        ಕೊಳಕನು ಮುಚ್ಚುವ ಕಾರ್ಯಗಳಲ್ಲಿ
        ಬದುಕು ನೋವುಗಳ ಚಿಂತನೆಯಿಲ್ಲಿ
ಭ್ರಮೆಗಳ ಹುಟ್ಟಿಸುದ ಪ್ರಚಾರವಲ್ಲಿ
ವಿಚಾರವಂತಿಕೆ ಬೆಳೆಸುವರಿಲ್ಲಿ
        ಬಿಳಿ ಅನ್ನ ಬೇಳೆತೊವ್ವೆ ಗಟ್ಟಿ ಮೊಸರುಗಳಲ್ಲಿ
        ರಾಗಿ ಮುದ್ದೆ ಸೊಪ್ಪಿನಸಾರು ರೇಷನ್ ಅನ್ನ ಇಲ್ಲಿ
ತಿಂದೂ ತೇಗು ಹೂಸುಸಿದ್ದೆಗಳಲ್ಲಿ
ಹೊಟ್ಟೆ ಹುಳಿ ಚುರುಕು ಬರಹಗಳಿಲ್ಲಿ
        ಕಾಶ್ಮೀರು ಶಾಲು ಸಾಹಿತಿಗಳಲ್ಲಿ
        ಸಾದಾ ಬಟ್ಟೆಯ ಸಾಹಿತಿಗಳಿಲ್ಲಿ
ಮುಚ್ಚಿದ ಮೋಸದ ಸಾಹಿತ್ಯವಲ್ಲಿ
ಬಿಚ್ಚಿದ ಬಂಡಾಯ ಬರಹವು ಇಲ್ಲಿ
        ಬಾಲ ಬಡಕರ ಭ್ರಷ್ಟಮೇಳವಲ್ಲಿ
        ಬಂಡಾಯಗಾರರ ಕಳಕಳಿ ಇಲ್ಲಿ

ಸೆರೆಮನೆ
೧೫-೧೨-೮೫

ಗುರು ಗುರು ಸಾಹಿತಿ ಧ್ವನಿಗಳು ಅಲ್ಲಿ
ಗರಗಸ ಸಾಹಿತಿ ಧ್ವನಿಗಳು ಇಲ್ಲಿ
ಷಾತಿನ ಪೋಡಿಯು ಮೋಳವು ಅಲ್ಲಿ
ಕ್ರಾಂತಿಯು ಚಳುವಳಿ ಕಿಡಿಯುu ಇಲ್ಲಿ
ಸಿಕ್ಕಿದಷ್ಟು ಲಪಟಾಯಿಸಿ ಓಡುವ ಜಾತರೆ ಅಲ್ಲಿ
"ಊಟದ ಜೊತೆಗೆ ಓದು ಬರ" ರೂಪಿಸಿದವಿಲ್ಲಿ
ಹಾರ ಶಾಲುಗಳ ಕುಣಿತಗಳಲ್ಲಿ
ಖೈದೀ ಬಂಧನ ಧ್ವನಿಗಳು ಇಲ್ಲಿ

ಸೆರೆಮನೆ
೧೫-೧೨-೮೫

ಬಳ್ಳಾಲೆ ಬೆಟ್ಟೇಗೌಡ

ಬೆತ್ತಲೆ ಪ್ರಜೆಗಳು

ಕತ್ತಲು ರಾಜ್ಯದ ಬೆತ್ತಲೆ
ಪ್ರಜೆಗಳು ನಾವು
ಕತ್ತಲೆಯಲ್ಲೂ ಕೈಹಾಕಿ
ಬಾಚಿ ಒಡ್ಡು ಕಟ್ಟಿಕೊಂಡ
ಅದೆಷ್ಟೋ ಮಂದಿ
ಪ್ರಜೆಗಳಿಂದ ಪ್ರಭುಗಳಾಗಿ
ಬಡ್ತಿ ಹೊಂದಿದ್ದಾರೆ.

ನಿಯತ್ತಿನಿಂದಲೋ
ಕತ್ತಲೆಂಬ ಭಯದಿಂದಲೋ
ಕೈಕಟ್ಟಿ ಕುಳಿತವರಿನ್ನೂ
ಪ್ರಭುಗಳ ಆಜ್ಞೆಗಾಗಿ
ಕಂದು ಕರುಕಲಾಗಿ
ಮಿಕ ಮಿಕ ಕಣ್ಣು ಬಿಡುತ್ತ
ಬೆತ್ತಲಾಗಿಯೇ ಉಳಿದಿದ್ದಾರೆ.

ಬಳ್ಳಾಲೆ ಬೆಟ್ಟೇಗೌಡ

ಚಿಗುರುವ ಬೋಳು ಮರಗಳು

ಪಾಳು ನೆಲದ ಎಷ್ಟೊ ಬೋಳು (ಳ್)
ಮರಗಳು ದಿಢೀರ
ಚಿಗುರಿ ಟಿಸಿಲೊಡೆಯುತ್ತವೆ.
ಸೊಂಪಾದ ತಂಪು ನೀಡುವ
ಹಸಿರು ಕ್ರಾಂತಿಗೆ
ಆಹ್ವಾನ ನೀಡುವ
ಸದಾ ಲವಲವಿಕೆಯಿಂದಿರುವ
ಜೀವ ತುಂಬಿದ ಮರಗಳ ಮೇಲೆ
ಕ್ರೂರ ಕಣ್ಣುಗಳು ಕಲೆಹಾಕಿ
ನೆಲೆಯ ಸೆಲೆಯನ್ನು
ಬುಡಮಟ್ಟ ಕೀಳುವ
ಹುನ್ನಾರಿನ ಉನ್ಮತ್ತರು
ಬೋಳೆ ಮರ ಕಡೆವುದ ಬಿಟ್ಟು
ಹಸಿರು ತುಂಬಿದ ಮರಗಳ ಕೆಡುವಿ
ಭ್ರಾಂತಿಗೊಳಿಸಿ
ಕ್ರಾಂತಿಯಳಿಸಲು ಅವಲೋಕಿಸುತ್ತಾರೆ.

ಸೋಹನ್

ದಾರಿ

ಯಾವುದೋ ಅಂತಃಸತ್ವ ನನ್ನ ಹತ್ತಿಸುತಿದೆ
ಆ ಬೆಟ್ಟದ ಇಡಿಯಲ್ಲೊಂದು ಬಿಡಿ
ಓಡಾಡಿದ, ನೋಡದ ಊರುಗಳೆಲ್ಲವ ತೋರಲು
ನಿಲ್ಲಿಸಿ, ಹಿನ್ನೋಡಿಸಿ, ಮತ್ತೆ ಮುಂದೊಯ್ಯಿತು ದಾರಿಯು ಮೇಲೆ

ತುದಿಯಾಚೆಯಲಿ ಫಳಾರೆಂದವು
ಮತ್ತಷ್ಟು ಬೆಳಕು ಬಿಸಿಯು ಬಣ್ಣಗಳು
ಮಾತುಗಳು ನಗೆಹನಿ ಕೊಡವಲ್ಲಾ
ಕಣ್ಣುಗಳನ್ನ ಬಣ್ಣ ತೆಗೆಯುವಲ್ಲಾ
ಸೊರಗಿದ ಸೂಳೆಯಾದನಲ್ಲಾ
ದೂರಕೆ ಬಿಚ್ಚಿದ ಬದುಕಿನ ಬಿಳಿಸಾರಿಕೆ ಕಾಲನ
ಕೈ ಹಿಡಿದಾಗ

ಈ ನಗು ಏನ ಹೊಳೆಯಿಸಿತು
ಆ ಅಳುವನ ಮುಳುಗಿಸಿತು
ಈ ಕೋಪ ಏನ ಸುಟ್ಟೀತು
ಆ ಆಸೆ ಏನ ಮೂಡಿಸಿತು
ಅಥವಾ... ಇವು ಬಗೆದದ್ದೇನು

ಅಬ್ದುಲ್ ರಶೀದ್

ಚಂದ್ರಾಬಾಯಿ ಮತ್ತು ಪಪ್ಪಾಯಿ

ಬಿಜಾಪುರದ ಆಕಿ ಅವ್ವಾ ಚಂದ್ರಾಬಾಯಿ
ಹಿತ್ತಲಲ್ಲಿ ಪಪ್ಪಾಯಿ ಹೂ ಕಾಯಿ ಹಣ್ಣು
ಹತ್ತಿ ಪುಟ್ಟ ಶ್ಯಾವಂತಿ ಗಿಡ
ಹಿತ್ತಲಲ್ಲಿ ನಗುತ್ತಾನೆ ಗುಲಾಬಿ !
ನನಗೆ ಪತ್ರಿಕೆಗೆ ವಿವರ ಬೇಕಾಗಿತ್ತು,

ಅವ್ವಾ ಚಂದ್ರಾಬಾಯಿ ಯಾವೂರು ತಾಯಿ
ಯಾವ ನೆಲಾ ಯಾವ ಮನೆ ಯಾವ ದೇವತಾ
ತಾಯಿ ಊರ ಹೊಲಾ ಯಾರ ದನಾ ಮೇಯುತಾವ
ಹೀಗ್ಯಾಕೆ ಬೆಳಿಸಿದೀ ತಾಯಿ ಈ ಪಪ್ಪಾಯಿ
ನೀ ನಾಳೆ ನಾಡಿದ್ದೂ ಮೇಳಕ್ಕೆ
ವಿಮಾನ ಬರೋ ಜಾವಕ್ಕೆ ಯಾವ ಕಾಯಿ
ಯಾವ ಹೂ ಯಾವ ಹಣ್ಣು ಗಾಳಿಗೆ ಹಾರುತಾವ
ನೋಡು ನಿನ್ನೆ ಹಣೆ ಗುಲಾಬಿ ಹೂ ಬೊಟ್ಟು
ಮಾಯುತಾವ ದೂಳು ಕೆದರಿ
ತಾಯಿ ಇದಾವ ಮಾಯಿ ಈ ಪಪ್ಪಾಯಿ । ನೀ
ಬೆಳಿಸಿದಾ ಕಾಯಿ ಮಾಗ್‌ತಾವಾ
ಹಣ್ಣಾಗತಾವಾ । ನಾಳೆ ಜಾವ ನೀ ಯಾವ ಊರು ತಾಯಿ ?

ಆಕಿ ಅವ್ವಾ ಚಂದ್ರಾಬಾಯಿ ನಕ್ಕಳು
ಜೋಳದ ಹೂವಿನಂತೆ । ತೆನೀ ತೆನೀ ಪರಡಿ
ಕೆನ್ನೆಗಂಳೀ ಕರಗಿ 'ಮಗಾ'

ಅಂದಳು । ಮಗಾ ಅರಳತಾವ ಹತ್ತೀ
ಬಿಜಾಪುರದ ಯವ್ವ ಯಲ್ಲಮ್ಮ
ಸಾವಿರದ ಮಾರಿ ಎರೇನೆಲಾ ಹತ್ತಿಹೂವ
ಹೊತ್ತಿನಾಗ ಅರಳತಾವ ಅಂಗಳದಾಗ
ಹತ್ತಿ ಶ್ಯಾವಂತೀ ಬೀರುತಾವ ನೆನತ
ಮೂಲೆಯೊಳಗ ಮಗಾ ಹಾಡ್ತಾದ
ಹೂವು ಮುಂಜಾವದಾಗ ಎದೇ
ಗುಡಿನೊಳಗ ಮಗಾ ಈ ಮೇಳಾ
ಈ ಇಮಾನಾ ಈ ನೆಲದ ದೂಳಾ
ನೋಡು ಮಾಯುತಾವ ಈ ವೇಳಯೊಳಗೆ

ಬಂಜಗೆರೆ ಜಯಪ್ರಕಾಶ್

ಸಾವಿನ ಸರಪಣಿಯ ಕೊಂಡಿ

ಪ್ರಿಯ ಬೆಂಜಮಿನ್ ಮೊಲಾಯಿಸ್§
ನನ್ನ ನಾಡಿನ ಪ್ರತಿ ಮಹಲು
ಪ್ರಿಟೋರಿಯಾದ ಬಂಧಿಖಾನೆ

ಬೆಳಕು ಹಾಯದ ಹೃದಯ ಗುಹೆಗಳಲಿ
ಪ್ರತಿದಿನವೂ
ನೆಲಕೆ ಮಿಡಿವ ಹೃದಯವ
ಸಭೆಕೆ ತೂಗಿದ ಸಡಗರ
ನೇಣು ಕುಣಿಕೆಯ ಉಡುಗೂರೆ

ನೇಣು ಕುಣಿಕೆಗೆ ಕ್ರಾಂತಿ ಪಲ್ಲವಿ । ಕಲಿಸಿದವನೇ
ಪೆನ್ನಿಗೆ ತುಂಬಿದ ಮಸಿ ಮುಗಿವ । ಮೊದಲು
ಸಾವಿನಲ್ಲಿಯೂ ತೋಳ ತೆಕ್ಕೆಗೆ ಜಾರಿದವನೇ

ಇಲ್ಲಿ ನಿನ್ನ ಸೋದರ ನಾನು
ಸಾವಿನ ತಣ್ಣನೆಯ ಕೈಗಳು
ಆಕ್ರಮಿಸುವ ಭಯದಲ್ಲಿ
ಕಪ್ಪು ಹಣದವರು ರಕ್ತವಿಲ್ಲದೆ ಬಿಳಚಿ
ಕೊಂಡವರ ತಿನ್ನುವುದು ವೀಕ್ಷಿಸುತ್ತಿದ್ದೇನೆ

ಬೆಂಜಮಿನ್, ನೀನು ಹೋರಾಟಕ್ಕೆ ಸಂಕೇತ
ನಿರೀಕ್ಷೆಯ ಹಾದಿಯ ಮೈಲಿಗಲ್ಲು
ಈ ಜೀವಂತ ಪದಗಳು
ಬಣ್ಣ ಮಾಸದ ಸ್ಮಾರಕ
ಸ್ಕೋಸಿ† ನಿಕಲೆ ಆಫ್ರಿಕಾಕ್ಕೆ ಮರುಧ್ವನಿ
ನಿನ್ನ ಸಾವಿನ ಸರಪಳಿಯ ಕೊಂಡಿ.

---

§ ಆಫ್ರಿಕಾದ ಕ್ರಾಂತಿಕಾರಿ ಕವಿ. ಬೋಥಾ ಸರ್ಕಾರ ನೇಣು ಹಾಕಿತು.

† ಕಪ್ಪು ಜನರ ಸ್ವಾತಂತ್ರ್ಯಗೀತೆ.

ಕೆ. ಎಸ್. ಕೇಶವಪ್ರಸಾದ್

ಸುಳ್ಳುಗಳ ಸರಕಾರ ಹೇಳಬೇಕಾದ ಹಾಡು

ಸುಳ್ಳುಗಳು ಕುಣಿಯುತ್ತಲೆ
ಭ್ರಮೆಗಳು ಉದುರಿ ಬಿದ್ದಿವೆ
ಕನಸುಗಳು ನಿರ್ನಾಮವಾಗಿವೆ
ಗೂಡು ಕಟ್ಟಿ ಹಾರಿ ಹೋದ ಹಕ್ಕಿ
ನಗಲಿಲ್ಲವೋ.

ಹಂಗಿನ ಅರಮನೆಯ ಜೀತಗಾರರೇ
ವಿಕಟನಗೆ ನಗಬೇಡಿರೋ
ಹಾರಿ ಹೋದ ಹಕ್ಕಿಯನ್ನು
ಹುಡುಕ ಬೇಡಿರೋ

ಭ್ರಮೆಯ ಹಿಡಿದು ಕವನ ಉಂಡೆ
ಸುಳ್ಳುಗಳ ಚಕ್ರ
ಒಳಗಿದ್ದ ನೇಗಿಲ
ಹೊತ್ತಿದ್ದ ರೈತ
ಕಡೆಯದಾಗಿ ಹಾಡು ಬಾರೋ
ನನ್ನ ಚರಮಗೀತೆ

ಕಣ್ಣಲ್ಲಿ ಕೆಂಡ
ಎದೆ ತುಂಬ ಪ್ರೀತಿ
ಬಚ್ಚಿಟ್ಟುಕೊಂಡ ಗೆಳೆಯರೇ ನೀವೂ
ನಗ ಬೇಡಿರೋ.
ಮರಳು ದಾರಿಯ ಮೇಲೆ
ಮರಣ ಗೀತೆಯಾ ಸುಯ್ಲು
ಅಪ್ಪಿಕೋ ನನ್ನನು ಓ ಮಸಣವೇ.

ಕೊಡಗಿನ ಗಣೇಶ್

ನಡೆಯುತ್ತಿದೆ ನಿರಂತರ

ಕಟ್ಟಿದರು ಮಹಲುಗಳ ನಮ್ಮ ಗೋರಿಯ ಮೇಲೆ
ದಿನ ನಿತ್ಯ ಅರೆದು ಗಾರೆ ಬಣ್ಣಗಳೊಡನೆ
ಹಿಂಡಿದ ಬೆವರು ರಕ್ತವಾಗಿ ಹರಿದಿತ್ತು ಹೊಳೆಯಾಗಿ
ಹಸಿವು ಮರೆಯಾದ ಮಹನೀಯರ ಕಾಲಕೆಳಗೆ
ಅತ್ತ ಕುಡಿಯಲು ನೀರಿಲ್ಲ ದನಗಳಿಗೆ ಮೇವಿಲ್ಲ
ಹೀರ ತೊಡಗಿವೆ ರಣಹದ್ದುಗಳು ಮತ್ತು ತರುವ ಮದ್ಯಗಳ
ಅನ್ನ ಕಾಣದ ಆದಿವಾಸಿಗಳು ತಿನ್ನತೊಡಗಿದರು ಕಾಡುಮಣ್ಣು
ಜೀವನ ತುಂಬಿದ ದೇಹ ನಡೆಸಲು
ಕಸಾಯಿಖಾನೆಯ ಕತ್ತಿಗಳು ಕಟ ಕಟ ಕಡಿದವು
ಮೇವುಕಾಣದ ಮೂಕ ಪಶುಗಳ
ಆಗಸದ ಮಳೆಹನಿಗೆ ಅತ್ತವನೇ ಕೈಚಾಚಿ
ಅನ್ನಕಾಣದ ರೈತ ನೋವಿನ ರಾಗ ಹಾಡುತ್ತ
ಸೂರಿಲ್ಲದ ಮನೆಯೊಳಗೆ ಕಲಿಯುತ್ತಿವೆ ಕೂಗುಗಳು
ಇಂದಿನ ಮಕ್ಕಳೆ ಮುಂದಿನ ಪ್ರಜೆಗಳೆಂಬ
ಘೋಷಣೆಯೊಡನೆ
ಮಾರಿಕೊಂಡವರ ಮೈಯ ನೆಕ್ಕುತಾ
ರಾಕ್ಷಸರಾದ ಆಳುವವರು ನಡೆದು ನಲಿಯುತ್ತಿದ್ದಾರೆ
ನಮ್ಮವರ ಎದೆಯ ಮೇಲೆ ಬೂಟುಕಾಲಿನ ಮುಳ್ಳು ನಾಲಿಸುತ್ತಾ
ಎದೆಯೆತ್ತಿ ನಿಂತವರ ತುಳಿದಿಟ್ಟು ಕುಕ್ಕವರೆ
ದೊಡ್ಡಿಯಂತಹ ಕೊಳಕು ಬಂದಿಖಾನೆಗೆ...
ಆದರೂ
ಸಂದಲಿಲ್ಲ ನಮ್ಮಗೆಳೆಯ ಚಿಲುಮೆ
ಚಿಗುರ ತೊಡಗಿದೆ ನಿತ್ಯ ನಿರಂತರ
ಗುರಿಯ ಹಾದಿ ಕಡೆಗೆ.

ಚಲಾವಣೆ

ಹಗಲು ಹೊತ್ತಲ್ಲಿ
ಹರಕು ನೋಟುಗಳು ನಡೆಯುವುದಿಲ್ಲ
ಸಿಟಿ ಬಸ್ಸಿನ ಕಂಡಕ್ಟರನಾಗಲೀ
ಬೀಡಾ ಅಂಗಡಿಯ ಕಾಕಾ ಆಗಲೀ
ಸಿನಿಮಾ ಮುಂದಿರುವ ಕ್ಲರ್ಕನಾಗಲೀ
ಯಾರಿಗೂ ಬೇಡ ಈ ಬೇವಾರ್ಸಿನ ನೋಟು
ಹಗಲು ಹೊತ್ತಲ್ಲಿ ಹರಕು ನೋಟು ನಡೆಯುವುದಿಲ್ಲ

ಹರಕು ನೋಟಿಗೂ ಕಾಲವಿದೆ
ಕಂಡಕ್ಟರನ ಕೈಯಿಂದ
ಬಂದರೆ. ಹೋಟಲಿನ ಗಲ್ಲ ಪೆಟ್ಟಿಗೆ ಬಂದರೆ
ಕೆಲವೊಮ್ಮೆ ಈ ನೋಟುಗಳು
ನಡೆಯುವುದೇ ಅಲ್ಲ. ಓಡುವುದೂ ಇದೆ.

ಆದರೆ ರಾತ್ರಿ ಹೊತ್ತಲ್ಲಿ
ತೊಂದರೆಯೇ ಇಲ್ಲ
ಹರಕು ನೋಟಿಗೆ ಹೈವೇ ಸ್ಪೀಡು
ಇದಕ್ಕೆ ಕಾರಣ ಎರಡು
ಒಂದು ರಾತ್ರಿಯ ಕತ್ತಲು
ಇನ್ನೊಂದು : ಹರಕೋ ಮುರುಕೋ
ಈ ರಾತ್ರಿಗೊಂದು ಬೇಕಲ್ಲ.

ಎಸ್. ಗಂಗಾಧರಯ್ಯ

ಮತ್ತೆ ಹಾದರಕೆ

ಒಳಗೊಳಗೆ ಮಡುವುಗಟ್ಟಿದ
ಕೊಳಚೆ ನೀರಲ್ಲಿ ಮಿಂಚಿ
ಮನದ ಮೈಲಿಗೆಯು ಹಾದರತೆ
ಹದ್ದಾಗಿ ಹಾರುತ್ತೇನೆ
ನನ್ನದೇದೆನುವ ಎಲ್ಲದರ ಮೇಲೆ.

ಆಗ ನೆನಪಿನಾಳದಲ್ಲಿ
ನನ್ನ ಮಣ್ಣಿನ ವಾಸನೆ ಮೂಗಿಕಡರಿ
ನನ್ನವ್ವ ಅಪ್ಪರನ್ನು ನೆನೆದು
ಅಲ್ಲಿಯ ಹೊಲ, ಬೇಲಿ, ಗದ್ದೆಗಳ ಹಸಿರು
ಸಂಜೆ, ಮುಂಜಾವಗಳ ಹೊಂಬಣ್ಣ
ನಿಸರ್ಗದ ಚೆಲುವ ಸವಿಯಲು ಪುರಸೊತ್ತಿಲ್ಲದೆ

ದಿನಗಟ್ಟಲೇ ವರ್ಷಗಟ್ಟಲೇ ರಕ್ತವನ್ನು
ನೀರು ಮಾಡಿ ದುಡಿವ ಕೂಲಿಗಳು
ಪೆಡ್ಡ ಹುಡುಗ–ಹುಡುಗಿಯರು
ಬೇಲಿ ಮರೆಯಲ್ಲಿ ಆಡುವ ಪ್ರೀತಿಯಾಟಗಳು
ಮನದ ಕಥಕಟ್ಟಿ ಬೆಳ ಇಡುಕಿ
ಮೌನ ಹುತ್ತಗಟ್ಟುತ್ತಿರುತ್ತದೆ.

ಆಗ, ಕೆಕ್ಕರಿಸುತ್ತವೆ
ಮನದಾಳಕ್ಕೆ ಗುರಿಯಿಟ್ಟು
ಮನುಷ್ಯರಂತೆ ಕಾಣುವ ಮಾಂಸ ಪರ್ವತಗಳು
ಹೊಟಲ್ ಸಿನಿಮಾ ಪಾರ್ಕುಗಳಲ್ಲಿ

ದಿನವಿಡೀ ಹರಕಲು ಬಾಯಿಗಳು ಸುರಿಸುವ
ಜೊಲ್ಲನ್ನು ಸೊರೆಸೊರೆದು ಕುಡಿದು
ವ್ಯೈಮನಗಳನ್ನು ಸಚ್ಚೆಗೆ ಮಾಡಿಕೊಳ್ಳುವ
ಸೋಗಲಾಡಿಗಳು.
ಸೀಳುತ್ತವೆ,

ಮೊನಚು ಮುಸೆಯಿಂದ
ಮುಡುವು ಕಟ್ಟಿದ ಮೌನದೆಡಗೆ.
ಕಂಡ ಕಂಡವರ ನಡುವಿಡಿದು ಬದುಕುವ
ಸಿಂಡರಿಸಿದವರ ಹಾದರಕೆಳೆಯಲೆತ್ನಿಸುವ
ಗುಲಾಮು ದಳ್ಳಾಳಿಗಳು
ಆಗ,

ಸ್ನಿಗ್ಧ ಮುನಸ್ಸಲಿಸಿ
ಬೆತ್ತಲಾಗುತ್ತದೆ, ಮತ್ತೆ ಹಾದರಕೆ.

ಡಾ| ಶಂಕರ ಮೊಕಾಶಿ ಪುಣೇಕರ

ಕನ್ನಡದಲ್ಲಿ ಆರವೆಲ್ಲನ '೧೯೮೪'*

ಸಾಹಿತ್ಯಾಸಕ್ತ ಕನ್ನಡ ಬುದ್ಧಿಜೀವಿಗಳು ಇಂಗ್ಲಿಷ ಸಾಹಿತ್ಯಾಭ್ಯಾಸಕ್ಕೆ ತೊಡಗುವದು ಸಾಮಾನ್ಯ ಅನುಭವ. ಉದ್ದೇಶ ಇಂಗ್ಲಿಷ ಪ್ರಾಧ್ಯಾಪಕನಾಗುವದು. ಮುಂದೇನು ? ಸಮರ್ಪಕ ಉತ್ತರವಿಲ್ಲ. ಕೆಲವರು ಕನ್ನಡದಲ್ಲಿ ತಮ್ಮ ಸಾಹಿತ್ಯಾಭ್ಯಾಸದಿಂದ ಸ್ಫೂರ್ತಿ ಪಡೆದು ಕತೆ ಕಾದಂಬರಿ ರಚಿಸುತ್ತಾರೆ. ಇನ್ನು ಕೆಲವರು ಪಾಶ್ಚಾತ್ಯ ಕೃತಿರತ್ನಗಳನ್ನು ಅಭ್ಯಾಸಮಾಡಿ, ಬೆಕ್ಕಸ ಬೆರಗಾಗಿ ಬರೆಯುವದನ್ನೇ ಬಿಡುತ್ತಾರೆ. ಸಮರ್ಥ ಪ್ರಾಧ್ಯಾಪಕ ಮೈಸೂರು ವಿಶ್ವವಿದ್ಯಾಲಯದ ಇಂಗ್ಲೀಷ ಪ್ರಾಧ್ಯಾಪಕ ಅಣ್ಣಯ್ಯಗೌಡರು ಜಾರ್ಜ ಆರವೆಲ್ಲನ ೧೯೮೪ ಕಾದಂಬರಿಯನ್ನು ಕನ್ನಡಕ್ಕೆ ತರ್ಜುಮೆಗೊಳಿಸಿ ೧೯೮೪ ಇಸ್ವಿಯಲ್ಲೇ ಬರುವಂತೆ ಮಾಡಿದುದು ಅರ್ಥಪೂರ್ಣ. ಇಂಗ್ಲಿಷದಲ್ಲಿ ಇಂಥ ಭವಿಷ್ಯೋತ್ತರ ಪುರಾಣಗಳು ಹಲವಾರು ಬಂದಿವೆ. ಎಚ್. ಜಿ. ವೆಲ್ಸನ ಟೈಮ್ ಮಶೀನ್ ಎಂಬ ಪುಟ್ಟ ಕಾದಂಬರಿಯಲ್ಲಿ, ಇತರ ಕಾದಂಬರಿಗಳಲ್ಲಿ (ಉದಾ: When the Slerper Workes; Days of the Comet), ಭವಿಷ್ಯತ್ಕಾಲದ ಸಂಭಾವ್ಯತೆಗಳನ್ನು ಆಧರಿಸಿದ ಘಟನೆಗಳು ಬರುತ್ತವೆ. ಜಾರ್ಜ ಆರ್‌ವೆಲ್ಲ (ಎರಿಕ್ ಬ್ಲೇರ) ೧೯೪೯ರಲ್ಲಿ ೧೯೮೪ದ ಜೀವನದ ರೂಪರೇಷೆಗಳನ್ನು ವರ್ಣಿಸಿದ್ದಾನೆ. ೧೯೮೪ರಲ್ಲಿ ನಾವು ಭಾರತೀಯರು ಇಂದಿರಾ ಯುಗದಿಂದ ಆಗ ತಾನೆ ಎದ್ದು ರಾಜೀವ ಯುಗವನ್ನು ಪ್ರವೇಶಿಸುತ್ತಿದ್ದೆವು. ಆರವೆಲ್ ೧೯೨೨ರಿಂದ ೧೯೨೭ರ ವರೆಗೆ ಬರ್ಮಾದ ಪೋಲಿಸ್ ದಳದಲ್ಲಿ ಕೆಲಸ ಮಾಡಿ, ಸಾಮ್ರಾಜ್ಯಶಾಹಿಯ ಸವಿ-ಕಹಿಗಳನ್ನು ನೋಡಿದವನು. ಆದರೆ ಜೊತೆಗೆ ಸ್ಪೇನ್ ಯಾದವೀ ಯುದ್ಧದಲ್ಲೂ ಪತ್ರಕರ್ತ–ಸ್ವಯಂ ಸೇವಕನಾಗಿಯೂ ಅನುಭವ ಪಡೆದವನು. ಬಡವನಾದ್ದರಿಂದ ರಾಜಕೀಯ ಕ್ರಾಂತಿಗಳತ್ತ ಅವನ ಒಲವು ವಿಶೇಷವಾಗಿತ್ತು. ಹಿಟ್ಲರನ ಕಾಲದಲ್ಲಿ ಅಗತ್ಯವಾದ ಪ್ರಚಾರ ಮಾಧ್ಯಮಗಳ ಜೊತೆಗೂ ಅವನ ಪ್ರತ್ಯಕ್ಷ ಸಂಪರ್ಕ ಬಂದಿತ್ತು. ಅವನು ಎಡಪಕ್ಷದವನಾದರೂ, ಎಡಪಕ್ಷ ಸರಕಾರೀ ಸಂಪರ್ಕ ಮಾಧ್ಯಮ

ಗಳನ್ನು ಅತಿಯಾಗಿ ಬಳಸಿಕೊಂಡರೆ ಏನಾಗುತ್ತದೆ ಎನ್ನುವದನ್ನು ಕಂಡಿದ್ದನು. ಯುದ್ಧಕಾಲದಲ್ಲಿ ಅಮೇರಿಕ–ಇಂಗ್ಲೆಂಡ–ರಷ್ಯಗಳು ಹಿಟ್ಲರನ ವಿರೋಧವ ಮಟ್ಟಿಗೆ ಒಂದಾದವು. ಯುದ್ಧ ಮುಗಿದ ತಕ್ಷಣ ಪರಸ್ಪರ ದ್ವೇಷಾಸೂಯೆ ಮಾಡತೊಡಗಿದವು. ಇದನ್ನೇ ವ್ಯಂಗವಾಗಿ Animal Farmದಲ್ಲಿ ಚಿತ್ರಿಸಿದ್ದಾನೆ. (ಡಾ. ಅಣ್ಣಯ್ಯ ಗೌಡರು ೧೯೫೩ರಲ್ಲಿ ಇದನ್ನು **ಮೃಗಪ್ರಭುತ್ವ** ಹೆಸರಿನಿಂದ ಅನುವಾದಿಸಿದ್ದಾರೆ.) ಆದರೆ ೧೯೪೯ರಲ್ಲಿ ಆರ್‌ವೆಲ್ಲ ಪ್ರಕಟಿಸಿದ ಕಾದಂಬರಿ ೧೯೮೪ ಇನ್ನೂ ದೊಡ್ಡ ಯಶಸ್ಸನ್ನು ಪಡೆಯಿತು. ೧೯೮೪ರಲ್ಲಿ ೧೯೮೪ ಕಾದಂಬರಿ ಅನುವಾದಿಸಿ ಪ್ರಕಟಿಸಿದ ಮೂಲಕ, ೧೯೫೦ರಲ್ಲಿ ಆರವೆಲ್ಲನಿಗೆ ಇದ್ದ ಭೀತಿಯಂತೆ ಜಗತ್ತು ರೂಪಗೊಂಡಿತೇ, ಎಂದು ವಿಚಾರ ಮಾಡುವದು ಸಾಧ್ಯವಾಗಿದೆ. ಸಮರ್ಥ ಅನುವಾದ.

ಡಾ. ಸಿ. ಎಂ. ಕುಲಕರ್ಣಿ ಈ ಕಾದಂಬರಿ ಓದುವಾಗ ನನಗೆ ನೆನಪಾಗುತ್ತಿದ್ದರು. "ಯಾವ ಆಡಳಿತವೂ ನಿರಂಕುಶ ಪ್ರಭುತ್ವವಾಗಿ ಹತ್ತುವರ್ಷ ಬದುಕಲಾರದು" ಎಂದು ನಮ್ಮ ಕೊನೆಯ ಭೇಟಿಯಲ್ಲಿ ಹೇಳಿದ್ದರು. ನಮ್ಮಲ್ಲಿ ನಾವ್ಯಾರೂ ನಿರಂಕುಶ ಪ್ರಭುತ್ವ ನೋಡಿಲ್ಲ. ನಮ್ಮಲ್ಲಿಯೂ ಒಬ್ಬ ಹೆಣ್ಣುಬಾಲಿ ಪ್ರಧಾನಿಯಾಗಿದ್ದರು. ನಮ್ಮಲ್ಲಿಯೂ ೨೦ ತಿಂಗಳು ಇಮರ್ಜನ್ಸಿ ಇತ್ತು. ಯಾವ ಕಾಲದಲ್ಲೂ ನಮ್ಮಲ್ಲಿ ಆರವೆಲ್ ಬಣ್ಣಿಸಿದ ಸ್ಥಿತಿ ಬರಲಿಲ್ಲ. ಇಮರ್ಜನ್ಸಿಯನ್ನು ಕೂಡ ಬಡವರಿಗಾಗಿ ೩೦ ಅಂಶ ಕಾರ್ಯಕ್ರಮ ಜಾರಿಯಲ್ಲಿ ತಂದು, ಒತ್ತೆಯಾಳುಗಳನ್ನು ಬಿಡಿಸಿ ಅವರಿಗೆ ಸ್ವತಂತ್ರ ಉದ್ಯೋಗ ಕಲ್ಪಿಸುವ ಪ್ರಯತ್ನಗಳೇ ನಡೆದವು. ಪತ್ರಕರ್ತರು ಏನೇ ಕೂಗಾಡಲಿ, ಆ ಪರಿಸ್ಥಿತಿ ಬರಲಿಲ್ಲ. ಕೆಲವು ತಪ್ಪುಗಳು ಆಗಿರಬಹುದು. ಆದರೆ ನಿರಂಕುಶತೆಯಂತೆ ದೇಶ ನಡೆಯಲಿಲ್ಲ. ಆದಷ್ಟು ಬೇಗ ಮರು ಚುನಾವಣೆ ನಡೆದು ಗೆದ್ದವರಿಗೆ ಅಧಿಕಾರ ಬಿಟ್ಟುಕೊಡಲಾಯಿತು. ಇಮರ್ಜನ್ಸಿ ಬರುದಕ್ಕೆ ಸಾಕಷ್ಟು ಕಾರಣಗಳಿದ್ದವು. ಆಗ ಜೈಲಿಗೆ ಹೋದವರೇ ನಂತರ ಅಧಿಕಾರಕ್ಕೆ ಬಂದರು. ನಮಗೆ ನಿರಂಕುಶ ಪ್ರಭು ತನ್ನ ನಿರಂಕುಶತೆಯನ್ನು ಜುಲುಮೆ-ಜೊರಾವರಿ ಸ್ಥಾಪಿಸಿ ಮಾನಸಿಕ ಒತ್ತಡ ತಂದು, ಯಂತ್ರಗಳ ಸಹಾಯದಿಂದ ನಮ್ಮ ಮಾನಸಿಕ ಗುಲಾಮಗಿರಿಯನ್ನು ಖಾಯಂಗೊಳಿಸುವ ಪ್ರಯತ್ನ ಮಾಡಲಿಲ್ಲ. ನಮಗೆ ಯಂತ್ರಯುಗದ ನಿರಂಕುಶ ಪ್ರಭು ಹೇಗೆ ಇದ್ದಾನೆಂಬುದು ಇನ್ನೂ ಗೊತ್ತಿಲ್ಲ.

೧೯೪೯ರಲ್ಲಿ ಪ್ರಕಟವಾದ ೧೯೮೪ ರಶ್ಯದ ಆಡಳಿತ ಮಾದರಿ ಚಿತ್ರಿಸುತ್ತದೆಯೆಂದು ಇಂಗ್ಲೀಷ ಓದುಗರು ಅಭಿಪ್ರಾಯ ಪಟ್ಟಿದ್ದಾರೆ. ಆರವೆಲ್‌ನ ಕಾದಂಬರಿಯಲ್ಲಿ ರಶ್ಯದ ಹೆಸರೇ ಇಲ್ಲ. ಇಂಗ್‌ಸಾಕ್ ಎಂಬ ಇಂಗ್ಲೆಂಡಿನ ಪಾರ್ಟಿ ಅಧಿಕಾರಕ್ಕೆ ಬಂದಿದೆ. (English Socialist Party)ಯಿಂದ ಈ ಪದ ಬಂದಿರಬಹುದು. ಯಂತ್ರೀಕೃತ ಉದ್ಯಮೀಕೃತ ಒಂದು ನಾಡಿನಲ್ಲಿ ಇಬ್ಬದಿ ಪ್ರಚಾರ ಪದ್ಧತಿಯಿಂದ ಕೇಂದ್ರೀಕೃತ

ಆಪಳಿತವಿದ್ದಾಗ ಹುಟ್ಟಿದ ಪರಿಸ್ಥಿತಿಯನ್ನು ಆರ್‌ವೆಲ್ ಚಿತ್ರಿಸಿದ್ದಾನೆ. (ಅಂದರೆ ಟಿ. ವಿ. ಕೇವಲ ಪ್ರಸಾರ ಮಾಡುವುದಿಲ್ಲ; ನಮ್ಮ ನಡೆವಳಿಕೆಯನ್ನು ರೆಕಾರ್ಡ ಮಾಡಿ ಸರಕಾರೀ ಸಂಗ್ರಹಾಲಯದಲ್ಲಿ ರುಜುವಾತಾಗುತ್ತಿರುತ್ತದೆ. ಸಂಶಯಾಸ್ಪದವಾಗಿ ನಡೆದುಕೊಂಡರೆ, ಮುಖ್ಯಸ್ಥನ ಚಿತ್ರ ಬಂದೊಡನೆ ಮುಖ ಕಿವಿಚಿದರೆ, ಅದರ ರಿಕಾರ್ಡ ಆಗುತ್ತದೆ. ಹೀಗೆ ಇಡೀ ರಾಷ್ಟ್ರ ಒಂದು ಕಾನ್‌ಸೆಂಟ್ರೇಶನ್ ಕ್ಯಾಂಪ್ ಆಗಿ, ಪ್ರತಿ ನಾಗರಿಕನ ಅಂತರಂಗದ ಮಾತುಗಳೂ ಸರಕಾರಕ್ಕೆ ತಿಳಿಯುತ್ತವೆ. ಇವನ್ನು ವಿಶ್ಲೇಷಿಸಲಿಕ್ಕೆ Thought police ಇಟ್ಟಿರುತ್ತಾರೆ-ಯಾವ ಕೋಣೆಯಲ್ಲೂ ಖಾಸಗೀ ಗೃಹ್ಯಜೀವನ ಶಕ್ಯವಿಲ್ಲ. Big Brother (ಇಲ್ಲಿ 'ಹಿರಿಯಣ್ಣ') ಎಲ್ಲ ಪೋಸ್ಟರುಗಳ ಮೇಲೆ ಮುದ್ರಿತನಾಗಿ 'ಹಿರಿಯಣ್ಣ ನಿನ್ನನೇ ನೋಡುತ್ತಿದ್ದಾನೆ' ಎಂದು ಎಲ್ಲೆಲ್ಲೂ ಘೋಷಿಸುತ್ತಿದ್ದಾನೆ.

೧೯೪೫ರಲ್ಲಿ ಯುದ್ಧ ಮುಗಿದೊಡನೆ, ಸ್ಟ್ಯಾಲಿನ್‌ನ ರಶ್ಯದಲ್ಲಿ ಈ ಪರಿಸ್ಥಿತಿ ಬರುವ ಸಂಭಾವ್ಯತೆ ಇತ್ತೆಂದು ಇಂಗ್ಲಂಡಿನಲ್ಲೇ ಭಯ ಶುರುವಾಗಿತ್ತು. ಆ ಭಯ ಸುಳ್ಳಾಯಿತು, ಇಷ್ಟೇ ಅಲ್ಲ, ಸ್ಟಾಲಿನ್ ನಂತರ ಬಂದ ಕ್ರುಶ್ಚೇವ ಸ್ಟಾಲಿನನ ಮೂರ್ತಿಗಳನ್ನು ಕಿತ್ತು ಹಾಕಿ Personality Cultಗೆ ವಿದಾಯ ಕೊಟ್ಟನು. ಇವೇ ಕತೆ ಚೀನಾದಲ್ಲಿ ಮಾವೋನ ಮರಣಾನಂತರ ಉದ್ಭವಿಸಿತು. ಅವನ ನಾಲ್ಕು ಸಂಗಡಿಗರು—ಹೆಂಡತಿ ಇನ್ನೂ ಜೈಲಿನಲ್ಲಿ ಇದ್ದಾರೆ. ಸ್ವತಂತ್ರ ವ್ಯಾಪಾರೋದ್ಯಮದ ಶಾಂತಿಯುತ ಪುನರ್ನಿರ್ಮಾಣ ಶುರುವಾಗಿದೆ. ಇಂಗ್ಲಂಡಿನಲ್ಲಿ ಹೀಗಾಗುವದಂತೂ ಅಸಂಭವ. 'ಅಯರ್ನ ಲೇಡಿ' ಎಂದು ಎನಿಸಿಕೊಂಡ ಮಾರ್ಗರೆಟ್ ಥ್ಯಾಚರ್‌ಗೆ ಈಗಾಗಲೆ ತುಕ್ಕು ಹಿಡಿಯುವ ಸಂಭವವಿದೆ. ಸಿ. ಎಂ. ಕುಲಕರ್ಣಿ ಹೇಳಿದ ಮಾತು ನಿಜ.

ಹಾಗಾದರೆ, ಆರವೆಲ್ಲನ Futurology (ಭವಿಷ್ಯ)ಯ ಅರ್ಥವೇನು ? ೩೫ ವರ್ಷಗಳಲ್ಲಿ ಈ ಪರಿಸ್ಥಿತಿ ಬಂದೀತೆಂದು ನಿಜವಾಗಿಯೂ ಆತ ಭಾವಿಸಿದ್ದನೆ ? ೩೫ ವರ್ಷಗಳಲ್ಲಿ ವಿಚಾರಗಳನ್ನು ಹಿಡಿದಿಡುವ ಯಂತ್ರಗಳು ಬರಬಹುದೆಂದು ಅವನು ನಂಬಿದ್ದನೆ ? ವಿಜ್ಞಾನ ಹಾಗೆ ನಾಗಾಲೋಟ ಓಡುವದು ಶಕ್ಯವೇ ?

೧೯೮೪ ಒಂದು ಕಾದಂಬರಿ ಮಾತ್ರ. ಜೊತೆಗೆ ಅದು ವಿಜ್ಞಾನಕ್ಕೆ ಕೊಟ್ಟ ಎಚ್ಚರಿಕೆಯೂ ಹೌದು. ಆ ಪರಿಸ್ಥಿತಿ ಬಂದರೆ ಮಾನಸಿಕ ಗುಲಾಮಗಿರಿ ಬರುವದೂ ಅಸಾಧ್ಯವಲ್ಲ. ಮನೋವಿಜ್ಞಾನ ಜಿಲೇಬಿಯನ್ನು ನೋಡಿದ ವ್ಯಕ್ತಿಯು ರುಚಿ ಸಾರವನ್ನು ಅಳೆಯಬಹುದೇ ಹೊರತು ಅದರಿಂದ ಉಂಟಾದ ಸುಖದ ಸಂಗವನ್ನು ಅರಿಯಲಾರದು. ಕೆಲವು ವಿಷಯಗಳು ಖಾಸಗಿಯಾಗಿ ಉಳಿಯುವದು ಅನಿವಾರ್ಯ. ಈ ಅನಿವಾರ್ಯತೆಯೇ ಪ್ರಜಾಪ್ರಭುತ್ವವನ್ನು ಕಾಯುತ್ತದೆ.

ಅನುವಾದಕರು ಸೊಗಸಾದ ಕನ್ನಡವನ್ನು ಬಳಸಿದ್ದಾರೆ. ಮೊದಲಿನ ಕೆಲವು ಪುಟಗಳಲ್ಲಿ ಮೂಲ ಪಾಠಕ್ಕೆ ವಿಧೇಯತೆಯ ತತ್ವಕ್ಕಾಗಿ ಕೆಲವು ಕೃತ್ರಿಮ ವಾಕ್ಯಗಳು ಬಂದಿವೆ. (ಉದಾ : ಏಕಕಾಲದಲ್ಲಿ (Simultanecurly); ಹಿರಿಗಾನೆ (Drawer) ಆದರೆ ಮೊದಲಿನ ೪ ಪುಟಕ್ಕೇ ಈ 'ವಿಧೇಯತೆ' ಅಳಿದು, ನಿರರ್ಗಳ, ಸ್ವಾಭಾವಿಕ ಕನ್ನಡ ಹರಿಯತೊಡಗುತ್ತದೆ. ಈ ಮೊದಲಿನ ಪುಟಗಳಲ್ಲೂ ಚಂದ ವಾಕ್ಯಗಳು ಬಂದಿವೆ. "ಪಿಂವಕ್ಕೆ ವಾಲಿ ಕುಳಿತುಕೊಂಡ, ಅಸಹಾಯಕನಂತೆ" "ಆದ್ರೆ ಬದುಕಿದ್ದೀಯ,ಬದುಕ ಬೇಕು, ಈ ಅಭ್ಯಾಸವೇ ಸ್ವಭಾವವಾಯಿತು" ಆದರೆ ಮುಂದುವರಿದಂತೆ, ಆರವೆಲ್ಲನ ಕೊಂಕು-ಕಟಕಿಗಳ ಶೈಲಿಯನ್ನು ಸಮರ್ಥವಾಗಿ ಕನ್ನಡದಲ್ಲಿ ತಂದಿದ್ದಾರೆ.

"ನಿನ್ನ ಲೇಖನದಲ್ಲಿ ಮುಖ್ಯವಾದ ಅಂಶವೆಂದರೆ, ಈಗ ಪ್ರಚಲಿತದಿಲ್ಲದಿರುವ ಎರಡು ಪದಗಳನ್ನು ನೀನಲ್ಲಿ ಉಪಯೋಗಿಸಿದ್ದೀಯ. ಇತ್ತೀಚೆಗಷ್ಟೇ ಅವುಗಳ ಉಪಯೋಗ ತಪ್ಪಿದೆ."

"ಜನಸ್ತೋಮ ತನಗೆ ತಾನೇ ಎಂದೂ ದಂಗೆ ಏಳುವದಿಲ್ಲ ಅದರಲ್ಲೂ ತನ್ನನ್ನು ತುಳಿದವರ ವಿರುದ್ಧವಂತೂ ಅದು ದಂಗೆ ಏಳುವ ಸಂಭವ ತೀರಾ ಕಡಿಮೆ."

ಇಂಥ ಸ್ಥಳಗಳಲ್ಲಿ ವಿಧೇಯತೆಗಿಂತ ಅವಿಧೇಯತೆಯೇ ಮೇಲುಗೈಯಾದರೂ ಅದರ ಕನ್ನಡ ಶೈಲಿ, ವ್ಯಂಗ್ಯ, ಸಾರ್ಥಕವಾಗಿ ಮೂಡಿಬಂದಿವೆ.

ಕೆ. ಕೇಶವಶರ್ಮಾ

ನಾಗವಾರರ "ಕರಾವಳಿಯಲ್ಲಿ ಗಂಗಾಲಗ್ನ"

ನಮ್ಮ ಸಮಾಜದ ಸ್ಥಿತಿಯೇ ಹೀಗಿದೆ: ಒಂದು ಕಡೆ ಚಲನೆಗೊಳ್ಳದ ಹಣದ ಶೇಖರಣೆಯು ನಡೆಯುತ್ತಿದ್ದರೆ, ಇನ್ನೊಂದು ಕಡೆ ದುಡಿಯುವ ವರ್ಗವಿದೆ. ಇವರ ಮಧ್ಯೆ ಎರಡೂ ಸ್ಥಿತಿಯನ್ನು ಒಳಗೊಂಡಿರುವ ಮಧ್ಯಮ ವರ್ಗವು ಕೂಡಾ ಅಸ್ತಿತ್ವವನ್ನು ಪಡೆದುಕೊಂಡಿದೆ. ಇವರ ಫಲವಾಗಿ ರೂಪುಗೊಂಡಿರುವ ಆರ್ಥಿಕ ಅಸಮತೆಯು ಭಾರತೀಯ ಜೀವನ ಸ್ಥಿತಿಯನ್ನು ನಿಯಂತ್ರಿಸಿದೆ. ಉತ್ಪಾದನಾ ಸಂಬಂಧಗಳಲ್ಲಿ ಸ್ವಲ್ಪ ಮಟ್ಟಿಗೆ ಬದಲಾವಣೆಗಳು ಕಂಡುಬಂದರೂ ಒಟ್ಟು ಜೀವನ ಪರಂಪರೆಯನ್ನೇ ಬದಲಿಸುವಷ್ಟರ ಮಟ್ಟಿಗೆ ಉತ್ಪಾದನಾ ಸಂಬಂಧಗಳಲ್ಲಿ ವ್ಯತ್ಯಾಸ ಕಂಡುಬರುವದಿಲ್ಲ. ಇದನ್ನು ನಾನು ಗಮನಿಸುವುದು: ಸ್ವಾತಂತ್ರ್ಯಪೂರ್ವದ ಭಾರತೀಯ ಆರ್ಥಿಕ ಪರಿಸರದಲ್ಲಿ; ಸ್ವಾತಂತ್ರ್ಯಪೂರ್ವ ಮತ್ತು ನಂತರದಲ್ಲಿ ಕೇಂದ್ರೀಕೃತ ಅರ್ಥ ವ್ಯವಸ್ಥೆಯು ರೂಪುಗೊಂಡಿದ್ದು ಅದರ ಫಲವಾಗಿಯೇ ನಗರವು ಬೆಳೆಯುತ್ತಾ ಬಂದಿದೆ. ಈ ಆಸಕ್ತಿಯಿಂದ ನಗರ ಮತ್ತು ಹಳ್ಳಿಯ ವ್ಯತ್ಯಾಸವು ಕಂಡುಬರುತ್ತಿದೆ. ಬಂಡವಾಳಶಾಹಿ ಜಗತ್ತು ಮತ್ತು ಕೂಲಿಕಾರರ ನಡುವಿನ ನಿಜವಾದ ಘರ್ಷಣೆಯು ಸ್ಪಷ್ಟರೂಪುಗೊಳದೇ ಇರುವುದಕ್ಕೆ ಮುಖ್ಯ ಕಾರಣವಿದು.

ಕನ್ನಡ ಸಾಹಿತ್ಯ ಕುರಿತು ಮಾತಾಡುವಾಗಲೆಲ್ಲಾ ನಾವು ಮೇಲಿನ ಅಂಶಗಳನ್ನು ಗಮನಿಸಬೇಕಾಗಿದೆ. ಸ್ವಾತಂತ್ರ್ಯಪೂರ್ವದ ಮತ್ತು ನಂತರದ ಆರ್ಥಿಕಸ್ಥಿತಿ ಅಥವಾ ಬಿಕ್ಕಟ್ಟು ಕನ್ನಡ ಸಂಸ್ಕೃತಿ ಮತ್ತು ಸಾಹಿತ್ಯದ ಮೇಲೆ ಈ ರೀತಿಯಲ್ಲಿ ದ್ವಂದ್ವಪೂರ್ಣವಾದ ಪರಿಣಾಮವನ್ನು ಬೀರಿದೆ. ನವೋದಯ ಕಾವ್ಯದಲ್ಲಿ ಬರುವ ದೇಶ, ಕನ್ನಡ ಇತ್ಯಾದಿ ಭಾವುಕ ನಿಲುವುಗಳನ್ನು ನಾವು ಹೆಚ್ಚು ಪರಿಶೀಲಿಸಬೇಕಾಗುವುದು, ವರ್ಗೀಕೃತ ಸಾಮಾಜಿಕ ವ್ಯವಸ್ಥೆಯಲ್ಲಿ ಎಂದು ನನ್ನ ಅನಿಸಿಕೆ. ನಂತರದ ನವ್ಯ ಕಾವ್ಯದ ಪರಿಕಲ್ಪನೆಗಳನ್ನು ಗಮನಿಸಿದಾಗ ನಗರೀಕೃತ ಚಿಂತನೆಗಳ ಭಾರದಲ್ಲಿ ಅದು

ಕುಸಿಯುತ್ತಿರುವುದನ್ನು ಕಾಣುತ್ತೇವೆ. ಇದರ ನಂತರದ ಕಾವ್ಯಪ್ರಕಾರವಾದ 'ಬಂಡಾಯ' ಕೂಡಾ ಸಂಸ್ಕೃತಿಯ ವಿರುದ್ಧ ಸೆಣಸುವುದು ಎರಡು ರೀತಿಯಲ್ಲಿ: ಒಂದು ಪುರೋಹಿಶಾಹಿ ಮೌಲ್ಯಗಳ ವಿರುದ್ಧ, ಮತ್ತು ಮೇಲುವರ್ಗದ ಚಿಂತನೆಗಳ ವಿರುದ್ಧ. ಆದುದರಿಂದಲೇ 'ಜಾತಿ'ಯ ಗುರುತುಪಟ್ಟಿಯಿಂದ ಮುಕ್ತವಾದ ಸಂವೇದನೆಯನ್ನು ಸದ್ಯದ ವಾಸ್ತವದಲ್ಲಿ ಅರಸುವುದು ತುಂಬಾ ಕಷ್ಟ. ನಗರದಲ್ಲಿ ವಾಸಿಸುವ ಆಧುನಿಕ ಕವಿಗಳು ಸಂಸ್ಕೃತಿಯೊಂದಿಗೆ ಸಂಬಂಧ ಇಟ್ಟುಕೊಂಡಿರುವುದು ಈ ಕಾರಣದಿಂದಲೇ ಆಗಿದೆ. ನಿಜವಾದ ಕೈಗಾರೀಕರಣ ನಡೆಯದೇ ಇರುವುದರಿಂದ ನಾಪಿದನ್ನು ಕಾಣಲು ಸಾಧ್ಯವಾಗಿದೆ.

ಇಷ್ಟು ಟಿಪ್ಪಣಿಗಳನ್ನು ಇಟ್ಟುಕೊಂಡು ಕಾಳೇಗೌಡ ನಾಗವಾರರ ಕವಿತೆಗಳ ಕುರಿತ ಬರೆಯುತ್ತಿರುವೆ:

ಕಾಳೇಗೌಡ ನಾಗವಾರರು ೧೯೬೯ರಿಂದ ೧೯೭೮ರ ವರೆಗೆ ಬರೆದ ಕವಿತೆಗಳು ಇಲ್ಲಿವೆ ಅಂದರೆ, ಕವಿಯೊಬ್ಬನ ಹತ್ತು ವರುಷದ ಜೀವನಾನುಭವದ ಸಾಂಸ್ಕೃತಿಕ ದಾಖಲೆ ಇದು. ಕವಿತೆಯ ಹೊರಗೆ ಸಾಮಾಜಿಕ ಜೀವನ ಸ್ವರೂಪವು ಬದಲಾಗಿರಬಹುದು, ಆಗಿಲ್ಲದೇ ಇರಬಹುದು. ಇಷ್ಟೇ: ಕಾಳೇಗೌಡರ ಕವಿತೆಗಳಲ್ಲಿ ಬರುವ ಸಂಸ್ಕೃತಿಯ ಒಳನೋಟ ಬದಲಾವಣೆಯ ಸ್ವರೂಪ ಮತ್ತು ಕವಿತೆಗಳು ಯಾವ ದಾರಿಗೆ ತಿರುಗುತ್ತವೆ ಎಂಬುದನ್ನೂ ಗಮನಿಸಬೇಕಾಗಿದೆ. ಮೊದಲ ಕವಿತೆ "ಅಸೂನ ವ್ಯಸನಿ ಕುಮೀಬಾ"ದಲ್ಲಿ ಹೀಗೆ ಬರುತ್ತದೆ:

ಈ ಕುಮೀಬಾ ಕೂಡ ಅಮೀಬಾದಂತೆ
ಬಾಳಲ್ಲಿ ಬಹಳೇ ತಾಳಿ
ಕೊಳ್ಳಬೇಕು: ಕಾಲ ಕಾಲಕ್ಕೆ ಕಾಯ ತೇಯುತ್ತ
ಕಾಯಬೇಕು, ಎಡೆ ಸಿಕ್ಕಲ್ಲಿ ಕಾಲೂರಬೇಕು.
ನೊರೆ ನುಣುಪು ಉರಿಯೊಡನೆ ಸೆಣಸುತ್ತ
ಏಕಾಂಗಿ ಮೂಕನಡೆ ನೂಕುತ್ತ, ತೆವಳುತ್ತ
ನರಳು ನಿಟ್ಟುಸಿರೊಡನೆ, ಇಲ್ಲೂ
ಬೆದೆಯ ಹದದಲ್ಲಿ ಇವನ
ಹಂಬಲಿಕೆ ಹಣ್ಣಾಗಬೇಕು. (ಪು. ೨೨–೨೩)

ಕಾಯ ತೇಯುವುದನ್ನು ಕವಿಯು ಇಲ್ಲಿ ಗಮನಿಸುತ್ತಾರೆ. ಎಡೆ ಸಿಕ್ಕಲ್ಲಿ ಕಾಲೂರುವ ಯತ್ನವನ್ನು ಕೂಡಾ ಇಲ್ಲಿಯೇ ಒತ್ತುಕೊಟ್ಟು ಗಮನಿಸಬೇಕು. ದುಡಿಯುವ ವರ್ಗ

ಅಥವಾ ಕಾಯು ತೇಯುವ ವರ್ಗವೊಂದು ಈ ಸಾಮಾಜಿಕ ವ್ಯವಸ್ಥೆಯಲ್ಲಿ ಹೇಗೆ ಕಾಲೂರಲು ಯತ್ನಿಸುತ್ತದೆ ಎಂಬುದರತ್ತ ಕವಿತೆಯು ತನ್ನ ಲಕ್ಷ್ಯವನ್ನು ಹರಿಸುತ್ತದೆ. ಎಡೆಕಿಕ್ಕಲ್ಲಿ ಕಾಲೂರುವ ಯತ್ನವನ್ನು ಈ ದುಡಿಯುವ ವರ್ಗವು ಯಾಕೆ ಪ್ರಯತ್ನಿಸುತ್ತಿದೆ ? ಕಾರಣ ಸ್ಪಷ್ಟ: ಮೇಲುವರ್ಗದ ಅನುಕರಣೆಯನ್ನು ಕೆಳವರ್ಗ ಮಾಡುತ್ತದೆ ಆದರೆ, ಕಾಯು ತೇಯುವ ವರ್ಗದ ಅವಸ್ಥೆಯು ಮಾತ್ರ ಭೀಕರವಾಗಿದೆ. ಅದನ್ನೂ ಕವಿತೆಯು ಲಕ್ಷಿಸಿದೆ ಎಂಬುದು ಕೂಡಾ ಮುಖ್ಯ. ಇದು ಉರಿಯೊಡನೆ ಸೆಣಸುವ ಕ್ರಿಯೆ. ಹೀಗಿರುವುದರಿಂದ ಕವಿತೆಯು ಕೊಡುವ ಅಂತಿಮ ತೀರ್ಮಾನ ಗಮನಾರ್ಹ.

ಬೆದೆಯು ಹದಕ್ಕೆ: ಅದರ ಹಂಬಲದಲ್ಲಿ ಇವನು ಹಣ್ಣಾಗಬೇಕಾದ ಬರ್ಬರವಾದ ಸ್ಥಿತಿಯಿದೆ. ಈ ಕಾಯು ತೇಯುವ ಸ್ಥಿತಿಯಿಂದ ಮುಕ್ತವಾಗಲು ಬೆದೆಯ ಹಂಬಲಕ್ಕೆ ಕಾಯಬೇಕಾಗಿದೆ. ಈ ಸಾಮಾಜಿಕ ಸ್ಥಿತಿಯಲ್ಲಿ 'ಬೆದೆ'ಯ 'ಹದ'ವನ್ನು ಕೂಡಾ ಈ ಕವಿತೆಯು ಅರ್ಥವತ್ತಾಗಿ ನಿರೂಪಿಸುತ್ತದೆ. ಕಾಯು ತೇಯಿಸುವಂತಹ ವರ್ಗವನ್ನು ನಾಶಗೊಳಿಸುವ ವಿಧಾನಗಳಲ್ಲಿ ಇದೂ ಕೂಡಾ ಒಂದಾಗಿದೆ. ಶೋಷಕ ವರ್ಗವನ್ನು ನಾಶಗೊಳಿಸುವ ರೀತಿಯು ಸಣ್ಣ ಕುರಿತಂತೆ ಮಾರ್ಕ್ಸ್ ಹೀಗೆ ಹೇಳುತ್ತಾನೆ.

"Their most extreme and rigid form is the institution of castes separated from one another, without the right of inter—marriage, with quite different status; each with exclusive, unchangeable occupation" (Pre-Capitalist Economic Formations, International Publishers, 1965, p. 76-77)

ಈ ಕವನ ಸಂಕಲನದ ಪ್ರಮುಖ ಕವಿತೆ 'ಕರಾವಳಿಯಲ್ಲಿ ಗಂಗಾಲಗ್ನ' ಇದೊಂದು ಖಂಡಕಾವ್ಯ. ಈ ಕವನದ ಬಗೆಗೆ ಬಂದಿರುವ ಅಭಿಪ್ರಾಯಗಳು ಹೀಗಿವೆ :

"ಮೂಲತಃ ಕತೆಗಾರರಾಗಿರುವ ಕಾಳೇಗೌಡ ನಾಗವಾರರು ತಮ್ಮ ಮೊದಲ ಕಾವ್ಯದಲ್ಲಿ (ಕರಾವಳಿಯಲ್ಲಿ ಗಂಗಾಲಗ್ನ—೧೯೮೧) ಅಭಿವ್ಯಕ್ತಿಯ ಶಿಸ್ತನ್ನೂ ಪ್ರಯೋಗ ನಿಷ್ಠತೆಯನ್ನೂ ಮೆರೆದಿರುವುದನ್ನು ಗುರುತಿಸಬಹುದು. ಕಥನ ಪರವಾದ ಇಲ್ಲಿಯ ಕೆಲವು ಕವನಗಳನ್ನು ಪರಿಶೀಲಿಸಿದಾಗ ಕವಿಗಿಂತ ಕತೆಗಾರನೇ ಕಾಣಿಸಿಕೊಳ್ಳುತ್ತಾನೆ-ಅನ್ನುವ ಹಾಗಾಗಿದೆ. ತನ್ನ ಪರಿಸರವಿನ್ನೂ ಕ್ರಾಂತಿಗೆ, ವರ್ಗಸಮರಕ್ಕೆ ಪಕ್ವವಾಗದಿರುವಾಗ ತಾನು ಕ್ರಾಂತಿಯ ವೇಗವರ್ಧಕವಾಗಬೇಕೆಂದು ಹವಣಿಸುವ ನಾಯಕನ ನಡಾವಳಿ ಅದೆಷ್ಟು ವಿಫಲವಾದುದೆಂಬುದರ ಮಾರ್ಮಿಕ ಚಿತ್ರ "ಕರಾವಳಿಯಲ್ಲಿ ಗಂಗಾಲಗ್ನ" ಎಂಬ ಖಂಡಕಾವ್ಯದಲ್ಲಿದೆ. ಈ ಕಾವ್ಯದಲ್ಲಿ ಕಾಣಿಸಿಕೊಳ್ಳುವ 'ಪೂರ್ಣ' ಅಸೀಮ ಜೀವನೋಲ್ಲಾಸದ ಕವಿಯ ಮಾನಸ ಪುತ್ರಿಯಾಗಿದ್ದು ಕಾವ್ಯಕರ್ಮವನ್ನೂ ಅಸಯ

ವನ್ನೂ ನಿಯಂತ್ರಿಸುತ್ತಿರುವುದು ಗೋಚರವಾಗುತ್ತದೆ. ಬದುಕಿನ ಭಿನ್ನ ಭಿನ್ನ ಸಂಘರ್ಷಗಳ ನೇರ ಅನುಭವದಿಂದ ಮಾಗದ ತಥಾಕಥಿತ (so called) ಕಾಮ್ರೇಡರ ಅತ್ಯುತ್ಸಾಹಕ್ಕೆ (enthusiasm) ವಸ್ತುಸ್ಥಿತಿಯು (fact) ರಾಪ್ಪಗನ್ನಡಿ ಒಡ್ಡಿ, ಅವ ನನ್ನು ತರ್ಕ ವಿವೇಕಗಳ ವಾಸ್ತವದ ಬಯಲಿಗೆಸೆದಿರುವುದು ಕ್ರಾಂತಿಕಾರಿಗಳ ಕಣ್ಣು ತೆರೆಸುವಂಥಾದ್ದು" (ವಾಸ್ತವ— ಆರ್ಕೆ ಮಣಿಪಾಲ, ಬಂಡಾಯ ಕಾವ್ಯ ಸಮೀಕ್ಷೆ ಪುಟ. ೩೨–೩೩)

"ಕಪ್ಪು ಹುಡುಗನೊಬ್ಬ ಬಿಳಿಯ ಹುಡುಗಿಯೊಬ್ಬಳ ಜೊತೆಗೆ ಕಾಲಕಳೆದದ್ದನ್ನು ಹಿನ್ನೆಲೆಯ ಸಮುದ್ರ ಮತ್ತು ಧಾರ್ಮಿಕ ಆಚರಣೆಯ ಗಟ್ಟಿಮುಟ್ಟಾದ ವಿವರಗ ಗಳೊಂದಿಗೆ, ಶುದ್ಧವಾದ ಲಯಗಳಲ್ಲಿ ಹಿಡಿದಿಡುವುದರಿಂದ ಮಾತ್ರ ಈ ಕವನ ಗಮ ನಾರ್ಹವಾಗಿದೆ. ಕಪ್ಪು ಕಾಮ್ರೇಡ ಮತ್ತು ಬಿಳಿ ಹುಡುಗಿ ಎನ್ನುವ ಸರಳೀಕರಣ ಈ ಕವನದ ಮಿತಿಯೂ ಆಗಿದೆ. ಈ ಮಿತಿಯಲ್ಲೇ ಈ ಕವನದಲ್ಲಿ ಕ್ರಾಂತಿಯ ಬಗ್ಗೆ ಕನಸು ಕಾಣುತ್ತ ಅದನ್ನು ಫ್ಯಾಶನ್ನಾಗಿ ಬಳಸುವವರ ಬಗ್ಗೆ ವ್ಯಂಗ್ಯವೂ ಒಳಗೊಂಡಿದೆ ಯೇನೋ ಎಂದು ಅನುಮಾನವಾಗುತ್ತದೆ." (ಸುಮತೀಂದ್ರ ನಾಡಿಗ–ಸಾಹಿತ್ಯ ವಾರ್ಷಿಕ ೧೯೮೧ ಪು. ೯)

ಈ ಎರಡೂ ಪರಸ್ಪರ ವಿರುದ್ಧವಾದ ಅಭಿಪ್ರಾಯಗಳು ನಮ್ಮ ಮುಂದಿವೆ. ಆರ್ಕೆ ಯವರು ಕವಿತೆಯ ಆಶಯಕ್ಕೆ ತನ್ನ ಒತ್ತನ್ನು ಕೊಟ್ಟರೆ 'ಶುದ್ಧ ಲಯದಲ್ಲಿ ಹಿಡಿ ದಿರುವುದರಿಂದ ಮಾತ್ರ ಈ ಕವನ ಗಮನಾರ್ಹ'ವಾಗಿದೆಯೆನ್ನುವ ನಾಡಿಗರು ಕವಿತೆಯ ಒಟ್ಟು ಆಶಯವನ್ನು ನಿರಾಕರಿಸುತ್ತಾರೆ. ನಾಡಿಗರು ಮಂಡಿಸುವ ಮತ್ತೊಂದು ವಿಚಾರ : "ಕಪ್ಪು ಹುಡುಗನ ಕ್ರಾಂತಿಯ ಕನಸಿನಷ್ಟೇ ಪೊಳ್ಳಾದದ್ದು ಬಿಳಿಯ ಹುಡುಗಿಯ ಕ್ರಾಂತಿಯ ಮಾತುಗಳು"–ಕವಿತೆಯೊಳಗೇ ಸಿದ್ಧವಾದ ವಿಚಾರ ವನ್ನು ನಾಡಿಗರು ಅಲ್ಲಗಳೆದಿದ್ದಾರೆ. ಇರಲಿ

ಈ ಕವಿತೆಯಲ್ಲಿ ಕ್ರಾಂತಿಯ ಗ್ರಹಿಕೆ ವಿಸ್ತಾರವಾಗುತ್ತಾ ಹೋಗುತ್ತದೆ :

> "...ರಾತ್ರಿಗೆ ಟೈಮು ಕೊಟ್ಟವನು ತನ್ನ ಕೆಂಪುಲುಂಗಿಯ ತೆರೆದ
> ಬಲಿಷ್ಠ ತೊಡೆ ತೋರಿಸಿ ಮಿಂಚಾಗಿ ಸರಿದಾಗ, ಪೂರ್ಣ
> ಕತ್ತಲಿಕ್ಕಟ್ಟಲ್ಲಿ ಹತ್ತಿರ ಸರಿದು, ಕಿವಿಯಲ್ಲಿ ಗಟ್ಟಿ
> ಪಿಸುಗುಟ್ಟಿದಳು: ಕಾಮ್ರೇಡ್, ಕಾಮ್ರೇಡ್
> **ಕ್ರಾಂತಿಯ ಗಡಿಗೆರೆಗಳು**
> **ಸದಾ ವಿಸ್ತರಿಸುತ್ತಿರಬೇಕು. ಈ ಕಡಲಂತೆ, ನೀಳಾಕಾಶದಂತೆ**
> **ನಿತ್ಯ ಜೀವಂತಿಕೆಯಲ್ಲಿ**

ಇಲ್ಲೀಗ ಈ ದೆವ್ವಗತ್ತಲಿನಂತೆ ಜನಸಾಗರದ ಕನಸಿನಾಳದಲ್ಲಿ
ನಿರಾಶೆಯ ಕಂದರಗಳ ಶೂನ್ಯದ ಮುಚ್ಚುತ್ತಾ
ಕುಡಿಯೊಡೆಯಬೇಕು ವಸಂತೀಯಾ ?
ಅನ್ನುತ್ತಾ ಎಳೆಬಾಳೆಸುಳಿಯಂತವಳು ಬಳಸಿದಾಗ
ಅನ್ಯಮನಸ್ಕನಾಗಿದ್ದಾತ ಕ್ಷಣಕಾಲ
ಹಾವೆಂಬಂತೆ ತಲೆದೂಗಿದ. ಕೂಡಲೇ...

(ಕರಾವಳಿಯಲ್ಲಿ ಗಂಗಾಲಗ್ನ, ಪು. ೩೨)
(ಅಡಿಯೊತ್ತು ನನ್ನದು)

ಈ ಕವಿತೆಯಲ್ಲಿ ಕ್ರಾಂತಿಯ ಕುರಿತಂತೆ ಇರುವ ಮಾತು 'ಬಿಳಿಯ ಬಾಲೆ'ಯಿಂದ ಬರುತ್ತದೆ. ಈ ಕವಿತೆಯಲ್ಲಿ ಎರಡು ಸಂಗತಿಗಳಿವೆ. ಒಂದು, ವಾಸ್ತವದ ಪ್ರತಿನಿಧಿಗಳಾದ ಕಾಮ್ರೇಡ್ ಮತ್ತು ಬಾಲೆ. ಇನ್ನೊಂದು, ಪೌರಾಣಿಕ ಕತೆಯಲ್ಲಿಯ ಶಿವ ಮತ್ತು ಗಂಗೆ. ಮೊದಲನೆಯದು ತೀರಾ ಹತ್ತಿರದ ಅನುಭವಕ್ಕೆ ಸಂಬಂಧಪಟ್ಟದ್ದಾಗಿದ್ದರೆ, ಎರಡನೆಯದು ಐತಿಹ್ಯಕ್ಕೆ ಸಂಬಂಧಪಟ್ಟಿರುವುದಾಗಿದೆ.

'ಗಂಗಾಲಗ್ನ'ದ ಕುರಿತಾಗಿ ಕವಿಯೇ ಕೊಟ್ಟ ವಿವರಣೆ ಈ ರೀತಿಯಿದೆ. ಇದು ಕವಿತೆಯನ್ನು ಅರ್ಥಮಾಡಿಕೊಳ್ಳುವಲ್ಲಿ ಸಹಾಯಕವಾಗಬಹುದು.

"ಉತ್ತರ ಕನ್ನಡ ಜಿಲ್ಲೆಯ ಗೋಕರ್ಣದ ಕಡಲ ಕರೆಯಲ್ಲಿ ಪ್ರತಿವರ್ಷವೂ ದೀಪಾವಳಿ ಹಬ್ಬದ ಸಂಜೆಗತ್ತಲಿನಲ್ಲಿ ಗೌರಿಗೆ ಅರಿವಿಲ್ಲದಂತೆ ಶಿವನು ಗಂಗೆಯೊಡನೆ ಕಳ್ಳತನದಲ್ಲಿ ಲಗ್ನವಾಗುವ ಸಂಬಂಧದ ವಿವಿಧ ಆಚರಣೆಗಳನ್ನು ಆ ಸುತ್ತುಮುತ್ತಲ ಹಳ್ಳಿ-ಪೇಟೆ-ಪಟ್ಟಣಗಳ ಮನೆಮಂದಿಯೆಲ್ಲ ಕೂಡಿ ಅತ್ಯಂತ ಸಂಭ್ರಮದಿಂದ ಆಚರಿಸುತ್ತಾರೆ." (ಕರಾವಳಿಯಲ್ಲಿ ಗಂಗಾಲಗ್ನ, ಪು. ೨೭)

ಜನಸಮುದಾಯದ ಆಶೋತ್ತರಗಳು ಒಂದು ವಿಶಿಷ್ಟವಾದ ಆಚರಣೆಯಲ್ಲಿ ಫಲ ಕಂಡಿವೆ. ಇದು ಜನಾಂಗವೊಂದು ಕಂಡುಕೊಂಡ ಆದರ್ಶ ಅಥವಾ ಕನಸು. ಈ ಆದರ್ಶವು ಅಮೂರ್ತತೆಯನ್ನು ಸಂಕೇತಿಸುತ್ತದೆ.

"ಅಂಬಿಗರು, ಗೌಡರು ಮತ್ತು ಮುಕ್ರಿಗಳ ತೊನೆದಾಟದ ನಡುವೆ
ಕದ್ದು ಮದುವೆಗೆ ನಿಂತ ಶಿವನ ಸಾನ್ನಿಧ್ಯ:
ಭಟ್ಟರ ವಟಗುಡುವ ಸಂಸ್ಕೃತ ಮಂತ್ರಗಳುಂಟು.
ತುಟಿ ಕುಣಿವ, ಉಸಿರೆಳೆವ, ಹರಿವ ಜೀವರಿನ ನೋಟ." (ಪು. ೨೯)

ಇವನ್ನೇ ಸೂಚಿಸುತ್ತವೆ : ಈ ಆಚರಣೆಯು ಉತ್ಸವದಲ್ಲಿ ಮಹತ್ವವನ್ನು ಪಡೆದಿದೆ.

ಇಡೀ ಜನಾಂಗವೊಂದು ತನ್ನ ಬಸಿರೊಳಗೆ ಅಡಗಿಸಿಕೊಂಡಿರುವ ಪ್ರೇಮದ ಭಾವವನ್ನು ಉತ್ಸವದ ರೂಪದಲ್ಲಿ ಆಚರಿಸುತ್ತದೆ. ಎಂಬುದು ಮುಖ್ಯ. ಸಮಾಜವೊಂದು ತನ್ನದೇ ಬಗೆಯಲ್ಲಿ ಕಂಡು ತನ್ನ ಗುರುಗಳ (instinct) ಅವಲೋಕನವನ್ನು ಈ ಐತಿಹ್ಯದ ಆಚರಣೆಯಲ್ಲಿ ಕಂಡುಕೊಳ್ಳುತ್ತದೆ. ಕವಿತೆಯು ಕೇವಲ ಇಷ್ಟನ್ನೇ ಪ್ರತಿಪಾದಿಸುತ್ತಿದ್ದರೆ ಮುಖ್ಯವಾಗುತ್ತಿರಲಿಲ್ಲ. ಅವರೊಂದಿಗೆ. ಅಲ್ಲೇ ಜನಸಾಗರದ ಕನಸಿನೊಂದಿಗೆ ಮಿಡುಕಾಡುವ ವಾಸ್ತವದ ಪ್ರತಿರೂಪವಾದ ಕಾಮ್ರೇಡ ಮತ್ತು ಬಿಳಿಯ ಬಾಲೆಯು ಕೂಡಾ ಇದ್ದಾರೆ. ಈ ವಾಸ್ತವಕ್ಕೂ; ಆಚರಣೆಯ ಐತಿಹ್ಯಕ್ಕೂ ಇರುವ ಸಮಾನತೆಯೆಂದರೆ ಪ್ರೇಮ. ಈ ಪ್ರೇಮ ಪ್ರತಿಪಾದನೆ ಕವಿತೆಯ ಮುಖ್ಯ ತಾತ್ವಿಕತೆಯು ಕೂಡಾ ಆಗಿದೆ. ಕವಿತೆಯಲ್ಲಿ ಕನಸುಗಾರ ಕಾಮ್ರೇಡನನ್ನು ತನ್ನ ತೆಕ್ಕೆಗೆ ಒಗ್ಗಿಸಲು ಯತ್ನಿಸುವ ಬಿಳಿ ಹುಡುಗಿಯು ಮೇಲುವರ್ಗ ಮತ್ತು ಮೇಲ್ಜಾತಿಗೆ ಸಂಕೇತವಾಗುತ್ತಾಳೆ. ಕಾಮ್ರೇಡ ಕಪ್ಪು ಹುಡುಗನಾಗಿದ್ದಾನೆ; ಕೆಳವರ್ಗದ ಪ್ರತೀಕವಾಗಿದ್ದಾನೆ. ನಿತ್ಯ ಜೀವಂತಿಕೆಯ ಕಾಮವನ್ನು ಪ್ರೇಮವನ್ನು ಲೆಕ್ಕಾಚಾರ ಹಾಕುತ್ತಾ ಕಾಮ್ರೇಡನ ಕಿವಿಯಲ್ಲಿ ಕ್ರಾಂತಿಯ ಗೆರೆಯನ್ನು ವಿಸ್ತರಿಸುವಂತೆ ಬೇಡುವ ಬಾಲೆ ಈ ಕಾರಣಕ್ಕಾಗಿ ಹೆಚ್ಚು ಚಲನೆಯುಳ್ಳವಳಾಗುತ್ತಾಳೆ. ಅವಳೇ ಕವಿತೆಯೊಳಗಡೆ ಮುಂದೊತ್ತಿ ಬರುವುದನ್ನು ನಾವು ಕಾಣುತ್ತೇವೆ. ಅವಳ ಪ್ರತಿಕ್ರಿಯೆ ಹೀಗಿದೆ. "ಜನಸಾಗರದ ಕನಸಿನಾಳದಲ್ಲಿ ನಿರಾಶೆಯ ಕಂದರಗಳ ಶೂನ್ಯವ ಮುಚ್ಚುತ್ತಾ ಕುಡಿಯೊಡೆಯಬೇಕು." ಕರಾವಳಿಯಲ್ಲಿ ನಡೆಯುವ ಗಂಗಾಲಗ್ನದ ಆಚರಣೆಯಲ್ಲಿ ತುಂಬಿರುವ ಕನಸಿನ ಕುರಿತಂತೆ ಈ ಬಾಲೆ ಸ್ಪಷ್ಟವಾಗಿ ವ್ಯಾಖ್ಯಾನಿಸುತ್ತಾಳೆ. ಈ ಮಾತಿನಲ್ಲಿ ಬಂದಿರುವ 'ಜನಸಾಗರದ ಕನಸಿನಾಳದ ನಿರಾಶೆಯ ಕಂದರಗಳ ಶೂನ್ಯ ಮುಚ್ಚುತ್ತಾ' ಎನ್ನುವ ಮಾತನ್ನು ಹೆಚ್ಚು ಒತ್ತು ಕೊಟ್ಟು ಗಮನಿಸಬೇಕು. ಈ ಜನಸಾಗರದ ಕನಸೇ ಆಚರಣೆಯಾಗಿರುವುದರಿಂದಲೇ ಈ ಮಾತು ಬಂದಿದೆ. ಇದನ್ನು ಮುಚ್ಚುವುದು ಹೇಗೆ? ಬಾಲೆಯ ಮಾತಿನ ಆಧಾರದ ಪ್ರಕಾರ—ಇದನ್ನು ಪರಿಹರಿಸಲು ಸಾಧ್ಯವಾಗುವುದು : ಎರಡು ವರ್ಗ ಅಥವಾ ಎರಡು ಜಾತಿಯ ಪ್ರತೀಕಗಳಾದ ಬಾಲೆ ಮತ್ತು ಕಾಮ್ರೇಡ್ ಲೈಂಗಿಕವಾಗಿ ಒಂದಾಗುವುದು. ಆ ಹೊತ್ತಿನಲ್ಲೂ ಕಾಮ್ರೇಡ್ ಅನ್ಯಮನಸ್ಕನಾಗಿದ್ದ ಎಂಬುದನ್ನೂ ಕವಿತೆಯು ಸಾಬೀತು ಪಡಿಸುವುದರಿಂದ ನನ್ನ ಮೇಲಿನ ಮಾತುಗಳಿಗೆ ಅಂದರೆ ಕವಿತೆಯಲ್ಲಿ ಬಾಲೆಗೆ ಹೆಚ್ಚು ಚಾಲಕ ಶಕ್ತಿಯಿದೆ ಎಂಬುದಕ್ಕೆ ಆಧಾರ ದೊರಕಿದೆ.

ಆದರೆ ಕವಿತೆಯ ಕೊನೆಯಲ್ಲಿ ಕಾಮ್ರೇಡ್

> "ಯಾರೋ ನೋಡುತ್ತಿದ್ದಾರೆನ್ನುವ ಗಾಬರಿಯಲ್ಲಿ
> ತನ್ನೊಳಹೊರಗು ನಗಾರಿಯಾದ್ದರಿಂದ
> ಸರಿಪಡಿಸಿಕೊಳ್ಳಲಿಕ್ಕೆ ಹತ್ತಿದ."

ಕವಿತೆಯಲ್ಲಿ ಬರುವ ನಾಯಕನ ಒಟ್ಟು ವ್ಯಕ್ತಿತ್ವದ ಕುರಿತಾಗಿ ಮೇಲಿನ ಮಾತು ಸಾಕ್ಷಿಯಾಗಿದೆ. ಈ ಕಾಮ್ರೇಡ್ 'ವರ್ಗ ಸಮರ'ವನ್ನೂ ಲೆಕ್ಕ ಹಾಕಿದವನು. ವಾಸ್ತವದಲ್ಲಿ ಅವನೊಳ ಹೊರಗೆ ನಗಾರಿ ಬಾರಿಸುತ್ತದೆ. ಅವನ ವ್ಯಕ್ತಿತ್ವದಲ್ಲಿನ ಕುಂದು ಕೊರತೆಗಳನ್ನು ಕವಿತೆಯ ಕೊನೆಯು ಪ್ರತಿಫಲಿಸುತ್ತದೆ. ಇದರೊಂದಿಗೆ ಇಲ್ಲಿಯೇ ಇದು ಹೇಗೆ ಕವಿತೆಯ ತಾತ್ವಿಕತೆಯೂ ಆಗಿದೆ ಎಂಬುದನ್ನು ಗುರುತಿಸಬೇಕಾಗಿದೆ. ಕಾಮ್ರೇಡ್‌ನ ವರ್ಗಸಮರದ ಉದ್ದೇಶವನ್ನು ಕವಿತೆ ಭಂಗಪಡಿಸುತ್ತದೆ. ವರ್ಗ ಸಮರದ ಒಟ್ಟು ಹಿನ್ನೆಲೆಯನ್ನು ಪ್ರಶ್ನಿಸುವುದರತ್ತ ಕವಿತೆಯು ತೆರಳುವುದರಿಂದ ಕವಿತೆಯು ಭಾರತೀಯಪರಿಸರದಲ್ಲಿ ಕ್ರಾಂತಿಯು ಎರಡು ವರ್ಗಗಳ, ಎರಡು ಜಾತಿಯ ಪ್ರೇಮ ಸಂಬಂಧದಮೂಲಕವೇ ಸಾಧ್ಯವಾಗುತ್ತದೆ ಎಂಬ ತತ್ವವನ್ನು ಪ್ರತಿಪಾದಿಸುತ್ತದೆ.

ಕವಿತೆಯಲ್ಲಿ ಐತಿಹ್ಯ ಮತ್ತು ವಾಸ್ತವದ ಎರಡೂ ಅಂಶಗಳೂ ಬರುವುದರಿಂದ ಮತ್ತೊಂದು ವಿಷಯದತ್ತ ಗಮನ ಹರಿಸಬೇಕಾಗಿದೆ.

ಇಲ್ಲಿ ಐತಿಹ್ಯದ ಅಂಶವಿದೆ. ಅದರೊಂದಿಗೆ ಬಾಲೆ ಮತ್ತು ಕಾಮ್ರೇಡರ ವಾಸ್ತವ ಬದುಕಿದೆ. ಬಾಲೆ ಮತ್ತು ಕಾಮ್ರೇಡರ ಬದುಕನ್ನು ಇದು ತೋರಿಸುತ್ತಾ, ಉದ್ದೇಶಿತವಾಗಿಯೇ ಐತಿಹ್ಯವನ್ನು ಒಡೆಯುತ್ತದೆ. ಆದ್ದರಿಂದಲೇ ಇಲ್ಲಿ 'ಬಾಲೆ-ಗಂಗೆ' ಮತ್ತು 'ಶಿವ-ಕಾಮ್ರೇಡ್' ಎಷ್ಟೇ ಸಾಮರಸ್ಯವನ್ನು ಪಡೆದಿದ್ದರೂ ಬಾಲೆಯಿಂದ ಗಂಗೆಯು ಹೊಸ ರೂಪಪಡೆಯಲು ಸಾಧ್ಯವಾಗುತ್ತದೆ.

" . any attitude to mature which might give rise to myth;a socily therefore demanding from artist an imagination independent of my theology (On Literature & Art-Marx And Engles P. 83)

ಹೀಗಾಗಿ ಐತಿಹ್ಯದ ಹೊಸರೂಪು ಈ ಬದುಕಿನ ಮೂಲಕ ಸಾಧ್ಯವಾಗುತ್ತದೆ.

ರಾತ್ರಿ ನಾಟಕ ನೋಡಿ ಹೊರಟ ಹಗಲುವೀರ
ಬಾ ಇಲ್ಲಿ ಕೂತು ಸುಳ್ಳುಪಳ್ಳೇ ನಡೆದ
ಚರಿತ್ರೆ ಪುಸ್ತಕದಲ್ಲಿ ಸತ್ಯ ಹುಡುಕೋಣ.
ಸಾಲುಮರದ ರಾಜಸಂತಃಪುರದ ನಾರಿಯರ
ನೆರಿಗೆ ಎಣಿಸುವ; ಲೆಕ್ಕದ ಹೈಕಳು
ನಮ್ಮದನ್ನು ಗುಣಿಸಿ ಭಾಗಿಸಿ ಭಾಗ
ಲಬ್ಧ ಹಾಗೂ ಶೇಷ ಹುಡುಕುವ... (ಗೆಳೆಯ. ಪು. ೪೩)

ಇಲ್ಲಿ ಹುಡುಕುವುದು ಮುಖ್ಯವಾದ ಕ್ರಿಯೆ. "ರಾಜತಂತ್ರದ ಸಾರಿಯರ ನೆರಿಗೆ ಎಣಿಸುವವರೆಗೆ" ಹೊರಡುವ ಮಾನವೀಯತೆಯ ಸ್ಥಿತಿಯು ಇಲ್ಲಿ ಮುಖ್ಯವಾಗಿದೆ. ಕವಿತೆಯಲ್ಲಿ ಭೌತಿಕತೆಯು ಮುಖ್ಯವಾದ ಪ್ರಪಂಚ. ಈ ತನಕವೂ ಸೃಷ್ಟಿಯಾಗಿರುವ ಮೇಲುವರ್ಗದ ಚಿಂತನೆಗಳಿಂದ ಕುಸಿಯುತ್ತಿರುವ ಚರಿತ್ರೆಯನ್ನು ಈ ಕವಿತೆಯು ನಿರಾಕರಿಸುವುದು ಅತ್ಯಂತ ಪ್ರಾಮುಖ್ಯವಾಗಿದೆ. ಭಾರತೀಯ ಚರಿತ್ರೆಯನ್ನು ಪ್ರಸ್ತುತ ಅಧ್ಯಯನ ಮಾಡಬೇಕೆಂಬ ತಾತ್ವಿಕ ಹಿನ್ನೆಲೆಯು ಮೆಚ್ಚುಗೆಯನ್ನು ಗಳಿಸುತ್ತದೆ. ಆದರೆ, ಕವಿತೆಯು ತುಂಬಾ ವಾಚ್ಯವಾಗಿದೆ ಎಂಬುವೂ ಸತ್ಯ.

ನಿಮ್ಮದು ಪ್ರಸನ್ನವದನದ ಸಿಹಿ ಜೋಕು.
ಕಾಣದ ಕಾಡಿನ ಕತ್ತಲ ದಾರಿಯಲ್ಲಿ
ಇತ್ತ ಕತ್ತೆಯ ಯಾಂತ್ರಿಕ ಬದುಕು. (ಕನ್ನಡಿಗ. ಪು. ೫೬)

ಮಾನವೀಯ ಚೇತನವನ್ನು ಗುರುತಿಸುವ ಈ ಕೆಲಸ ಹೆಚ್ಚು ಮುಖ್ಯವಾದುದು :

……ಅಯ್ಯೋ ಪ್ರಿಯ ಬಣ್ಣಗಳೆ
ಯಾವ ಕತ್ತಲ ಹೊಳೆಗೆ ಹಾರಿಕೊಂಡಿರಿ
ಬನ್ನಿ— ನಡು ಬಿಡುವಾಗಿ ಬರದಿರಬೇಡಿ—
ಕಾಯುತ್ತೇನೆ: ಹಗಲ ದಿಕ್ಕಿಗೆ ಕೂಗಿ
ನುಗ್ಗಾಗಿ
ಈ ಗಾಯ ನೆತ್ತರು ಸುರಿಯೆ
ಈಗಿಂದೀಗ ಇಂದ್ರಿಯ ಚೆಲ್ಲಿ
ನಿಲ್ಲುತ್ತೇನೆ—ಬರುವಿರಿ ತಾನೆ
ತಪ್ಪದೆ, ಸರಸರ ? (ಅಂಚು ಸುಟ್ಟ ಆಲ್ಬಂ. ಪು. ೭೬)

ಈ ಕವನದಲ್ಲಿ ನಿಬಿಡವಾಗಿ ತುಂಬಿರುವ ಪ್ರತೀಕ ಗಮನಾರ್ಹವಾಗಿ ಸೆಳೆಯುತ್ತದೆ. 'ಬಣ್ಣಗಳು ಕತ್ತಲೆ ಹೊಳೆ ಹಾರಿಕೊಳ್ಳುವುದು' ಮತ್ತು ನಾಯಕ-ಬಣ್ಣಗಳು ಪುನಃ ಬರುವಲ್ಲಿಗೆ ಕಾಯುವುದು ಕವಿತೆಯ ಮುಖ್ಯವಾದ ಅಂಶ.

ಪ್ರೇಮದ ಬಗೆಗಿನ ಕಾತರ:

"ಕಣ್ಣು ದುರ್ಬೀನಲ್ಲಿ ಕ್ಷಣ ಬಿಡದೆ ನೋಡಿದ;
ಬಂದೆ ಬರುವನೆಂದವಳು ಬಾಲೆ ಇನ್ನು ಬರಲಿಲ್ಲ.
ಮೊನ್ನೆ ಸಂಜೆಯ ಮಾತು ಮತ್ತೆ ಮರುಕಳಿಸಿತು…
'ಅಮ್ಮ ಹಾದಿ ಕಾಯುವ ಸಮಯ. ಅಯ್ಯಲ್ಲಿ—

ಹಾಳಾದ್ದು ಕತ್ತಲು, ನಾಳಿದ್ದು ಮುಂಜಾನೆ
ಹತ್ತಕ್ಕೆ ಲೈಬ್ರರಿ...ಸರಿಯಾಗಿ ಬಾ ಮರಿ
ಮತ್ತೆ ಕಾಯಿಸಬೇಡ, ಇರುಳುದ್ದ ಕುದಿದವಳ

(ಕಾಮದಹನ. ಪು. ೭೯)

ಅದೇ ಕವನದಲ್ಲಿ

ಹಬ್ಬದೂಟದ ನಡುವೆ ಕಣ್ಣಷ್ಟೆ ಮಾತಾಡಿ–..
ಓಲಿಸಿಗ್ಗಿ ಇರುಳಿಡೀ ಬೆಳ್ದಿಂಗಳಿನ ಹೊಳೆಯು
ತಳಕಂಡರು. ಮೊಳೆಮೊಳೆವ ಸೂರ್ಯನಿಗಾಗಿ
ಕೊರೆವ ಚಳಿಯಲಿ ಕಾದು ಬೇಸತ್ತರು.

(ಕಾಮದಹನ. ಪು. ೮೧)

ಈ ಕಾತರವನ್ನು ಕವನ ಸಫಲವಾಗಿ ಪ್ರತಿಪಾದಿಸುತ್ತದೆ.

In this general atmosphere of frustration insecurity and anxiety, it was easy for feelings of mistrust, fear and suppressed violence and hatred to flourish In fact, violence lay very close to the surface in a society like this and in a situation like this.

(Communalism in Modern India-Bipinchandra p-132).

ಒಟ್ಟಾರೆ ಬೆಳೆಯುತ್ತಿರುವ ನಮ್ಮ ನಗರಗಳಲ್ಲಿಯ ಹತಾಶ ಮನೋಭಾವ; ದಾರಿದ್ರ್ಯ ತುಂಬಿರುವ ಕಣ್ಣುಗಳು ಈ ರೀತಿಯಿಂದ ಚಡಪಡಿಸುತ್ತಿದೆ. ಇನ್ನೂ ತೀರಾ ಉಲ್ಬಣಾವಸ್ಥೆಯನ್ನು ತಲುಪದಿರುವ ಈ ಸ್ಥಿತಿಯಲ್ಲಿ ಕಾಳೇಗೌಡರ ಈ ಕವನ ಹೊಸ ನೋಟವೊಂದನ್ನು ಕೊಡುತ್ತಿದೆ. ಅಂದರೆ: ಇವರ ಒಟ್ಟಾದ ತಾತ್ವಿಕ ನಿಲುವುಗಳು ಮುಂದಿನ ಸಮಾಜಕ್ಕೆ ಕೊಡುವ ಉತ್ತಮವಾದ ನೋಟವಾಗಿದೆ. ಹೀಗೆಂದಾಗಲೂ ಈ ನಿಲುವು ಕಾವ್ಯವೊಂದರಲ್ಲಿ ಹುಟ್ಟಿರುವುದಕ್ಕೆ ಅಥವಾ ಕವಿತೆಯಲ್ಲಿ ಮೂರ್ತತೆಯನ್ನು ಪಡೆಯುವುದಕ್ಕೆ ಇರಬಹುದಾದ ಕಾರಣವನ್ನು ವ್ಯವಸ್ಥೆಯೊಂದರಿಂದಲೇ ಹುಡುಕಬೇಕಾಗಿದೆ.

ಆರ್ಥಿಕ ಅಡಚಣೆ, ಅದರಿಂದ ತುಳಿತಕ್ಕೆ ಒಳಗೊಂಡ ಇಂದಿನ ಮಧ್ಯಮ ವರ್ಗದ ಮುಖ್ಯನೆಲೆಯಾಗಿದೆ. ತಹಬಂದಿಗೆ ಸಿಕ್ಕದ ಈ ಮನಸ್ಸು ಅನೇಕ ಬಯಸುತ್ತಿದೆ. ಬಯಕೆ ತೀರಿಸಲಾಗದೇ ಚಡಪಡಿಸುತ್ತಿದೆ. ವ್ಯಕ್ತಿ ಸಂಬಂಧಗಳಲ್ಲಿ ಮಾಯವಾಗಿರುವ ಪ್ರೀತಿಯ ಪುನರ್ ಪ್ರತಿಷ್ಠೆಯನ್ನು ಈ ಪರಿಸರವು ಒತ್ತಾಯಿಸುತ್ತದೆ. ಕಾಳೇ

ಗೌಡರು ಗಂಡು ಹೆಣ್ಣಿನ ಪ್ರೇಮದ ಕುರಿತು ಹೆಚ್ಚು ಒತ್ತುಕೊಟ್ಟು ಬರೆದಿದ್ದಾರೆ. ಹಳ್ಳಿಗೆ ಇನ್ನೂ ಗಾಢವಾಗಿ ತಟ್ಟದಿರುವ ಉದ್ವಿಗ್ನ, ಅಶಾಂತ ಪರಿಸರವು ನಗರದಲ್ಲಿ ಹೆಚ್ಚು ಗಾಢವಾಗಿ ಬೆಳೆದಿದೆ. ಹಳ್ಳಿಯಲ್ಲಿ ಜೀವಂತವಿರುವ ಜೀವನ ದ್ರವ್ಯವಿದು. ಇದನ್ನು ಇಲ್ಲಿ ಹೇಳಲು ಮುಖ್ಯ ಕಾರಣ ಹೊಂದಿದೆ.

ಕವನ ಸಂಕಲನವನ್ನು ಗಮನಿಸಿ. ಹೆಚ್ಚಿನ ಕವಿತೆಗಳು ಪ್ರೀತಿಯ ಬಗೆಗೆ ಅದರಿಂದುಂಟಾದ ವ್ಯಸನದ ಬಗೆಗೆ ಹೇಳುತ್ತವೆ. ಆದರೆ ಈ ಹೆಚ್ಚಿನ ಕವಿತೆಗಳಲ್ಲಿ ವಿದ್ಯಾವಂತ ಪರಿಸರವೊಂದಿದೆ. 'ಅನೂನ ವ್ಯಸನಿ ಕುಮಿಂಬಾ' 'ಕರಾವಳಿಯಲ್ಲಿ ಗಂಗಾಲಗ್ನ' ಮುಂತಾದ ಕವಿತೆಗಳನ್ನು ಲಕ್ಷಿಸಿದಾಗ ಇದು ಅರ್ಥವಾಗುತ್ತದೆ, ಈ ಕವಿತೆಗಳು ವಿದ್ಯಾವಂತ ಮಧ್ಯಮ ವರ್ಗವನ್ನು ಬದಲಿಸುವಷ್ಟು ಶಕ್ತವಾಗಲು ಕಾರಣವಿದು. ಸಾಮಾನ್ಯ ಮನುಷ್ಯರ ಕುರಿತಂತೆ ಕವನಗಳು ಈ ಸಂಕಲನದಲ್ಲಿ ತುಂಬಾ ಕಡಿಮೆ. ಅಂದರೆ: ಈ ಪ್ರಬಂಧದ ಮೊದಲಿಗೆ ಹೇಳಿರುವ ವಿಚಾರ–ಮಧ್ಯಮ ವರ್ಗದ ವಿದ್ಯಾವಂತ ಜನ ಜಾತೀಯ ಭ್ರಮೆಗಳಿಂದ ದೂರವಾಗಿಲ್ಲ. ಅವರನ್ನೇ ಉದ್ದೇಶಿಸಿ ಇಲ್ಲಿಯ ಕವಿತಗೆಳು ರೂಪುಗೊಂಡಿವೆ.

ಈ ಕವನ ಸಂಕಲನದ ಕವಿತೆಗಳನ್ನು ಮುಖ್ಯವಾಗಿ ಮೂರು ವಿಭಾಗವಾಗಿ ನೋಡಬಹುದು. ಒಂದನೆಯ ವರ್ಗ–ಪ್ರೇಮವು ಹೆಚ್ಚು ವೈಯಕ್ತಿಕವಾದುವುಗಳು. ಇವುಗಳಲ್ಲೆಲ್ಲ ಹಲುಬುವಿಕೆಯು ಹೆಚ್ಚಿದೆ. ಈ ವ್ಯಸನಕ್ಕೆ ವಾಸ್ತವಿಕೆಯ ಅಂಶವೇ ಇಲ್ಲವೆಂದು ನಾನು ಹೇಳಲಾರೆ. ಆದರೆ, ಹೆಚ್ಚು ಭ್ರಮೆಯಿಂದ ಕೂಡಿಕೊಂಡ ನೋವಿನ ತೊಡಕು ಈ ನಾಯಕರನ್ನು ಬಳಲಿಸಿವೆ. ಉದಾಹರಣೆಗಾಗಿ "ಗೆಳೆಯ" "ಮಳೆ ಮತ್ತು ಕೊಡೆ;" "ಅವಳ ದಿನಚರಿಯಲ್ಲಿ ಕದ್ದು ನೋಡಿದ್ದು" ಮುಂತಾದ ಕವಿತೆಗಳನ್ನು ನಾವು ನೋಡಬಹುದು. ಆದುದರಿಂದ ಇವು ಹೆಚ್ಚು ವೈಯಕ್ತಿಕವಾದ ಭಾವಗಳನ್ನು ಹೇಳುವ ಕವಿತೆಗಳಾಗಿವೆ. ಈ ರೀತಿಯ ಭಾವಗಳಿಗೆ ಸಾಮಾಜಿಕತೆಯ ಸ್ಥಾನವನ್ನು ಕೊಡುವುದು, ಹಾಗೆ ನೋಡಿದರೆ, ಕಷ್ಟ. ಯಾಕೆಂದರೆ, ಮಾನವನ ಜೀವನಕ್ಕೆ ತಗಲುವ ಪ್ರೇಮದ ರೂಪವೂ ಹೆಚ್ಚು ವೈಯಕ್ತಿಕ ಮುಖವುಳ್ಳದ್ದು.

ಎರಡನೆಯ ವರ್ಗದಲ್ಲಿ ಕವಿತೆಗಳು ಕೇವಲ ಪ್ರೇಮದ ವೈಯಕ್ತಿಕ ಸ್ಥಾನವನ್ನಷ್ಟೇ ಪಡೆದುಕೊಂಡಿಲ್ಲ. ಅವನ್ನು ಸಾಮಾಜಿಕ ಕಟ್ಟುಪಾಡುಗಳಲ್ಲಿ ಇಟ್ಟು ನೋಡಲಾಗಿದೆ. ಇಲ್ಲಿ ಹೆಚ್ಚು ಭ್ರಮೆಗಳಿಲ್ಲ. ಅವರ ಬದಲು ವಾಸ್ತವ ಕುರಿತ ನೋಟವೂ ಹೆಚ್ಚು ಸ್ಪಷ್ಟವಾಗಿ ಕವಿತೆಗಳಲ್ಲಿ ಮೂಡಿ ಬಂದಿವೆ. ಉಳಿದ ಕವಿತೆಗಳಲ್ಲಿ ಕಾಣದ ಚಿಂತನ ದ್ರವ್ಯವು ಇಲ್ಲಿ ಹೆಚ್ಚು ಗಟ್ಟಿಯಾಗಿ ರೂಪುಗೊಂಡಿರುವುದು ಕಾಣಿಸುತ್ತದೆ. ಪ್ರೇಮವು ಕೇವಲ ಎರಡು ಲಿಂಗಗಳ ಆಕರ್ಷಣೆಯಾಗಿಯಾಗಿಯಷ್ಟೇ ಅಲ್ಲದೆ ಸಾಮಾಜಿಕ ವಾಸ್ತವ

ದೊಂದಿಗೆ ಈ ಕವಿತೆಗಳು ಚರ್ಚಿಸುವುದು ಗಮನಾರ್ಹವಾಗಿದೆ. ಈ ಮೇಲಿನ ಮಾತುಗಳಿಗೆ "ಕರಾವಳಿಯಲ್ಲಿ ಗಂಗಾಲಗ್ನ," "ಕಾಮ ದಹನ"ದಂಥಾ ಕವಿತೆಗಳನ್ನು ನೋಡಬಹುದು. ಇಲ್ಲಿ ಕವಿತೆಗಳು ವೈಯಕ್ತಿಕತೆಯಿಂದ ಸಾಂದ್ರವಾದ ಸಾಮಾಜಿಕ ಇತಿಹಾಸವತ್ತ ಹೆಜ್ಜೆ ಹಾಕುವುದನ್ನು ನಾವು ನೋಡುತ್ತೇವೆ. ಇಂತಹ ಕವಿತೆಗಳಲ್ಲಿ ಹೆಚ್ಚು ಭಾವನಾತ್ಮಕ ಬಂಧನಗಳಿಲ್ಲ. ಕಾಳೇಗೌಡರು ಇಂತಹ ಕವಿತೆಗಳಲ್ಲಿ ಹೆಚ್ಚು ವಸ್ತುನಿಷ್ಠವಾಗಿ ಬರೆಯುತ್ತಾರೆ. ಕವಿತೆಯೊಂದಿಗೆ ಸಾಮಾಜಿಕ ಬದಲಾವಣೆಯ ಕುರಿತಂತೆ ಮುನ್ನೋಟ ಒದಗಿಸುತ್ತಾರೆ. ಈ ಕವಿತೆಗಳಲ್ಲೇ ನಾವು ಸಾಂಸ್ಕೃತಿಕ ಸಂಜ್ಞೆಯನ್ನು ಕಾಣಲು ಸಾಧ್ಯವಾಗುತ್ತದೆ. ಪಾತ್ರಗಳ ಪೋಷಣೆಗಾಗಿ ಬರುವ ಸಾಂಸ್ಕೃತಿಕ ಅಂಶಗಳು ಕವಿತೆಗಳ ತಾತ್ವಿಕ ನಿಲುವನ್ನು ಸಮರ್ಥಿಸುವುದಕ್ಕೆ ಹೆಚ್ಚು ಸಹಕಾರಿಯಾಗಿವೆ. ಈ ಸಾಂಸ್ಕೃತಿಕ ಚೌಕಟ್ಟು ಕೂಡಾ ಸಾಮಾಜಿಕ ಅಗತ್ಯಗಳಿಂದ ಮೂಡಿ ಬಂದವುಗಳು ಎನ್ನುವುದಕ್ಕೆ—'ಕರಾವಳಿಯಲ್ಲಿ ಗಂಗಾಲಗ್ನ'ದಂತಹ ಕವಿತೆಯೊಂದೇ ಸಾಕಾಗುತ್ತದೆ. "ಪುರಾಣ ಕಥೆಯ ಮತ್ತು ಸದ್ಯದ ಆಚರಣೆಯ ಒಟ್ಟು ಚೌಕಟ್ಟಿನೊಳಗೆ ಕವಿ ಪರಂಪರೆಯನ್ನು ಅರ್ಥೈಸುತ್ತ ರಾಜಕೀಯ ವಿಶ್ಲೇಷಣೆಯನ್ನು ಮಾಡುತ್ತ ಹೋಗುವದು ಮತ್ತು ಕಾಮ್ರೇಡನಿಗೆ ಅಪಮಾನ ಮಾಡದೆ ಅವನು ಮಾಡುವ ತಪ್ಪುಗಳನ್ನು ತೋರಿಸುವುದು ಕಲೆಯನ್ನು ದುಡಿಸಿಕೊಳ್ಳುವಲ್ಲಿ ನಿಪುಣನಾದ, ಸಾಮಾಜಿಕ ಕಳಕಳಿಯ ಕಲಾಕಾರನಿಗೆ ಮಾತ್ರ ಸಾಧ್ಯವೆಂಬುದನ್ನು ನಾಗವಾರರು ತೋರಿಸಿಕೊಟ್ಟಿದ್ದಾರೆ." (ಸಾಹಿತ್ಯ ಮತ್ತು ಸಮಾಜ. ರಮಜಾನ ದರ್ಗಾ ಪು. ೭೮)

ಇಲ್ಲಿ ಗಮನಿಸದಿದ್ದ ಕೆಲವು ಅಂಶಗಳತ್ತ ನಾವು ಗಮನಹರಿಸಬಹುದು. ಇಲ್ಲಿಯ ನಾಯಕ ಹೆಚ್ಚು ಉದ್ದೇಶಿತ ನಾಯಕ. ಹೀಗೆ ಉದ್ದೇಶಿತ ನಾಯಕನೆಂದು ಕರೆಯಲು ಕಾರಣವಿದೆ. 'ಕಾಮ್ರೇಡ' 'ವರ್ಗ ಸಂಘರ್ಷ' ಇತ್ಯಾದಿಗಳು ಹೆಚ್ಚು ಒತ್ತು ಕೊಡಬೇಕಾದ ಪದಗಳು. ನಾಯಕನ ಈ ವ್ಯಕ್ತಿತ್ವದ ಪೊಳ್ಳನ್ನು ಗುರುತಿಸುವುದು ಕವಿತೆಯ ಉದ್ದೇಶವಾಗಿರುವುದರಿಂದ. ಈ ಮಾತುಗಳು ಒಟ್ಟು ವರ್ಗ ಸಂಘರ್ಷವನ್ನು ಪ್ರಶ್ನಿಸುವವುಗಳಾಗಿವೆ.

ಈ ಕವಿತೆಗಳಲ್ಲಿ ಕಾಣುವ ಮುಖ್ಯವಾದ ಅಂಶವೆಂದರೆ, ಈ ಆಚರಣೆಗಳ ಚೌಕಟ್ಟನ್ನು ಒಡೆಯುವತ್ತ ಕವಿತೆಯೊಳಗಿನ ಅಂಶಗಳು ಆಲೋಚಿಸುವ ಹೊಳಹು ಇಲ್ಲ. ಅದರ ಬದಲಾಗಿ ಈ ಚೌಕಟ್ಟಿನೊಳಗಡೆ ಹೇಗೆ ಸಾಮಾಜಿಕ ಬದಲಾವಣೆಯನ್ನು ಮಾಡಬಹುದು ಎಂಬುದನ್ನೇ ಆಲೋಚಿಸುತ್ತವೆ. ಇದಕ್ಕೆ ಕಾರಣವೆಂದರೆ ಕಾಮ್ರೇಡ ವರ್ಗ ಸಂಘರ್ಷದ ಬಗೆಗೆ ಕೊಡುವ ಎಚ್ಚರವೆ ಕವಿಯ ತಾತ್ವಿಕತೆಯೂ ಆಗಿರುವುದರಿಂದ ಆಗಿರಬಹುದೆ ? ಆದರೆ ಗಮನಿಸಬಹುದಾದ ಅಂಶವೆಂದರೆ ಈ ರೀತಿಯ ಸಾಂಸ್ಕೃತಿಕ ಚೌಕಟ್ಟು ಹಳ್ಳಿಯ ಪರಿಸರದಲ್ಲಿ ರೂಪ ಪಡೆಯುತ್ತದೆ. ನಾಯಕ-ನಾಯಕಿಯರು ಈ ಹಳ್ಳಿಯ ಸಾಂಸ್ಕೃತಿಕ ಚೌಕಟ್ಟಿಗೆ ಆಗಂತುಕರು. ಇದರಿಂದಾಗಿ ನಾಯಕ-ನಾಯಕಿ

ಯರ ಪ್ರಪಂಚ ಮತ್ತು ಹಳ್ಳಿಯ ಸಾಂಸ್ಕೃತಿಕ ಪ್ರಪಂಚ ಬೆಸೆಯಲು ಯತ್ನಿಸುತ್ತವೆ. ಪರಸ್ಪರ ಪ್ರೋಷಣೆಯ ಕ್ರಿಯೆಯು ಇಲ್ಲಿ ನಡೆಯುವುದಿಲ್ಲ. ಈ ಬೆಸೆಯುವುದಾಗಲೀ ಘರ್ಷಣೆಯಾಗಲೀ ಕವಿಯ ನೇರ ಲಕ್ಷ್ಯದಲ್ಲಿಲ್ಲ. ಅದರ ಬದಲಾಗಿ ಕವಿ ಇಲ್ಲಿಯೂ ಲಕ್ಷಿಸುವುದು ಗಂಡು ಹೆಣ್ಣಿನ ಸಂಬಂಧದ ಮೇಲೆಯೇ ಆಗಿದೆ. ಮತ್ತು ಹೀಗಾಗುವುದರಿಂದ ಕವಿತೆಗಳು ಹೆಚ್ಚು ವ್ಯಕ್ತಿನಿಷ್ಠವಾಗುತ್ತವೆ. ವ್ಯಕ್ತಿ ನಿಷ್ಠವಾಗುತ್ತಾ ಬಂದಂತೆ ಘರ್ಷಣೆಯ ಅಥವಾ ಒಪ್ಪಂದ ಸ್ವರೂಪವೂ ಬದಲಾಗುತ್ತವೆ. ವ್ಯಕ್ತಿನಿಷ್ಠ ಪ್ರಜ್ಞೆಯಿಂದಲೇ ಇಲ್ಲಿಯ ಕವಿತೆಗಳು ಮೂಡಿ ಬಂದಿರುವುದರಿಂದ ಭಾವನಾತ್ಮಕ ಬದಲಾವಣೆಯು ನಾಯಕ-ನಾಯಕಿಯ ಸಂಬಂಧದಲ್ಲಿ ಹೆಚ್ಚು ಗಟ್ಟಿಯಾಗುತ್ತದೆ. ಇದರರ್ಥ ವಾಸ್ತವವನ್ನು ಅಲ್ಲಗಳೆಯುತ್ತಾರೆ ಎಂದಲ್ಲ: ಅದರ ಬದಲಾಗಿ ಕವಿಯು ನಾಯಕ-ನಾಯಕಿಯರ ಪ್ರೇಮ ಬಾಂಧವ್ಯದ ಮೇಲೆ ಹೆಚ್ಚು ಗಾಢವಾಗಿ ತಮ್ಮ ನಿಲುವನ್ನು ವ್ಯಕ್ತಪಡಿಸುತ್ತಾರೆಂದು.

ಮತ್ತೊಂದು ವಿಶೇಷವೆಂದರೆ, ಈ ಎರಡು ವರ್ಗದ ಕವಿತೆಗಳಲ್ಲಿ ಹೆಣ್ಣಿಗೆ ಹೆಚ್ಚಿನ ಚಲನೆಯಿದೆ. ಇವು ಸಾಂಸ್ಕೃತಿಕ ಬಂಧನವನ್ನು ಮೀರಿ ಬೆಳೆಯುವಂಥದ್ದು ಉದಾ : ೧. ಕರಾವಳಿಯಲ್ಲಿ ಗಂಗಾಲಗ್ನ ೨. ಕಾಮದಹನ ೩. ತೆಳುಗಾಳಿಗೂ ಹಗುರ. ಇತ್ಯಾದಿ.

ಮೂರನೆಯ ವರ್ಗದ ಕವಿತೆಗಳು ಸಾಮಾಜಿಕ ಮತ್ತು ರಾಜಕೀಯ ವಿಡಂಬನೆಯ ಜಾತಿಗೆ ಸೇರಿದವುಗಳು: ಇವು ಹೆಚ್ಚು ಯಶಸ್ವಿ ಕವಿತೆಗಳಲ್ಲ. ಒಟ್ಟಾಗಿ, ಇಲ್ಲಿ ಹೆಚ್ಚಿನ ಕವಿತೆಗಳು ಭಾರತೀಯ ಮಧ್ಯಮ ವರ್ಗದ ಮನೋಭಾವದ ಸ್ಥಿತಿಯನ್ನು ಹೇಳುವ ಕವಿತೆಗಳಾಗಿವೆ; ಭಾರತೀಯ ಮಧ್ಯಮ ವರ್ಗದ ರೂಪಕಗಳಾಗಿವೆ.

ಬಿ. ಸದಾಶಿವ

ದಲಿತ ಸಂವೇದನೆ : ದಾಕ್ಷಿಣಾತ್ಯ ಸಾಹಿತ್ಯದಲ್ಲಿ

ಜಗತ್ತಿನ ಯಾವುದೇ ಪ್ರಾಣಿವರ್ಗಕ್ಕಿಂತಲೂ ನಿಕೃಷ್ಟವಾಗಿ ಬದುಕುವ ಜೀವಿಗಳೆಂದರೆ ದಲಿತರು ಎಂಬ ಮಾತೊಂದಿದೆ. ಸ್ವಂತ ಸುಖದ ರುಚಿ ಹತ್ತಿಸಿಕೊಂಡ ಮನುಷ್ಯಕುಲ ಇಂತಹ ಜನಾಂಗವೊಂದನ್ನು ನಿರ್ಮಿಸಿ ಹಾಕಿದ ಕೆಲಸ ನಡೆದದ್ದು ಇಂದು–ನಿನ್ನೆಯೇನಲ್ಲ. ಶಕ್ತರು ತಮ್ಮ ಸೇವೆಗಳಿಗಾಗಿ ಅಶಕ್ತರನ್ನು ತೊಡಗಿಸಿದಂದು ಈ ಮಹಾರೋಗ ಪ್ರಪಂಚದಲ್ಲಿ ಹುಟ್ಟಿಕೊಂಡಿತು. ನೊಂದವರ, ಬೆಂದವರ ನೋವಿನ ಧ್ವನಿ, ಪ್ರತಿಭಟನೆ ಇವೆಲ್ಲ ಅವರವೇ ನಿಟ್ಟುಸಿರಿನಂತೆ ಯಾರಿಗೂ ಕೇಳದೆ ಹೋದುದಕ್ಕೆ ಕಾರಣ ಮೇಲುವರ್ಗ ಅವರ ಮೇಲೆ ನಡೆಸಿದ ನಿರಂತರ ಶೋಷಣೆಯೇ. ಬದುಕಿನ ರಹಸ್ಯವನ್ನೆಲ್ಲ ಬಿಚ್ಚಿ ಹೇಳುವ ಗೀತಾಚಾರ್ಯ "ಚಾತುರ್ವರ್ಣ್ಯಂ ಮಯಾಸೃಷ್ಟಂ ಗುಣಕರ್ಮವಿಭಾಗಶಃ" ಎಂದದ್ದು. ನಮ್ಮ ಧಾರ್ಮಿಕ ಗ್ರಂಥಗಳು ಸಾಮಾಜಿಕ ಅಸಮತೆಯೇ ನಮ್ಮ ಬದುಕಿನ ಯಶಸ್ಸಿನ ಗುಟ್ಟು ಎಂಬುದಾಗಿ ಸುಖೀಜನವರ್ಗ ತಿಳಿದುಕೊಂಡದ್ದು ವ್ಯವಸ್ಥಿತವಾದ ಶೋಷಣೆ ನಡೆಯುವುದರಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ.

ಈ ಅಭಿಶಪ್ತ ಜನಾಂಗದ ನೋವು-ಅವಮಾನ ಉಲ್ಲೇಖ ಸಾಹಿತ್ಯಿಕವಾಗಿ ಯಾವ ಸ್ಥಾನವನ್ನು ಯಾವ ಕಾಲದಲ್ಲಿ ಪಡೆದಿತ್ತು ಎನ್ನುವುದರ ಅನ್ವೇಷಣೆ ಬೆಳೆದು ಬರುತ್ತಿರುವ ದಲಿತ ಚಳವಳಿಗೆ ಸಹಾಯಕವಾಗಬಲ್ಲುದು. ಒಂದೇ ನೆಲದಲ್ಲಿ ನಡೆದು ಒಂದೇ ನೀರನ್ನು ಕುಡಿದು ಬದುಕುತ್ತಿರುವ ನಾವೆಲ್ಲ ಈ ವಿಧವಾಗಿ ಮೇಲುಕೀಳಿನ ತಾರತಮ್ಯಕ್ಕೆ ಬಲಿಬಿದ್ದದ್ದು ಸರಿಯಲ್ಲ ಎಂಬ ಪ್ರಜ್ಞೆ ನಮ್ಮಲ್ಲಿ ಮೂಡುವುದು ಸಾಕಷ್ಟು ತಡವಾಗಿಯೇ. ಆದರೂ ಈ ಮಹಾಪರಾಧವನ್ನು ಸರಿಪಡಿಸುವುದಕ್ಕೆ ಎಲ್ಲ ಮಾರ್ಗಗಳನ್ನೂ ಹುಡುಕಿ ಹಿಡಿಯಬೇಕಾದದ್ದು ಅಗತ್ಯ. ಹೀಗೊಂದು ಚಿಂತನಗತಿ ಹರಿದಾಗ ಸಾಹಿತ್ಯದ ಕುರಿತು ಸಹಜವಾಗಿಯೆ ಗಮನ ಹರಿಯುತ್ತದೆ. ಅಥವಾ ಆಕರ್ಷಣೆ

ಗಾಗಿಯಾದರೂ ನಾವು ಈ ವಿಚಾರದ ಉಲ್ಲೇಖ ಅಲ್ಲಿ-ಇಲ್ಲಿ ಮಾಡುವಂತೆ ಕೆಲ ಮಂದಿ ಸಾಹಿತಿಗಳಾದರೂ ಮಾಡಿರುವುದಕ್ಕೆ ಸಾಧ್ಯ ಆಸ್ಪುದವು ಸರಿಯಾದ ವಿಚಾರ. ಮತ್ತೊಂದು ಅರ್ಥದಲ್ಲಿ ದಲಿತ ಚಳವಳಿಗೆ ಬಲಬಂದದ್ದು ಸಾಹಿತಿಗಳಿಂದಲೆ. ಆದ ಕಾರಣದಿಂದ ವಿದ್ಯಾವಂತರ ನಡುವೆ ಈ ಪ್ರಜ್ಞೆ ಮತ್ತಷ್ಟು ಆಳವಾಗಿ ಬೇರೂರು ವುದಕ್ಕೆ ನಮ್ಮ ಸಾಹಿತ್ಯಿಕ ಕ್ಷೇತ್ರದಲ್ಲಿ ಈ ನತದೃಷ್ಟರ ಕುರಿತ ಪ್ರಸ್ತಾಪ ಎಲ್ಲಿ ಎಷ್ಟು ಆಗಿದೆ ಎಂಬ ಕುರಿತ ವ್ಯವಸ್ಥಿತ ಪ್ರಯತ್ನ ಸ್ವಾಗತಾರ್ಹ.

ಈ ದಿಸೆಯಲ್ಲಿ ಒಳ್ಳೆಯ ಕೆಲಸವೊಂದು ನಡೆದದ್ದು ಕೇರಳದ ಕಾಸರಗೋಡಿನಲ್ಲಿ. ಭಾಷಾವಾರು ವಿಂಗಡಣೆಯಲ್ಲಿ ಕೇರಳದ ಭೂಪಟಕ್ಕೆ ತಂದ ಕನ್ನಡ ನೆಲ ಕಾಸರಗೋಡು. ಮಲಯಾಳದ ಜತೆ ಸಹೋದರ ಜೀವನ ಬದುಕುತ್ತಿರುವ ಇಲ್ಲಿಯ ಸರಕಾರೀ ಕಾಲೇಜಿನ ಸ್ನಾತಕೋತ್ತರ ಕನ್ನಡ ಅಧ್ಯಯನ ವಿಭಾಗದ ಆಶ್ರಯದಲ್ಲಿ ಮಾರ್ಚ ೧೪ ಮತ್ತು ೧೫ರಂದು ನಡೆದ ವಿಚಾರ ಸಂಕಿರಣದ ಹೆಸರು "ದಕ್ಷಿಣ ಭಾರತೀಯ ಭಾಷೆಗಳಲ್ಲಿ ದಲಿತ ಸಂವೇದನೆ" ಬಹಳ ಮಟ್ಟಿಗೆ ದಕ್ಷಿಣ ಕರ್ನಾಟಕ ಮತ್ತು ಸುತ್ತಮುತ್ತಲಿನ ಪರಿಸರಕ್ಕೆ ಹೊಸ ವಿಚಾರ ಸಮಗ್ರವಾಗಿ ಹೀಗೊಂದು ವಿಚಾರಗೋಷ್ಠಿ ನಡೆದದ್ದು ಇಲ್ಲಿಯ ಮಟ್ಟಿಗಂತೂ ಪ್ರಥಮ.

ಸಹನಾವವತು....

೧೪ ರ ಪೂರ್ವಾಹ್ನ ಜ್ಯೋತಿ ಬೆಳಗಿಸಿ ಉದ್ಘಾಟಿಸಿದ ಕವಿ ಕಯ್ಯಾರ ಕಿಞ್ಞಣ್ಣ ರೈ ಅವರ ಅಭಿಪ್ರಾಯಪಟ್ಟದ್ದು ದಲಿತ ಸಂವೇದನೆ ವೇದವೇ ಮೊದಲಾದ ನಮ್ಮ ಧಾರ್ಮಿಕ ಗ್ರಂಥಗಳಲ್ಲಿಲ್ಲ ಎಂದು. ನಮ್ಮ ಧರ್ಮದ ತಿರುಳು "ಸಹನಾವವತು. ಸಹನೌ ಭುನಕ್ತು ಸಹವೀರ್ಯಂಕರ ವಾವಹೈ..."ಎಂಬ ಉಪನಿಷದ್‌ವಾಕ್ಯದಂತೆ ಸರ್ವಜನ ಸಮಾನರೆಂಬ ಅಪೂರ್ವವನ್ನೆಸಿದ ಸಾಮಾಜಿಕ ಸಾಮರಸ್ಯದ್ದಾಗಿತ್ತು. ಕಾಲಕ್ರಮದಲ್ಲಿ ಬದಲಾದ ಸ್ಥಿತಿಗತಿಗೆ ಸ್ಪಂದಿಸಿದ ಮಾನವಕುಲ ತನ್ನ ಅನುಕೂಲಕ್ಕೆ ತಕ್ಕ ಹಾಗೆ ಪ್ರತಿಯೊಂದನ್ನು ರೂಪಿಸಿಕೊಂಡು ದಲಿತರೇ ಮೊದಲಾದ ಸಮಾಜದ ಕೆಳವರ್ಗವೆಂಬುದಾಗಿ ತಾವೇ ದೂರವಿರಿಸಿದ್ದವರನ್ನು ನಿರಂತರವೂ ಶೋಷಿಸುವ ಕೆಲಸ ಆರಂಭವಾಯಿತು......ಕಮ್ಯುನಿಸ್ಟರು ಈ ನೆಲದಲ್ಲಿ ಬೇರು ಬಿಡಲು ಪ್ರಯತ್ನಿಸಿದರಾದರೂ ಯಾಕೋ ಆ ಪ್ರಯತ್ನ ಯಶಸ್ವಿಯಾಗಲಿಲ್ಲ. ಸಮಾಜ ಸುಧಾರಕರೆಂಬುದಾಗಿ ನಾವುಗುರುತಿಸುವ ಎಷ್ಟೋ ಜನರ ಮಹಾ ಪ್ರಯತ್ನಗಳ ಬಳಿಕವೂ ನಮ್ಮ ಸಮಾಜ ಮತ್ತದೇ ಮೊದಲ ಸ್ಥಿತಿಯಲ್ಲೆ ಮುಂದುವರಿಯುತ್ತಿರುವಂತೆ ಕಮ್ಯುನಿಸ್ಟ್ ಚಳವಳಿಕೂಡ ಫಲಕಾರಿಯಾಗಲಿಲ್ಲ. ಅದರ ಕಾರಣದಿಂದ ಉಂಟಾದದ್ದು ಕನ್ನಡದಲ್ಲಿ ಒಂದು ಕಾಲಕ್ಕೆ ಪ್ರಚಾರದಲ್ಲಿದ್ದ "ಪ್ರಗತಿಶೀಲ ಸಾಹಿತ್ಯ"ವೆಂಬ ಪಂಥ. ಮಲಯಾಳವೇ ಮೊದಲಾದ ಭಾಷೆಗಳಲ್ಲಿ ಆ ಚಳವಳಿಯನ್ನೂ ಇದೇ ಈಗ ಆರಂಭ

ಗೊಂಡ ಹಾಗೆ ಪ್ರವರ್ತನಶೀಲವಾಗಿದ್ದರೂ ಕನ್ನಡದಲ್ಲಿಲ್ಲ. ಭಾರತೀಯ ದಲಿತರ ಧ್ವನಿಯಾಗಿ ಮೊದಲು ಕೇಳಿಬಂದ ಹೆಸರು ಅಂಬೇಡ್ಕರ್ ಅವರದು ಎನ್ನಿಸುತ್ತದೆ. ಸ್ವಾತಂತ್ರ್ಯವಾಗಲಿ ಪ್ರಜಾಪ್ರಭುತ್ವವಾಗಲಿ ನಮ್ಮ ದಲಿತರನ್ನು ಮೇಲೆತ್ತುವುದಕ್ಕೆ ಸಮರ್ಥವಾಗಲಿಲ್ಲವೆಂದರೆ ಈ ಸ್ವಾತಂತ್ರ್ಯಕ್ಕಾಗಲಿ ಪ್ರಜಾಪ್ರಭುತ್ವಕ್ಕಾಗಲಿ ಏನರ್ಥ? ...ಕನ್ನಡ ಸಾಹಿತ್ಯದಲ್ಲಿ ದಲಿತ ಸಂವೇದನೆ ಎಲ್ಲಕ್ಕೂ ಮೊದಲು ವ್ಯಕ್ತವಾದದ್ದು ಪಂಪನ ಕಾವ್ಯದಲ್ಲಿ. ಇಡಿಯ ಭಾರತ ಶ್ರವಣವಾದ ಮೇಲೆ "ನೆನೆಯದಿರಣ್ಣ ಭಾರತದಿಂ ಪೆಱರಾರನುಮನೊಂದೆ ಚಿತ್ತದಿಂ ನೆನೆವೊಡೆ ಕರ್ಣನಂ ನೆನೆಯ...." ಎಂದದ್ದು ಕುಲಹೀನ, ವಿಂಗುಲಿಯೊಬ್ಬನನ್ನು ನೆನೆದು ಹೇಳಿದ್ದು ಪಂಪ ಮಹಾಕವಿಯ ದಲಿತಪ್ರಜ್ಞೆಗೊಂದು ಸಾಕ್ಷಿ...

ಆದರೂ ಅವರೇ ಉದ್ಧರಿಸಿದ ವೇದ ಕಾಲದ ಋಷಿ ಕವಷನ ಕಥೆ ವೇದಕಾಲದಲ್ಲೇ ಈ ತಾರತಮ್ಯವಿತ್ತು ಎಂದು ಪರೋಕ್ಷವಾಗಿ ಸೂಚಿಸಿದಂತಾಯಿತು. ಕವಷ ಜಾತಿಕೆಟ್ಟವ; ಆತ ತಮ್ಮ ಜತೆಗೆ ಊಟ ಮಾಡುವುದಕ್ಕೆ ಬಂದ ಎಂದು ಸವರ್ಣೀಯ ಋಷಿಗಳು ಅವನನ್ನು ಮರುಭೂಮಿಗೆ ಅಟ್ಟಿದರಂತೆ. ಆಗ ಆತ ಮಂತ್ರವನ್ನುಚ್ಚರಿಸಿ ಸರಸ್ವತೀ ನದಿ ತನ್ನ ಕಡೆಗೆ ಹರಿಯುವಂತೆ ಮಾಡಿದ. ಜಾಬಾಲಿ ಋಷಿ ತನ್ನ ತಾಯಿಯೊಡನೆ ತನ್ನ ತಂದೆ ಯಾರು ಎಂಬ ಪ್ರಶ್ನೆ ಹಾಕಿದಾಗ ಆಕೆ ತಾನು ಅನೇಕರ ಚಾಕರಿ ಮಾಡಿದಾಗ ನೀನು ಹುಟ್ಟಿದೆ ಎಂದಳಂತೆ. ಈ "ಚಾಕರಿ" ಯಾವುದಾಗಿತ್ತು ?

'ಮೂಲಭೂತ' ಪ್ರಶ್ನೆಗಳು

ಉದ್ಘಾಟನೆ ನಡೆಸಿದ ಮಂಗಳೂರು ವಿಶ್ವವಿದ್ಯಾಲಯದ ಇಂಗ್ಲಿಷ್ ವಿಭಾಗದ ಮುಖ್ಯಸ್ಥ ಡಾ॥ ಸಿ. ಎನ್. ರಾಮಚಂದ್ರ ಅವರು ಎತ್ತಿದ್ದು ಕೆಲ ಮೂಲಭೂತ ಪ್ರಶ್ನೆಗಳನ್ನು. ಅವರೇ ಹೇಳಿದಂತೆ ವಿಚಾರಸಂಕಿರಣದ ಪ್ರಮುಖ ಚರ್ಚಾ ವಿಷಯ ಅದಾಗಬೇಕಾಗಿತ್ತು; ಆಗಿದ್ದರೆ ಸಾರ್ಥಕವೂ ಆಗುತ್ತಿತ್ತು. ಸಾಹಿತ್ಯದಿಂದ ಉಂಟಾಗುವ ಪ್ರಯೋಜನ ಹೇಗೆ ಯಾವ ಬಗೆಯದು ? ದಲಿತರ ಉದ್ಧಾರವಾಗಬೇಕು — ಸಾಹಿತ್ಯದ ಮೂಲಕ ಅದು ಸಾಧ್ಯವೆ ? ಇದನ್ನು ದಲಿತರು ಓದುತ್ತಾರೆಯೆ ? ಅಥವಾ ದಲಿತರ ಕುರಿತಾದ ಸಂವೇದನೆಗಳ ವಿಚಾರಗಳನ್ನು ಉನ್ನತವರ್ಗಗಳಾದ ವಿದ್ಯಾವಂತರಾದ ಜನ ಓದಿದರೆ ಸಾಕೆ ? ಅಥವಾ ಅವರು ಓದುತ್ತಾರೆಯೆ ? ಇಂಜಿನಿಯರ್, ಡಾಕ್ಟರ್ ಮೊದಲಾದ ಸುಸಂಸ್ಕೃತರೆಂಬುದಾಗಿ ಕರೆಸಿಕೊಳ್ಳುವ ಜನ ಇವನ್ನೆಲ್ಲ ಓದಿ ಅರ್ಥ ಮಾಡಿಕೊಳ್ಳುವ ಪ್ರಯತ್ನ ಮಾಡುತ್ತಾರೆಯೆ ? ಖಂಡಿತ ಇಲ್ಲ. ಕಾರಣ ಸಾಮಾಜಿಕ ಬದಲಾವಣೆಯಾದರೆ ಅವರು ತಾವು ಈ ಪೂರ್ವ

ನಿರ್ಧರಿತ ವ್ಯವಸ್ಥೆಯಿಂದ ಅವರು ಹೇಗೆ ಲಾಭ ಪಡೆಯುತ್ತಾರೆ...ಸಾಹಿತ್ಯದ ಉದ್ದೇಶ ಕ್ರಾಂತಿಯಲ್ಲ; ಅದು ರಸಾನುಭೂತಿಗಾಗಿ ಮಾತ್ರ ಎಂದರೆ ಈ ಪ್ರಶ್ನೆ ಬರೋದಿಲ್ಲ. ಹಾಗಾಗಿ ದಲಿತ ಸಂವೇದನೆಯನ್ನು ನಾವು ಸಾಹಿತ್ಯದಲ್ಲಿ ಗುರುತಿಸಿದಾಗ ಸಂತೋಷಪಟ್ಟುಕೊಳ್ಳಬೇಕಾದ ಕಾರಣವಿಲ್ಲ. ಸಾಹಿತ್ಯದಿಂದ ಅಂತಹ ಪ್ರಯೋಜನವಿಲ್ಲ. ಅಬ್ರಹಾಂ ಲಿಂಕನ್‌ಗೆ Uncle Toms Cabin ನಿಂದ ಬಹಳ ಸ್ಫೂರ್ತಿ ಸಿಕ್ಕಿತು ಎಂದರೂ ಆ ಕೃತಿ ಇಲ್ಲದೆ ಹೋದರೂ ಅವನು ಆ ಕೆಲಸ ಖಂಡಿತ ಮಾಡುತ್ತಿದ್ದ...ದಲಿತ ಸಾಹಿತ್ಯಕ್ಕೂ, ದಲಿತ ನಿರ್ಮೂಲನಕ್ಕೂ ಇರುವ ಸಂಬಂಧವೇನು ? ಇವೆರಡೂ ಪ್ರಸಕ್ತವಾಗಿಯಂತೂ ಅರ್ಥಾರ್ಥ ಸಂಬಂಧವಿಲ್ಲದವುಗಳು...ದಲಿತ ಅಭಿವ್ಯಕ್ತಿ ಎಂದರೇನು ? ದಲಿತ ಬರೆದ ಅವರದೇ ನೋವಿನ ಕಥೆಯೆ ? ಇಲ್ಲ ಮತ್ತೊಬ್ಬ ದೂರದಲ್ಲಿ ಕುಳಿತು ಬರೆದದ್ದೆ ? ಓದುಗರಲ್ಲಿ ಕರುಣೆ-ಅನುಕಂಪ ಹುಟ್ಟಿಸುವ ಸಾಹಿತ್ಯವೇ ದಲಿತ ಸಾಹಿತ್ಯವೆ ? ನಿಜಕ್ಕೂ ದಲಿತ ಸಾಹಿತ್ಯವೆಂಬುದಾಗಿ ಕರೆಸಿಕೊಳ್ಳಬೇಕಾದದ್ದು ದಲಿತರ-ದಲಿತರೇ ಬರೆದ ದೇವನೂರರ 'ಒಡಲಾಳ'ದಂತಹ ಕೃತಿ......

ಸಾಹಿತ್ಯಿಕವೂ ಸಾಮಾಜಿಕವೂ ಆದ ಸ್ತರಗಳಲ್ಲಿ ಚಿಂತಿಸಬೇಕಾದ ಪ್ರಶ್ನೆಗಳಿವು. ಇಡಿಯ ವಿಚಾರ ಸಂಕಿರಣದ ಉದ್ದೇಶವನ್ನೇ ಸಾರ್ಥಕತೆಯನ್ನೇ ಪ್ರಶ್ನಿಸಿದ, ಅಲುಗಿಸಿದ ದಾರ್ಷ್ಟ್ಯ ಈ ಪ್ರಶ್ನೆಗಳಿಗಿತ್ತು. ನಿಜ; ದಲಿತ ಚಳವಳಿ ಸಾಹಿತ್ಯದಲ್ಲಿ ಇತ್ತು ಎಂಬುದನ್ನು ಗುರುತಿಸಿದಾಗ, ಅಥವಾ ಸಾಹಿತಿಗಳು ಅದನ್ನು ಮತ್ತಷ್ಟು ಅಳವಡಿಸಿಕೊಂಡಾಗ ..ಅಳವಡಿಸಿಕೊಂಡಾಗ ಪ್ರಯೋಜನವಾದರೂ ಏನು ? ಹೀಗೆ ದಲಿತೋದ್ಧಾರ ಸಾಧ್ಯವೆ ? ಇಷ್ಟಕ್ಕೂ ಎಷ್ಟು ಜನ ತಮ್ಮ ನೋವನ್ನು, ಆಕ್ರೋಶವನ್ನು ಅಕ್ಷರಗಳ ಮೂಲಕ ಅಭಿವ್ಯಕ್ತಿಸಿದ್ದಾರೆ ?

ದಲಿತರು ಎಂದರೆ......

ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ದಲಿತ ಸಂವೇದನೆ ಕುರಿತು ಪ್ರಬಂಧ ಮಂಡಿಸಿದ ಮಂಗಳೂರು ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಮುಖ್ಯಸ್ಥ ಡಾ॥ ಬಿ ವಿ. ವಿವೇಕರೈ ಅವರು ದಲಿತರು ಯಾರು ಎಂಬ ಪ್ರಶ್ನೆಗೆ ಉತ್ತರ ಕೊಟ್ಟರು. ಅಸ್ಪೃಶ್ಯರೇ ದಲಿತರು; ಸಮಾಜದಲ್ಲಿ ನಾಲ್ಕು ಜಾತಿಗಳಿಗಿಂತಲೂ ಹೊರಗಿನ ಪಂಚಮರೇ ದಲಿತರು. ಅನುಭಾವ ಸಾಹಿತ್ಯದ ಕಾಳವ್ವೆ ಒಂದು ಪ್ರಶ್ನೆ ಕೇಳುತ್ತಾಳೆ-ಅವಳು ದಲಿತವರ್ಗಕ್ಕೆ ಸೇರಿದಾಕೆ. ಶೂದ್ರರು ಮಾಂಸ ತಿನ್ನುತ್ತಾರೆ: ಆದರೆ ಹಸು, ಕೋಣಗಳನ್ನು ತಿನ್ನುವುದಿಲ್ಲ. ದಲಿತರು ಅವನ್ನು ತಿನ್ನುತ್ತಾರೆ: ಕೋಳಿಯು, ಕುರಿಯು

ಮಾಂಸ ತಿನ್ನುವ ಜನಕ್ಕೆ ಅದೇ ರೀತಿಯ ಕೋಣನ ಮಾಂಸ ತಿನ್ನುವುದಕ್ಕೆ ಅಡ್ಡಿಯೇನು ?

ಕನ್ನಡೇತರ ಭಾಷೆಗಳು

ದಕ್ಷಿಣ ಭಾರತೀಯ ಭಾಷೆಗಳಾದ ತಮಿಳು–ತೆಲುಗು. ಮಲಯಾಳ ಸಾಹಿತ್ಯಗಳಲ್ಲಿ ದಲಿತ ಸಂವೇದನೆಯ ಕುರಿತ ಪ್ರಬಂಧಗಳ ಮಂಡನೆಯಾಯಿತು. ಪ್ರಾಚೀನ ಮಲಯಾಳ ಸಾಹಿತ್ಯದ ಕುರಿತ ಕೇರಳ ವಿಶ್ವವಿದ್ಯಾಲಯದ ಡಾ॥ ಎಂ. ರಾಮು, ಆಧುನಿಕ ಮಲಯಾಳ ಸಾಹಿತ್ಯದ ಕುರಿತು ಕಾಸರಗೋಡು ಸರಕಾರೀ ಕಾಲೇಜಿನ ಸಿ.ಕಣ್ಣನ್ ಇವರು ಅಧ್ಯಯನಶೀಲ ಪ್ರಬಂಧಗಳಲ್ಲಿ ದಲಿತ ಸಂವೇದನೆಯ ಕುರಿತ ವಿಶ್ಲೇಷಣೆ ನಡೆಸಿದರು. ಡಾ॥ ರಾಮು ಅವರ ಅಭಿಪ್ರಾಯದಂತೆ ಪ್ರಾಚೀನ ಮಲಯಾಳ ಸಾಹಿತ್ಯದಲ್ಲಿ ದಲಿತ ಸಂವೇದನೆಯಿಲ್ಲ ಎಂಬ ವೇದನೆಯ ವಿಚಾರವನ್ನು ಎತ್ತಿ ಹೇಳಿದರು. ಕಣ್ಣನ್ ಅವರ ಪ್ರತಿಪಾದನೆಯಲ್ಲಿ ಆ ಸಂವೇದನೆಗಳಿಗೆ ದಲಿತ ಎಂಬ ಹೆಸರಿಲ್ಲದೆ ಹೋದರೂ ಆಧುನಿಕ ಮಲಯಾಳ ಸಾಹಿತ್ಯದಲ್ಲಿ ಸಾಮಾಜಿಕ ನಿರ್ಬಂಧಗಳಿಗೊಳಗಾಗಿ ತುಳಿತಕ್ಕೊಳಗಾದವರ ಸಮಗ್ರವಾದ ಅಲ್ಲದೆ ಹೋದರೂ ಸಾಕಷ್ಟು ರೀತಿಯ ಉಲ್ಲೇಖವಿದೆ ಅಂದರು. ಕವಿ ಕುಮಾರನ್ ಆಶಾನ್ ಸ್ವತಃ ಕೆಳವರ್ಗದ ಪಂಗಡಕ್ಕೆ ಸೇರಿದವರು. ಅವರ ಚಂಡಾಲಭಿಕ್ಷುಕಿ ಈ ಕುರಿತ ಸ್ಪಷ್ಟ, ದಿಟ್ಟ ಉಲ್ಲೇಖ ನೀಡುತ್ತದೆ ಅನ್ನುವುದನ್ನು ಎತ್ತಿಹೇಳಿದರು. ಕಾದಂಬರಿಗಳಲ್ಲಿ ಕೆಳವರ್ಗದವರ ನೋವನ್ನು ಸಮರ್ಥವಾಗಿ ಅಭಿವ್ಯಕ್ತಿಸಿದ ಎಷ್ಟೋ ಉದಾಹರಣೆಗಳಿವೆ ಎನ್ನುವುದನ್ನೂ ಸೂಚಿಸಿದರು.

ತಮಿಳು ಸಾಹಿತ್ಯದ ಕುರಿತು ಪ್ರಬಂಧ ಮಂಡಿಸಿದವರು ಚಿತ್ತೂರು ಸರಕಾರಿ ಕಾಲೇಜಿನ ತಮಿಳು ವಿಭಾಗದ ಮುಖ್ಯಸ್ಥ ಡಾ॥ವಿನಾಯಕ ಪೆರುಮಾಳ್. ಅವರು ತಮಿಳು ಸಾಹಿತ್ಯದಲ್ಲೂ ಇಂತಹದೊಂದು ಪಂಥವಿಲ್ಲದೆ ಹೋದರೂ ದಲಿತರ ಕುರಿತ ಸಾಕಷ್ಟು ಪ್ರಸ್ತಾಪವಿದೆ. ಸಾಮಾಜಿಕ ಕ್ರಾಂತಿಯ ಅತ್ಯಂತ ದೊಡ್ಡ ಹೆಸರು ಪೆರಿಯಾರ್ ರಾಮಸ್ವಾಮಿ ನಾಯಕರ್ ಅವರ ಪ್ರಭಾವ ಬಹಳಷ್ಟು ತಮಿಳು ಬರಹಗಾರರ ಮೇಲಾಗಿದೆ. ದೇವರನ್ನು ಬಹಿಷ್ಕರಿಸಿ ಎಂಬ ಕೂಗು ಸಂಪ್ರದಾಯ ಶರಣ ಸಮಾಜವನ್ನು ಬಡಿದೆಬ್ಬಿಸುವ ಕೆಲಸ ಮಾಡುತ್ತದೆ. ಈಗಿನ ರಾಜಕೀಯ ಸ್ಥಿತ್ಯಂತರ ಕೂಡ ದೇವರೇ ಮೊದಲಾದ ಮೌಢ್ಯಗಳನ್ನು ಹರಿದೊಗೆಯುವ ಕೆಲಸಮಾಡುವ ಪ್ರಸಂಗದಲ್ಲಿ ಅದಕ್ಕೆ ಸ್ಪಂದಿಸದಿರುವುದು ಸಾಹಿತಿಗಳಿಗೆ ಸಾಧ್ಯವೆ ?

ಬೆಂಗಳೂರಿನ ಸಾಹಿತಿ, ಪತ್ರಿಕಾಕರ್ತೆ ಶ್ರೀ ಹರಿಹರಪ್ರಿಯ ಅವರ ತೆಲುಗು ಸಾಹಿತ್ಯಾವಲೋಕನ ಎಲ್ಲ ವಿಚಾರಗಳಲ್ಲೂ ದಲಿತ ಸಂವೇದನೆಯ ಕುರಿತ ಸಮಗ್ರ

ವಾದ ಅಧ್ಯಯನವಾಗಿತ್ತು. ೧೯೦೭ರಷ್ಟು ಹಿಂದೆಯೇ ಅನಾಮಿಕ ಕವಿಯೊಬ್ಬ ಬರೆದ ಕವಿತೆ ದಲಿತ ಸಂವೇದನೆಗೆ ತೆಲುಗು ಸಾಹಿತ್ಯದಲ್ಲಿ ಎಷ್ಟು ಪ್ರಾಚೀನತೆಯಿದೆಯೆಂಬುದನ್ನು ಸೂಚಿಸುತ್ತದೆ ಎಂಬುದನ್ನು ಪ್ರತಿಪಾದಿಸಿದರು. ೧೯೫೦ರ ದಶಕದಲ್ಲಿ ನವ್ಯ ಚಳವಳಿ ಬಂದಿದ್ದರೇ, ೧೯೩೦ರಲ್ಲೇ ತೆಲುಗಿನಲ್ಲಿ ದಲಿತ ಸಂವೇದನೆಯು ಸ್ಪಷ್ಟ ಉಲ್ಲೇಖದ ಕಾದಂಬರಿಗಳು ಬಂದವು. ನವ್ಯದ ಕಾಲದಲ್ಲಿ ಹುಟ್ಟಿಕೊಂಡ 'ದಿಗಂಬರ ಕವುಲು' ಪಂಥ ದಲಿತ ಸಂವೇದನೆಗೆ ಯೋಗ್ಯ ಸ್ಥಾನ ನೀಡಿದೆ. ಇಷ್ಟಿದ್ದರೂ ಕನ್ನಡದಲ್ಲಿ ಬಂದ ಹಾಗೆ ದಲಿತ ಚಳವಳಿ ಎಂಬ ಸಂಘಟಿತ ಯತ್ನ ಸಾಗಲಿಲ್ಲ ಎಂದರು.

ಕನ್ನಡ ಸಾಹಿತ್ಯ :

ಕನ್ನಡ ಸಾಹಿತ್ಯದಲ್ಲಿ ದಲಿತಸಂವೇದನೆಯ ಕುರಿತ ಕೆಲವು ಒಳ್ಳೆಯ ಪ್ರಬಂಧಗಳಾದವು. ವಚನ ಸಾಹಿತ್ಯ ದಲಿತ ಸಂವೇದನೆಗೆ ಶ್ರೀಕಾರ ಹಾಕಿದ ಬಳಿಕ ಬಸವಣ್ಣ ಮಾಡಿದ ಸಾಹಿತ್ಯ ಕ್ರಾಂತಿ ಹೇಗೆ ನಾಮಾವಶೇಷವಾಯಿತೋ ಹಾಗೆ ಹೆಸರಿಗೆ ಮಾತ್ರ ಉಳಿದುಕೊಂಡು ಬಂದಿತು. ಹನ್ನೆರಡನೇ ಶತಮಾನದಷ್ಟು ಹಿಂದೆ ಆರಂಭವಾದ ಈ ಕ್ರಾಂತಿ ಅಲ್ಲಿಂದಲ್ಲೇ ಮುರುಟಿ ಹೋಗಿ ಇಪ್ಪತ್ತನೇ ಶತಮಾನದ ಈ ಕೊನೆಗಾಲದಲ್ಲೂ ಮೊದಲಿನ ಸ್ಥಾನದಲ್ಲೇ ಉಳಿದು ಬಂದದ್ದು ಪಟ್ಟಭದ್ರ ಉನ್ನತ ವರ್ಗದವರು ಸಮಾಜದ ಮೇಲೆ ಹೊಂದಿರುವ ಸ್ವಾಧೀನತೆಯ ಕುರಿತು ಏನೂ ಹೇಳುವುದಿಲ್ಲವೆ ? ಜಾನಪದ ಸಂದರ್ಭದಲ್ಲಿ ದಲಿತರ ಕಥೆಯಾಗಬೇಕಾಗಿತ್ತು; ಆದರೆ ಹಾಗಾಗಲಿಲ್ಲ ಅದು ಈ ಎಲ್ಲವನ್ನೂ ಮೀರಿದ ಮಾನವೀಯತೆಗೇ ಪ್ರಾಶಸ್ತ್ಯ ಕೊಟ್ಟಿತು.

ಕನ್ನಡ ಸಣ್ಣಕತೆ-ಕಾದಂಬರಿಗಳು ಹೇಳುವ ದಲಿತ ಸಂವೇದನೆ ಇತ್ತೀಚಿನದು. ಮಲೆಗಳಲ್ಲಿ ಮದುಮಗಳು, ವೈಶಾಖಿಗಳನ್ನು ಹೆಸರಿಸುವ ಹೊತ್ತಿಗಾಗಲೆ ದಲಿತ ಸಂವೇದನೆಯ ದೊಡ್ಡ ಹೆಸರು 'ಒಡಲಾಳ' ನಮ್ಮ ಗಮನಕ್ಕೆ ಬರುತ್ತದೆ. ದಲಿತಪಂಥದ ಸರಿಯಾದ ಪ್ರಾತಿನಿಧ್ಯ ವಹಿಸುವ ಕೃತಿ ಒಡಲಾಳ. ದಲಿತನೊಬ್ಬ ತನ್ನೆಲ್ಲ ಅನಿಸಿಕೆ ಆಕ್ರೋಶಗಳನ್ನು ಹೇಳಿಕೊಂಡ ಪ್ರಸಂಗ ಅದೇ ಮೊದಲನೆಯದು. ನವೋದಯ, ನವ್ಯ ಕವಿತೆಗಳಲ್ಲಿ ದಲಿತ ಸಂವೇದನೆಯ ಬಗ್ಗೆ ನಡೆದ ಪ್ರಬಂಧ ಮಂಡನೆಯ ಒಟ್ಟಭಿಪ್ರಾಯದಲ್ಲಿ ದಲಿತ ಸಂವೇದನೆ ಕವಿತೆಗೆ ಅಷ್ಟಾಗಿ ಹತ್ತಿಕೊಳ್ಳಲಿಲ್ಲ ಎಂದಾಯಿತು. ಪ್ರಗತಿಶೀಲ-ನವೋದಯ ಹೀಗೆ ಮುಂದುವರಿದ ಕನ್ನಡ ಕಾವ್ಯಪರಂಪರೆ ನವ್ಯದ ಕಾಲಕ್ಕೆ, ಆ ಬಳಿಕ ಬಂಡಾಯ ಕವಿಗಳ ಕಾಲಕ್ಕೂ ಪಸರಿಸಿದರೂ ಸಿದ್ಧಲಿಂಗಯ್ಯನವರಂತಹ ದಲಿತ ಕವಿ ಬರುವವರೆಗೂ ನಮ್ಮ ದೃಷ್ಟಿಯ ದಲಿತ ಸಂವೇದನೆಯ ಸ್ಪಷ್ಟ ಎನ್ನಬಹುದಾದ, ಉದ್ದೇಶ ಪೂರ್ವಕವಾದ ಪ್ರಸ್ತಾಪ ಬರಲಿಲ್ಲ. ಇದನ್ನು ಕೊರತೆ

ಎನ್ನಬಹುದಾದರೂ ಪಂಥದ ದೃಷ್ಟಿಯಿಂದಲ್ಲ. ಕವಿ, ವಿಮರ್ಶಕ ಸುಬ್ರಾಯ ಚೊಕ್ಕಾಡಿ ಅವರು ಕಾವ್ಯದಲ್ಲಿ ದಲಿತ ಸಂವೇದನೆಯ ಸ್ಪಷ್ಟ ಸ್ಫೂರ್ತಿಯುತ ಪ್ರಸ್ತಾಪ ವಿಲ್ಲ ಎಂದು ಅಭಿಪ್ರಾಯ ಪಟ್ಟರು.

ಇಲ್ಲ; ಇಲ್ಲ

ನಿಜ; ಕನ್ನಡ ಸಾಹಿತ್ಯದಲ್ಲಿ ದಲಿತ ಸಂವೇದನೆಯ ಉದ್ದೇಶಿತ ಉಲ್ಲೇಖವಿಲ್ಲ. ಸ್ವತಃ ದಲಿತನೊಬ್ಬ ಜಡ್ಡುಹಿಡಿದ ಸಾಮಾಜಿಕ ವ್ಯವಸ್ಥೆ ಸಂಪ್ರದಾಯಗಳ ವಿರುದ್ಧ ಸಿಡಿದೆದ್ದು ಸಿಡಿಗುಂಡಿನಂತೆ ಆ ಸ್ಫೋಟಿಸಿದ ಸಾಹಿತ್ಯ ರಚನೆಯಾಗಲಿಲ್ಲ; ಬಸವಣ್ಣನೇ ಅತ್ಯಂತ ಕೆಳವರ್ಗದವರನ್ನು ಎಚ್ಚರಿಸಿ, ಜಾಗೃತಗೊಳಿಸಿ ಅವರಿಗೂ ಅಸ್ತಿತ್ವವಿದೆ ಯೆಂಬುದನ್ನು ತೋರಿಸಿಕೊಟ್ಟರೂ ಆ ಫಲವಾಗಿ ಹುಟ್ಟಿದ ವಚನ ಸಾಹಿತ್ಯದಲ್ಲಿ ವ್ಯವಸ್ಥೆಯ ವಿರುದ್ಧ ಕಟುಮಾತುಗಳ ವಿಮರ್ಶೆಯೋ ಆಕ್ರೋಶವೋ ಸಾಕಷ್ಟು ಪ್ರಭಾವಯುತವಾಗಿ ಅಭಿವ್ಯಕ್ತವಾಗಲಿಲ್ಲ.

ಕಾದಂಬರಿಗಳು ಈ ಅಪವಾದದಿಂದ ಮುಕ್ತವಾಗುತ್ತವೆ ಎನ್ನಬಹುದು. ಚೋಮನ ದುಡಿ, ಮಲೆಗಳಲ್ಲಿ ಮದುಮಗಳು ವೈಶಾಖ- ಇವುಗಳೇ ಮೊದಲಾದ ಕಾದಂಬರಿಗಳಲ್ಲಿ ನಾವು ಈ ಅಂಶಗಳನ್ನು ಸ್ಪಷ್ಟವಾಗಿ ಗುರುತಿಸಲು ಸಾಧ್ಯ. ವೈಶಾಖ-ಹಾಗೆ ನೋಡಿದರೆ ದಲಿತ ಸಂವೇದನೆಯ ಸಮರ್ಥ ಅಭಿವ್ಯಕ್ತಿ. ಅಲ್ಲಿ ಕಾಣುವ ಬ್ರಾಹ್ಮಣ ಸ್ತ್ರೀಯೊಬ್ಬಳಿಗೆ ದೇಹ ಧರ್ಮವನ್ನು ಮೀರಲಾಗದೆ ಹರಿಜನನೊಬ್ಬನೊಡನೆ ಸಂಪರ್ಕ ವುಂಟಾದಾಗ ಜನಿಸುವ ಮಾನವೀಯ ಪ್ರಶ್ನೆಗಳು, ಅದನ್ನು ಎದುರಿಸುವಲ್ಲಿ ಆಕೆ ತೋರುವ ದಿಟ್ಟತನ ಪ್ರಶಂಸನೀಯ. ಇನ್ನು ದೇವನೂರ ಮಹಾದೇವ ಅವರ ಹೆಸರು ಬಂದಾಗ ನಮ್ಮ ಹುಡುಕಾಟ ಕೊನೆಗೊಂಡ ಅನಿಸಿಕೆಯಾಗುತ್ತದೆ. ಅವರ ಇತ್ತೀಚೆಗಿನ 'ಕುಸುಮಬಾಲೆ', ಕತೆಗಳು-ಇವೆಲ್ಲ ನಾವು ಹುಡುಕಹೊರಟ ಎಲ್ಲ ವಿಕಾರಗಳನ್ನು ಅಭಿವ್ಯಕ್ತಿಸುವ ಕೃತಿಗಳು. ಇಡಿಯ ಸಂಕಿರಣದಲ್ಲಿ ಧ್ವನಿಸಿದ ಏಕಾಭಿಪ್ರಾಯ ದಲಿತ ಸಾಹಿತ್ಯ ಅವರ ಎಲ್ಲ ಅರ್ಥಗಳಲ್ಲಿ ಧ್ವನಿಸಿದ ಕೀರ್ತಿ-ಯಶಸ್ಸು ಲಭ್ಯವಾಗುವುದು ದೇವನೂರ ಮಹಾದೇವ ಅವರಿಗೆ.

ತಪ್ಪುದಾರಿ :

ಸಮಾರೋಪ ಸಮಾರಂಭದಲ್ಲಿ ಭಾಷಣವಿತ್ತ ಎಸ್. ಎಂ. ವೃಷಭೇಂದ್ರಸ್ವಾಮಿ ಅವರು ದಲಿತ ಸಾಹಿತ್ಯದ ವ್ಯಾಪ್ತಿ-ವಿಸ್ತಾರಗಳ ಕಡೆಗೆ ವಿವರ ನೀಡಿದರು. ಸಮಗ್ರ ಸಾಮಾಜಿಕ ಕ್ರಾಂತಿಯಾಗದೆ ಸಾಹಿತ್ಯವಾಗಲಿ, ಅದಕ್ಕೆ ಆ ದೃಷ್ಟಿಯಾಗಲಿ ಬರುವುದು ಸಾಧ್ಯವಿಲ್ಲ. 'ಬೂಸಾ' ಕುರಿತು ಸಾಕಷ್ಟು ವಿವಾದ ಎಬ್ಬಿಸಿದ ಬಸವಲಿಂಗಪ್ಪ

ಅವರಲ್ಲಿ ಸಾಮಾಜಿಕ ಕ್ರಾಂತಿಯಲ್ಲಿ ಎಲ್ಲಿಯವರೆಗೆ ಬಂದಿದ್ದೀರಿ ಎಂಬ ಪ್ರಶ್ನೆ ಹಾಕಿದಾಗ ಅವರು ಸಿಟ್ಟುಗೊಂಡು—ನಾವು ಸಮಾಧಾನ ಪಟ್ಟುಕೊಳ್ಳಬೇಕಾಯಿತು. ...ನಮಗೆ ನಮ್ಮದೇ ಆದಂತಹ ಬಂಡಾಯದ ಮನೋಭಾವಬೇಕು. ಬರಗೂರು ರಾಮಚಂದ್ರಪ್ಪನಂತಹ ವ್ಯಕ್ತಿಗಳು ಇದರ ಕಡೆಗೆ ಸಾಕಷ್ಟು ಗಮನ ಹರಿಸುತ್ತಿದ್ದಾರೆ. ದಲಿತದ, ಬಂಡಾಯದ ಹೆಸರೆತ್ತಿ ಆಡುವ ನಾವೆಲ್ಲ ಏನು ಬಂಡಾಯ ಮಾಡಲು ಸಾಧ್ಯ ? ನಮ್ಮಲ್ಲಿಯೇ ದಲಿತತನ ಉದ್ಭೂತವಾಗದೆ ಈ ಪ್ರಾಮಾಣಿಕತೆ ಬರಲು ಸಾಧ್ಯವಾಗುವುದಿಲ್ಲ. ಇದೀಗ ಅದಕ್ಕೆ ಪರಿಪಕ್ವವಾದ ಕಾಲ. ಸ್ವಾತಂತ್ರ್ಯ, ಪ್ರಜಾಪ್ರಭುತ್ವ ಎಲ್ಲವೂ ಇದ್ದು ಪರಿವರ್ತನೆಯ ಪೂರ್ವಕಾಲದಲ್ಲಿ ನಿಂತಿರುವ ಈ ಸಂದರ್ಭ ಸಮಗ್ರವಾದ ಕ್ರಾಂತಿಗೆ ಹೇಳಿಮಾಡಿಸಿದ್ದು.

ಸಾರ್ಥಕ :

ಸಾಹಿತ್ಯದಲ್ಲಿ ದಲಿತ ಸಂವೇದನೆಯ ಕುರಿತ ಸ್ಪಷ್ಟ ಹುಡುಕಾಟ ವಿಚಾರಣ ಸಂಕಿರಣದಲ್ಲಾಯಿತು. ಕನ್ನಡ ಸಾಹಿತ್ಯದ ವಿವಿಧ ಕಾಲದ ಕೃತಿಗಳಲ್ಲಿ ದಲಿತ ಸಾಹಿತ್ಯವೆಂಬ ಹಣೆಪಟ್ಟಿ ಹಾಕಿಕೊಳ್ಳುವ ಈ ಕಾಲದವರೆಗೆ ನಡೆಸಿದ ಹುಡುಕಾಟದಲ್ಲಿ ಕಸದಲ್ಲಿ ಚಿನ್ನ ಹುಡುಕುವವರಿಗೆ ಚಿನ್ನದ ಹೊರತಾಗಿ ಬೇರೇನೂ ಕಾಣದೆ ಹೋಗುವಂತೆ ದಲಿತ ಸಂವೇದನೆಯೇ ಕಂಡಿತು. ಹಾಗೆ ದೊರೆತ ಫಲ ಪ್ರಯೋಜನಕಾರಿಯಲ್ಲ. ನಮಗೆ ಬೇಕಾದದ್ದು ಪ್ರಾಮಾಣಿಕವಾದ ದಲಿತನ ದಲಿತತನದ ಅಭಿವ್ಯಕ್ತಿ.

ದೇವರು, ಧರ್ಮ ಎಂಬ ಮೌಢ್ಯಗಳನ್ನು ಒಂದು ನೆಲೆಗೆ ನಿಲ್ಲಿಸದೆ ಹೋದರೆ ನಾವು ಯಾವುದೇ ರೀತಿಯಲ್ಲೂ ಸಾಮಾಜಿಕ ಕ್ರಾಂತಿಯನ್ನು ಮಾಡಲು ಸಾಧ್ಯವಾಗದು. ಪ್ರಾಯಶಃ ಬಸವಣ್ಣನವರ ಕ್ರಾಂತಿಗೆ ವರ್ಗದ್ವೇಷದ ಕಾವು ಕಡಿಮೆಯಾಗುವುದಕ್ಕೆ ಕಾರಣ ದೇವರು, ಧರ್ಮದ ಕುರಿತಾಗಿ ಅವರಿಗಿದ್ದ ದೌರ್ಬಲ್ಯ ಕಾರಣವಿರಬಹುದೇನೊ! ನಮ್ಮ ಸಾಹಿತ್ಯ–ಸಾರಾಸಗಟಾಗಿ ಹೇಳಬಹುದು —ದಲಿತನನ್ನು ನಮ್ಮ ಕೇಂದ್ರಬಿಂದುವಾಗಿ ನಿಲ್ಲಿಸಿ ಅವನ ನೋವನ್ನು, ಕಷ್ಟಕೋಟಲೆಯನ್ನು ಚಿತ್ರಿಸಿದ್ದಿಲ್ಲ. ಪಂಪ ಕರ್ಣನ ಕುರಿತಾಗಿ ಹೇಳಿದ್ದರೆ ಅದು ಅಲಂಕಾರದ ದೃಷ್ಟಿಯಿಂದಲೆ ಹೊರತು ರೋಗಗ್ರಸ್ತವಾದ ಸಾಮಾಜಿಕ ಅವ್ಯವಸ್ಥೆಗೆದುರಾಗಿ ಆತ ಎತ್ತಿದ ಧ್ವನಿಯಲ್ಲ.

ಸಾಹಿತ್ಯದಿಂದ :

ಇಷ್ಟೂ ಪ್ರಸಂಗದ ಬಳಿಕ ನಮ್ಮ ತಲೆ ಕೆಡಿಸುವ ಪ್ರಶ್ನೆಯೆಂದರೆ ಸಾಹಿತ್ಯ ಯಾವ ರೀತಿಯಲ್ಲೂ ಸಾಮಾಜಿಕ ಕ್ರಾಂತಿಗೆ ಎಡೆಕೊಡುವುದಿಲ್ಲ ಎನ್ನುವುದೇ. ಅಥವಾ ವಿಚಾರ ಸಂಕಿರಣವೊಂದನ್ನು ನಡೆಸಿ ಸಂಶೋಧನಾತ್ಮಕವಾಗಿ ದಲಿತ ಬಿಂದುಗಳನ್ನು ಕಂಡು

ಕೊಂಡಾಗ ನಮ್ಮ ಬಾಂಧವರಾದ ದಲಿತರು ಹೇಳಿದ್ದ ಹಾಗೆಯೆ ? ಕೊಡಬಹುದಾದ ಸ್ಪಷ್ಟ ವಿವರವೆಂದರೆ ಇಂತಹ ಸಂಕಿರಣಗಳಲ್ಲಿ ದಲಿತನೊಬ್ಬ ಎಲ್ಲೂ ಭಾಗವಹಿಸುವ ಸಂದರ್ಭ ಬರುವುದಿಲ್ಲ. ದೇವನೂರ ಮಹಾದೇವ ಈ ಸಂಕಿರಣಕ್ಕೆ ಬಂದಿರಲಿಲ್ಲ. ಅನಾನುಕೂಲತೆಯಿಂದ ತಾತ್ವಿಕವಾಗಿ ನಾವೆಲ್ಲ ಎಷ್ಟೇ ಬಡಕೊಂಡರೂ ಅಷ್ಟೆ; ಪ್ರಾಯೋಗಿಕ ಫಲವಿಲ್ಲ. ಸಹಸ್ರಾರು ವರ್ಷಗಳಿಂದ ಕೊಳೆತು ನಾರುತ್ತಿರುವ ನಮ್ಮ ಸಮಾಜಕ್ಕೆ ಕಾಯಕಲ್ಪವಾಗಬೇಕಾದರೆ ಮಾಡಬೇಕಾದದ್ದಾದರೂ ಏನು ? ಕಾಲವೆ ? ಬಸವಣ್ಣನ ಬಳಿಕದ ಎಂಟು ಶತಮಾನಗಳು ಕಳೆಯುತ್ತಾ ಬಂದರೂ ಈ 'ಕಾಲ' ಬರಲಿಲ್ಲವೆ ? ಪ್ರಾಯಶಃ ಈ ಕುರಿತು ಆಡುವ. ಬರೆಯುವ. ಚಿಂತಿಸುವ ನಮ್ಮೆಲ್ಲರ ಮನೋಮಂದಿರದಲ್ಲಿ ಜಡ್ಡುಗಟ್ಟಿದ ಪೂರ್ವ ನಿರ್ಧರಿತ ಮನೋಭಾವ ಕ್ರಾಂತಿ ಪೂರ್ಣವಾಗಿ ಪರಿವರ್ತನೆಯಾಗದೆ ಸಾಧ್ಯವಿಲ್ಲ.

ಭಗವದ್ಗೀತೆ

ಅಗೋ...
ಆರಂಭವಾಯಿತು ಭಾರತದ ಯುದ್ಧ
ಹಳಿ ತಪ್ಪದೆ ಸಾಗುತ್ತಾ ಬಂದ
ರೈಲು
ಜಕ್ಕನೆ ನಿಂತು ಬಿಟ್ಟಿದೆ.
ಕ್ರಿಯೆಯಲ್ಲಿ ಮಾತ್ರ, ತೊಡಗ ಬೇಕಾದ ನರನಿಗೆ
ಈಗ
ಆಲೋಚನಾ ಶಕ್ತಿಯೊಂದು ಉದ್ಭವವಾಗಿ ಬಿಟ್ಟಿದೆ!
ಸಂಬಂಧಗಳ ಜಂಜಾಟ
ಉಚಿತಾನುಚಿತಗಳ ಪರಿಜ್ಞಾನ
ಅಂತರಂಗದಲ್ಲಿನ ತುಡಿತ
ಪ್ರಶ್ನಿಸುವ ಸ್ಥಿತಿಯೊಂದರ ಉಗಮ
ಪಾಪ
ಹೀಗಾಗಿರ ಬೇಡ ಸೂತ್ರದಾರಿ ಕೃಷ್ಣ ಪರಮಾತ್ಮನಿಗೆ
ತೊಗಲು ಗೊಂಬೆಗಳಿಗೆ ಸ್ವತಂತ್ರ ಅಸ್ತಿತ್ವ ಬೀಮ
ಒಮ್ಮೆಗೆ
ಜಾಡಿಸಿ ಒದ್ದ ಅನುಭವ
ಅನಿರೀಕ್ಷಿತ ವರ್ತನೆ
ಪರಿಸ್ಥಿತಿ
ಇದಕ್ಕೆ ತಕ್ಕಮದ್ದು ಒಲ್ಲದ
(ಅಷ್ಟಿಲ್ಲದೆ ಸೂತ್ರದಾರನೆನ್ನುತ್ತಾರೆಯೇ)
ಬೀಡೆದ್ದ ಮನಕ್ಕೆ
ವಶೀಕರಣದ ಪ್ರಯೋಗ
ತಳದಿಂದ್ದೆದ ವೀರ್ಯಗಳೆಲ್ಲವು
ಸ್ವಸ್ಥಾನಕ್ಕೆ
ವಾಪಸ್ಸಾದವು

ಡಾ. ಬಸವರಾಜ ಸಬರದ

ವಚನ ಚಳವಳಿ—ಒಂದು ಒಳನೋಟ

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ವಚನ ಸಾಹಿತ್ಯಕ್ಕೊಂದು ವಿಶಿಷ್ಟಸ್ಥಾನವಿದೆ. ದಲಿತರು ಶೋಷಿತರು-ಕೆಳವರ್ಗದವರು ಮೊದಲಬಾರಿಗೆ ಸಾಹಿತ್ಯದ ಮುಖಾಂತರ ಮಾತನಾಡಿದ್ದು ಇದೇ ಸಂದರ್ಭದಲ್ಲಿ ಅರಮನೆಗಳಿಂದ ಹೊರಬಂದು, ರಾಜಾಶ್ರಯದಿಂದ ದೂರವಾಗಿ, ಪಂಡಿತರ ಕಪಿಮುಷ್ಠಿಯಿಂದ ಪಾರಾಗಿ ಬಂದ ಕನ್ನಡ ಸಾಹಿತ್ಯ ಸಹಜವಾಗಿ ಉಸಿರಾಡಿದ್ದು. ನೆಲದ ಮಾತಿನಲ್ಲಿ ನಳ-ನಳಿಸಿದ್ದು ವಚನಕಾರರಲ್ಲಿ ಮಾತ್ರ. ಜಾತಿ-ಮತ-ಪಂಥಗಳನ್ನು ಬಿಟ್ಟು; ದೇಶ-ಭಾಷೆ-ವಯಸ್ಸುಗಳ ಅಂತರವನ್ನು ಮರೆತು; ಮೇಲು-ಕೀಳೆಂಬ ತಾರತಮ್ಯವನಳಿದು, ಸಾಮಾನ್ಯ ಜನತೆ ಮೊದಲಬಾರಿಗೆ ತಮ್ಮನ್ನು ಸಾಹಿತ್ಯದಲ್ಲಿ ತೊಡಗಿಸಿಕೊಂಡದ್ದು, ಸಾರ್ವಕಾಲಿಕ ಮೌಲ್ಯದ ಸಾಹಿತ್ಯವನ್ನು ಕೊಟ್ಟಿದ್ದು ಗಮನಿಸಬೇಕಾದ ಸಂಗತಿಗಳು.

ರಾಜಾಶ್ರಯದಲ್ಲಿದ್ದ ಹಿಂದಿನ ಕವಿಗಳು ರಾಜರನ್ನೇ ಹಾಡಿ ಹೊಗಳುತ್ತಿದ್ದ ಮೊದಲಿನ ಸಾಹಿತ್ಯಕ್ಕಿಂತ ಪೂರ್ಣ ಭಿನ್ನವಾಗಿ ಸಾಮಾನ್ಯನ ನೋವು ನಲಿವುಗಳಿಗೆ ನಾಲಿಗೆಯಾದದ್ದು; ದುಡಿವವರ್ಗದ ಜನರ ಮೊದಲ ದನಿಯಾಗಿ ಮೂಡಿದ್ದು ವಚನ ಸಾಹಿತ್ಯದ ಜನಪದ ನಿಲುವನ್ನು ಸ್ಪಷ್ಟಪಡಿಸುತ್ತದೆ. ವಚನಕಾರರು ಸಾಹಿತ್ಯದ ವಸ್ತುವನ್ನು ಬದಲಾಯಿಸುವದರ ಮೂಲಕ ಅದರ 'ಪ್ರಕಾರ'ವನ್ನೂ ಬದಲಾಯಿಸಿ 'ವಚನ'ದಂತಹ ಹೊಸದಾದ-ವಿಶಿಷ್ಟವಾದ ಪ್ರಕಾರವನ್ನು ಪರಿಚಯಿಸುತ್ತಾ ಸಾಹಿತ್ಯಚರಿತ್ರೆಗೆ ಹೊಸ ದಿಕ್ಕು ಮೂಡಿಸಿದರು.

ವಚನಕಾರರದು ಪ್ರಮುಖವಾಗಿ ಧಾರ್ಮಿಕ ಆಂದೋಲನ. ಧರ್ಮದ ಮುಖಾಂತರ ಮಾನವೀಯತೆಯನ್ನು ಬಿತ್ತುವದು ಅವರ ಪ್ರಮುಖ ಉದ್ದೇಶಗಳಲ್ಲೊಂದು. ಅಂದಿನ ಹದಗೆಟ್ಟ ಧಾರ್ಮಿಕ-ಸ್ಥಿತಿಯನ್ನು ಸುಧಾರಿಸಲು ವಚನಕಾರರ ಪ್ರವೇಶವಾಯಿತೆಂಬುದನ್ನು ಮರೆಯಬಾರದು. ಆದುದರಿಂದ ವಚನಕಾರರಿಗೆ ಧರ್ಮ

ಮೊದಲನೆಯ ಹಾಗೂ ಪ್ರಮುಖ ಅಂಶವಾಗುವದರೊಂದಿಗೆ ಸಾಹಿತ್ಯ ಮತ್ತು ಸಮಾಜ ಎರಡನೇ ಅಂಶಗಳಾದವು. ಆದುದರಿಂದ ವಚನಕಾರರ ಸಾಧನೆ-ಹೋರಾಟ-ಕೊಡುಗೆ ಇವುಗಳನ್ನು ಅವರು ಬದುಕಿದ್ದ ಪರಿಸರದ ಹಿನ್ನೆಲೆಯಲ್ಲೇ ಅರ್ಥೈಸುವವರ ಮೂಲಕ ವಚನ ಚಳವಳಿಯ ಪ್ರಾಮುಖ್ಯತೆಯನ್ನು ಅರಿಯಬೇಕಾಗುತ್ತದೆ. ಇವತ್ತಿನ ಸಂದರ್ಭದಲ್ಲಿ ವಚನ ಸಾಹಿತ್ಯದ ಪ್ರಸ್ತುತತೆಯ ಬಗೆಗೆ ವಿಚಾರಿಸುವಾಗ ನಾಡಿನ ಎಲ್ಲಾ ಹೋರಾಟಗಳನ್ನೂ ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ.

ಕನ್ನಡ ಸಾಹಿತ್ಯದಲ್ಲಿ ವಚನ ಸಾಹಿತ್ಯಕ್ಕೆ ಸಿಕ್ಕ ಪ್ರಾಶಸ್ತ್ಯ. ಅದಕ್ಕಿರುವ ಹರವು ವಿಶಾಲವಾದುದು. ಇಡೀ ಸಾಹಿತ್ಯ ಚರಿತ್ರೆಯಲ್ಲಿಯೇ ಅತ್ಯಂತ ಸಮೃದ್ಧಿಯಿಂದ ವಿಜೃಂಭಿಸಿದ ಸಾಹಿತ್ಯ ಚಳುವಳಿಯಿದು. ವಚನ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಹಲವಾರು ಗ್ರಂಥಗಳು ಪ್ರಕಟವಾಗಿವೆ. ಕೆಲವರು ವಚನ ಸಾಹಿತ್ಯವನ್ನು ವರ್ಣನಾತ್ಮಕ ಶೈಲಿಯಲ್ಲಿ ಹಾಡಿ ಹೊಗಳಿ ವಚನಕಾರರನ್ನು ಪವಾಡ ಪುರುಷರನ್ನಾಗಿ ಮಾಡಿದರೆ; ಇನ್ನು ಕೆಲವರು ವೈಚಾರಿಕತೆಯ ಹೆಸರಿನಲ್ಲಿ ಚರಿತ್ರೆಗೆ ಸಂಬಂಧಿಸಿದ ವಿಷಯಗಳನ್ನು ಇವತ್ತಿನ ಸಂದರ್ಭದಲ್ಲಿ ನೋಡುವದರ ಮೂಲಕ ವಚನಕಾರರ ಇಡೀ ಹೋರಾಟವನ್ನೇ ಸಾರಾಸಗಟಾಗಿ ಅಲ್ಲಗಳೆದಿದ್ದಾರೆ. ವಿಮರ್ಶೆಯ ಆರೋಗ್ಯಕರ ಬೆಳವಣಿಗೆಯ ದೃಷ್ಟಿಯಿಂದ ಇವೆರಡೂ ಗುಂಪುಗಳು ತುಂಬಾ ಅಪಾಯಕಾರಿಯಾದವುಗಳು ಇಬ್ಬರಿಬ್ಬರಲ್ಲೂ ವಾಸ್ತವತೆ ತಪ್ಪಿಸಿಕೊಂಡದ್ದೆ ಹೆಚ್ಚು.

ವಚನಕಾರರ ಚಾರಿತ್ರಿಕ ಸಂಗತಿಗಳಿಗೆ ಬೆಳಕು ಚೆಲ್ಲಬಹುದಾಗಿದ್ದ ಹರಿಹರನಂತಹ ಕವಿಗಳು ತಮ್ಮ ಭಕ್ತಿಯ ಅಮಲಿನಲ್ಲಿ ವಚನಕಾರರನ್ನು ತಪ್ಪಾಗಿ ಚಿತ್ರಿಸುತ್ತಾ, ಪವಾಡ ಕತೆಗಳನ್ನು ಹೆಣೆಯುತ್ತಾ, ಅವರನ್ನು ಪುಷ್ಪಕ ವಿಮಾನದಲ್ಲಿ ಹಾರಾಡಿಸುತ್ತಾ ಅವರ ಮೂಲ ವ್ಯಕ್ತಿತ್ವಕ್ಕೆ ಅಪಚಾರ ಮಾಡಿದರೆ; ನಂತರ ಬಂದವರೂ ಕೂಡ ಇದೇ ಹಾದಿಯಲ್ಲಿ ಮುಂದೆ ಹೋಗಿ ವಚನಕಾರರು ಮಾಡಿದ ಕ್ರಾಂತಿ ಇಡೀ ಜಗತ್ತಿನಲ್ಲಿಯೇ ನಡೆದಿಲ್ಲವೆಂದು ಬಣ್ಣಿಸುತ್ತಾ ತೃಪ್ತಿಪಟ್ಟುಕೊಂಡರು. ಜಗದ್ಗುರುಗಳು-ಸ್ವಾಮಿಗಳು ಈ ಮುಂತಾದ ಕಾವಿ ಜನ ವಚನಕಾರರ ಸಾಮಾಜಿಕ ಹೋರಾಟವನ್ನೇ ಕಡೆಗಣಿಸಿ ವಚನ ಸಾಹಿತ್ಯದಲ್ಲಿನ ಶಾಸ್ತ್ರಗುಣವೊಂದನ್ನೇ ಪ್ರಚಾರ ಮಾಡುತ್ತಾ ಅಷ್ಟಾವರಣ-ಷಟ್‌ಸ್ಥಲಗಳ ಗುಂಗಿನಲ್ಲೇ ಐಕ್ಯರಾದರೆ, ಕೆಲವರು ಮಾರ್ಕ್ಸ್‌ವಿಚಾರಧಾರೆಯ ಜನ ಎಂಟು ನೂರು ವರ್ಷಗಳ ಹಿಂದಿನ ವಚನಕಾರರ ಹೋರಾಟವನ್ನೇ ಅಲ್ಲಗಳೆಯುತ್ತಾರೆ.

ವಚನಕಾರರು ತಮ್ಮ ಯಾವ ವಚನದಲ್ಲಿಯೂ ತಾವು ಪವಾಡ ಮಾಡಿರುವ ಬಗೆಗೆ ಹೇಳಿಕೊಂಡಿಲ್ಲ, ಇಂದಿನ ವಿಜ್ಞಾನಯುಗದಲ್ಲಿದ್ದುಕೊಂಡು, ವಚನಕಾರರೇ ಉಲ್ಲೇಖ

ಸದ: ಯಾರೋ ಬರೆದ ಸಂತ ಕತೆಗಳನ್ನು ನಂಬಿ ವಚನಕಾರರನ್ನು ಪವಾಡ ಪುರುಷರ ನ್ನಾಗಿ ಚಿತ್ರಿಸುವದು ವಚನಕಾರರಿಗೆ ಬಗೆದ ದ್ರೋಹವಾಗುತ್ತದೆ. ಕೆಲವರು ಇಂತಹ ಪವಾಡಕತೆಗಳನ್ನೇ ಬಣ್ಣಿಸಿ ಪಿ. ಎಚ್. ಡಿ. ಕೂಡಾ ಗಿಟ್ಟಿಸಿಕೊಂಡಿದ್ದಾರೆ. ಹದಿ ಮೂರನೇ ಶತಮಾನದಲ್ಲಿಯ ಹರಿಹರ ವಚನಕಾರರನ್ನು ದೇವರನ್ನಾಗಿ ಮಾಡುವ ಭಕ್ತಿಯ ಆತುರತೆಯಲ್ಲಿ ಅವರನ್ನು ಕೈಲಾಸದಿಂದ ಕರೆದುಕೊಂಡು ಬಂದು ಮತ್ತೆ ಅಲ್ಲಿಗೇ ಕಳಿಸಿಕೊಟ್ಟ.

ಪೂಜಾವಿಧಾನವನ್ನೇ ಸರಳಗೊಳಿಸಿದ ಬಸವಣ್ಣ ಮುಂತಾದ ವಚನಕಾರರ ವ್ಯಕ್ತಿತ್ವ ವನ್ನು ಪ್ರಾಮಾಣಿಕವಾಗಿ ಚಿತ್ರಿಸುವದನ್ನು ಬಿಟ್ಟು "ದುಂಬಿ ಕುಳಿತು ಹೂಗಳು ಎಂಜ ಲಾಗುತ್ತವೆಂದು ಬಸವಣ್ಣ ನಸುಕಿನಲ್ಲೇ ಎದ್ದು ಹೂಗಳನ್ನು ಹರಿದು ತಂದು ಕೂಡಲ ಸಂಗನನ್ನು ಪೂಜಿಸುತ್ತಿದ್ದ" ಎಂದು ಹೇಳಿ ವಚನಕಾರರ ವ್ಯಕ್ತಿತ್ವಕ್ಕೆ ಹರಿಹರ ಮಸಿ ಬಳಿದ. ಮಡಿ-ಮೈಲಿಗೆಗಳನ್ನು ಕಿತ್ತೊಗೆದ ವಚನಕಾರರ ಸರಳಜೀವನ ಹೇಳುವದನ್ನು ಬಿಟ್ಟು ಅವರನ್ನು ಗೊಡ್ಡು ವೈದಿಕರಂತೆ ಚಿತ್ರಿಸಿದ. ಪವಾಡ ಕತೆಗಳ ಸರಮಾಲೆಯನ್ನೇ ತನ್ನ ರಗಳೆಗಳಲ್ಲಿ ಪೋಣಿಸಿ ವಚನಕಾರರ ಮೂಲ ಹೋರಾಟವನ್ನೇ ಸಮಾಧಿ ಗೊಳಿಸಿದ.

ಹಿಂದಿನಿಂದ ನಂಬಿಕೊಂಡು ಬಂದ ಪವಾಡ ಕತೆಗಳನ್ನು ಭಯಂಕರವಾಗಿ ವರ್ಣಿಸಿ ಭಾವಾವೇಶದಿಂದ ವಚನಕಾರರನ್ನು ಅತಿಮಾನುಷರನ್ನಾಗಿ ಮಾಡುವ ಬದಲು ವಾಸ್ತ ವತೆಯಿಂದ ನೋಡಿದರೆ ಅಂತಲ್ಲಿಯೂ ಸರಳತೆ ತರಲು ಸಾಧ್ಯ. ಉದಾಹರಣೆಗೆ 'ಬಸವಣ್ಣ ಮೂರು ಸಾವಿರ ಹರಿಜನರನ್ನು ಬದುಕಿಸಿದ' ಎಂಬ ಪವಾಡ ಕತೆ ಬರು ತ್ತದೆ. ಇಷ್ಟೆಲ್ಲಾ ಹರಿಜನರನ್ನು ಬದುಕಿಸಿದ ಬಸವಣ್ಣ ಮತ್ತೆ ತಾನೇಕೆ ಸತ್ತ ? ಈ ಪ್ರಶ್ನೆ ಹುಟ್ಟುವದು ಸಹಜ. ಆದ್ದರಿಂದ ಇಲ್ಲಿ 'ಬದುಕಿಸಿದ' ಎನ್ನುವ ಪದವನ್ನು ಬೇರೆ ರೀತಿ ಅರ್ಥೈಸಬೇಕು. ಧಾರ್ಮಿಕ-ಸಾಮಾಜಿಕ-ಆರ್ಥಿಕವಾಗಿ ಸತ್ತುಹೋಗಿದ್ದ, ಎಲ್ಲಾ ಸವಲತ್ತುಗಳಿಂದಲೂ ವಂಚಿತರಾಗಿದ್ದ ಹರಿಜನರ ಬದುಕು ಇದ್ದೂ ಸತ್ತಂ ತೆಯೇ ಇತ್ತು. ಬಸವಣ್ಣ ತನ್ನ ಸಾಮೂಹಿಕ ಚಳುವಳಿಯಲ್ಲಿ ಸಮಾನತೆ ತರುವದರ ಮೂಲಕ ಸತ್ತಂತಿದ್ದ ಹರಿಜನರಿಗೆ ಹೊಸ ಬದುಕು ಕೊಟ್ಟ. ಸ್ಪರ್ಶದ ಸುಖಕೊಟ್ಟ- ದುಡಿಮೆಯ ಅವಕಾಶ ಕೊಟ್ಟ. 'ಅಪ್ಪನು ನಮ್ಮ ಮಾದಾರ ಚನ್ನಯ್ಯ-ಬೊಪ್ಪನು ನಮ್ಮ ಡೋಹರ ಕಕ್ಕಯ್ಯ' ಎಂದು ಹೇಳುವದರ ಮೂಲಕ ಶೋಷಿತ ವರ್ಗಕ್ಕೆ ಪ್ರಥಮಸ್ಥಾನ ಕಲ್ಪಿಸಿಕೊಟ್ಟ. ಶತಮಾನಗಳಿಂದ ಮೂಕರಾಗಿದ್ದ ದಲಿತರಿಗೆ ದನಿಕೊಟ್ಟ ಆದ್ದರಿಂದ "ಬದುಕಿಸಿದ" ಎಂಬ ಪದದ ಅರ್ಥ "ಹೊಸ ಬದುಕು ಕಲ್ಪಿಸುವದರ ಮೂಲಕ ಬದುಕಿಸಿದ" ಎಂದು ತಿಳಿಯಬೇಕು. "ಜೀವ ಹೋಗಿ ಸತ್ತವರಿಗೆ ಜೀವ ಕೊಟ್ಟು ಬದುಕಿಸಿದ" ಎಂದು ಅರ್ಥ ಮಾಡಬಾರದು. ಆ ಸಂದರ್ಭದಲ್ಲಿ ಹುಟ್ಟಿ

ಕೊಂಡ ಅನೇಕ ದಂತ ಕತೆಗಳು ಇಂದು ಪವಾಡಕತೆಗಳಾಗಿ ವಚನ ಸಾಹಿತ್ಯಕ್ಕೆ ಸಂಬಂಧಿಸಿದ ಗ್ರಂಥಗಳಲ್ಲಿ ಕಾಣುತ್ತಿವೆ. ಚಾರಿತ್ರಿಕ ವ್ಯಕ್ತಿಗಳಾದ ವಚನಕಾರರನ್ನು ಪೌರಾಣಿಕತೆಯ ಹಿನ್ನೆಲೆಯಲ್ಲಿ ನೋಡಿದ ಅಪಾಯವಿದು.

ಇವತ್ತಿನ ಸಂದರ್ಭದಲ್ಲಿ 'ಕ್ರಾಂತಿ' ಎಂದು ಹೇಳುವ ಪದಕ್ಕೆ ವಿಶಿಷ್ಟವಾದ ಅರ್ಥವಿದೆ. ಮಾರ್ಕ್ಸ್ ವಿಚಾರಧಾರೆಯ ಹಿನ್ನೆಲೆಯಲ್ಲಿ ನೋಡಿದಾಗ "ಆಮೂಲಾಗ್ರ ಬದಲಾವಣೆಯೇ ಕ್ರಾಂತಿ" ಎಂಬರ್ಥವನ್ನು ಕೊಡುತ್ತದೆ. ಹಳೆಯ ವ್ಯವಸ್ಥೆಯೊಂದು ಹೋಗಿ ಹೊಸ ವ್ಯವಸ್ಥೆ ಹುಟ್ಟಿಕೊಳ್ಳುವುದು ಕ್ರಾಂತಿಯ ಸಾಧನೆ. ಆರ್ಥಿಕ ಸಮಾನತೆ ಬಂದಾಗ ಸಾಮಾಜಿಕ ಸಮಾನತೆ ಸಹಜವಾಗಿಯೇ ಬರುತ್ತದೆ. ಅದ್ದರಿಂದ ನಿಜವಾದ ಕ್ರಾಂತಿ ಆರ್ಥಿಕ ಸಮಾನತೆಯ ಉದ್ದೇಶವನ್ನಿಟ್ಟುಕೊಂಡು ಸಾಮಾಜಿಕ ಕ್ಷೇತ್ರದಿಂದ ಹೋರಾಟ ಪ್ರಾರಂಭಿಸುತ್ತದೆ.

ವಚನಕಾರರ ಹೋರಾಟವನ್ನು ಕೆಲವರು 'ಕ್ರಾಂತಿ' ಎಂದು ಕರೆದಿದ್ದಾರೆ. ವಚನಕಾರರು ಹೋರಾಟ ಪ್ರಾರಂಭಿಸಿದ್ದು ಧಾರ್ಮಿಕ ಕ್ಷೇತ್ರದಿಂದ. ಅವರಿಗೆ ಪ್ರಮುಖವಾದದ್ದು ಧರ್ಮ. ಅವರು ಮೊದಲು ಶರಣರು—ನಂತರ ವಚನಕಾರರು. ಧರ್ಮ ಪ್ರಚಾರಕ್ಕಾಗಿ ಅವರು ಸಾಹಿತ್ಯವನ್ನು ಬಳಸಿಕೊಂಡರೇ ಹೊರತು: ಸಾಹಿತ್ಯಪ್ರಚಾರಕ್ಕಾಗಿ ಧರ್ಮದ ಆಸರೆ ಪಡೆಯಲಿಲ್ಲ. ಕ್ರಾಂತಿಯೆಂದರೆ ಶೋಷಣೆಗೆ ಮೂಲವಾದ ಎಲ್ಲ ಶಕ್ತಿಗಳ ದಮನ. ಧರ್ಮವೇ ಶೋಷಣೆಯ ಮೂಲವಾಗಿದ್ದಾಗ ಧರ್ಮದಿಂದಲೇ ಕ್ರಾಂತಿ ಮಾಡುವುದು ಕೇವಲ ಭ್ರಮೆಯಾಗುತ್ತದೆ. 'ಧಾರ್ಮಿಕ ಕ್ರಾಂತಿ' ಎಂಬ ಮಾತೇ ಅರ್ಥಹೀನವಾಗುತ್ತದೆ. 'ಧರ್ಮ' ಮತ್ತು 'ಕ್ರಾಂತಿ' ಎಂದೂ ಒಂದಾಕಡೆ ಕೂಡುವುದಿಲ್ಲ. ಹೀಗಾಗಿ ವಚನಕಾರರದು ಪ್ರಮುಖವಾಗಿ ಒಂದು ಮಹತ್ವಪೂರ್ಣ ಚಳವಳಿಯೇ ಹೊರತು 'ಕ್ರಾಂತಿ'ಯಲ್ಲ.

ಧಾರ್ಮಿಕ—ಸಾಮಾಜಿಕ—ಆರ್ಥಿಕ—ಸಾಂಸ್ಕೃತಿಕ ಕ್ಷೇತ್ರಗಳೆಲ್ಲ ರಾಜಕೀಯ ಕ್ಷೇತ್ರದ ಮುಷ್ಟಿಯಲ್ಲಿ ಇರುವುದರಿಂದ ರಾಜಕೀಯ ಆರ್ಥಿಕ ಬದಲಾವಣೆಯೇ ಸಮಗ್ರ ಬದಲಾವಣೆಯಾಗುತ್ತದೆ. ರಾಜಕೀಯ ಆರ್ಥಿಕ ಕ್ಷೇತ್ರಗಳಲ್ಲಿ ಬದಲಾವಣೆ ತರುವುದು ಶರಣರ ಪ್ರಥಮ ಉದ್ದೇಶವಾಗಿರಲಿಲ್ಲ. ಇವತ್ತಿನ ಸಂದರ್ಭದಲ್ಲಿ ನಿಂತು 'ಅವರು ಹಾಗೇಕೆ ಮಾಡಲಿಲ್ಲ ?' ಎಂದು ಪ್ರಶ್ನಿಸುವುದೂ ಸರಿಯಲ್ಲ. ಒಟ್ಟಿನಲ್ಲಿ ವಚನಕಾರರು ನಿಮ್ನ ಜಾತಿ-ಮಹಿಳೆಯರಿಗಾಗಿ ಹೋರಾಟ ಮಾಡಿದ್ದು ಬಹಳ ಮುಖ್ಯವಾಗುತ್ತದೆ. ನಮ್ಮ ದೇಶದಲ್ಲಿ ವಚನಕಾರರ ಚಳವಳಿಗೆ ವಿಶಿಷ್ಟಸ್ಥಾನವಿದೆ. ಕನ್ನಡ ಸಾಹಿತ್ಯಕ್ಕೆ ಈ ಚಳವಳಿ ಒಂದು ಹೊಸ ಆಯಾಮವನ್ನು ತಂದುಕೊಟ್ಟಿದೆ. ಅದಕ್ಕಾಗಿ ವಚನಕಾರರು ಇಂದಿಗೂ ಪ್ರಮುಖರಾಗುತ್ತಾರೆ, ಅಧ್ಯಯನ ಯೋಗ್ಯರಾಗುತ್ತಾರೆ.

ವಚನಕಾರರು ಧಾರ್ಮಿಕ ಪುರುಷರಾಗಿದ್ದರೂ ಸಾಮಾಜಿಕವಾಗಿಯೂ ಸ್ಪಂದಿಸಿದವರು. ಬಾಯಿಮುಚ್ಚಿಕೊಂಡು ಬದುಕಿದ್ದ ಜನತೆಯಲ್ಲಿ ಜಾಗ್ರತೆಯನ್ನುಂಟು ಮಾಡುವುದರ ಮೂಲಕ ಹೊಸ ಚೇತನವನ್ನುಂಟು ಮಾಡಿದರು. ಸಾಮಾಜಿಕ ಸಮಸ್ಯೆಗಳಲ್ಲಿ ಕೈಹಾಕುತ್ತಾ ಜಾತಿಭೇದವನ್ನು ಹೊಡೆದೋಡಿಸಲು ಪ್ರಯತ್ನಿಸಿದರು. ಆದರೆ ಈ ಎಲ್ಲಾ ಸಾಮಾಜಿಕ ಸಮಸ್ಯೆಗಳನ್ನು ಇವರು 'ಧಾರ್ಮಿಕ'ದ ಮೂಲಕ ನೋಡಿದರು. ಆದಕ್ಕಾಗಿಯೇ "ಉಳ್ಳವರು ಶಿವಾಲಯ ಮಾಡುವರು. ನಾನೇನು ಮಾಡಲಿ ಬಡವನಯ್ಯಾ" ಎಂಬ ಕೀಳರಿಮೆಯ ಭಾವ ತಾಳಿ ಉಳ್ಳವರ–ಬಡವರ ಅಂತರವನ್ನು ಕಡಿಮೆ ಮಾಡುವತ್ತ ದೃಷ್ಟಿಹಾಯಿಸದೆ; ಉಳ್ಳವರನ್ನು ಎದುರು ಹಾಕಿಕೊಳ್ಳದೆ, ಇದ್ದ ಪರಿಸರದಲ್ಲೇ ಸುಧಾರಣೆ ತರಲು ಪ್ರಯತ್ನಿಸಿದರು. ಅಂತಹ ಸುಧಾರಣೆ ಕಾಣದಿದ್ದಾಗ ತಮ್ಮ ದೇಹವನ್ನೇ ದೇಗುಲವನ್ನಾಗಿ ಮಾಡಿಕೊಂಡು ತೃಪ್ತಿಪಟ್ಟುಕೊಂಡರು. ಉಳ್ಳವರ ವಿರುದ್ಧ ಏಳಬೇಕಾದ ರೊಚ್ಚು ಧಾರ್ಮಿಕ ಚೌಕಟ್ಟಿನೊಳಗಡೆ ಸಿಕ್ಕು ಸಣ್ಣಾಗಿ: ಸಿಟ್ಟು ಸಿರಾಗಿ–ನೋವಾಗಿ ಪರಿಣಮಿಸಿತು. ಕೊನೆಗೆ ಕೂಡಲಸಂಗನೊ, ಗುಹೇಶ್ವರನೊ, ಚನ್ನಮಲ್ಲಿಕಾರ್ಜುನನೊ ಇನ್ನಾವುದೊ ತಮ್ಮ ಇಷ್ಟದೈವದ ಮೇಲೆ ಹಾಕಿ ಕೈಮುಗಿದು ಕುಳಿತರು.

ವರ್ಗ ಹೋರಾಟ ಕಿಡಿಗೊಳ್ಳಬೇಕಾದ ಸಂದರ್ಭದಲ್ಲಿ ಅವರಿಗೆ ತೊಡಕಾದದ್ದು, ಅವರೇ ನಿರ್ಮಿಸಿಕೊಂಡ ಭವಿ–ಭಕ್ತ ಎಂಬ ಗುಂಪುಗಳು. ವಚನಕಾರರು ಎಲ್ಲಾ ಜಾತಿಗಳನ್ನು ಕಿತ್ತೊಗೆದರು. ಭವಿ–ಭಕ್ತ ಎಂಬ ಹೊಸ ಗುಂಪುಗಳನ್ನು ಸೃಷ್ಟಿಸಿದರು. 'ಭವಿ' ಎಂದ ಕೂಡಲೇ ವಚನಕಾರರಿಗೆ ಎಷ್ಟು ಸಿಟ್ಟು ಬರುತ್ತದೆಯೋ ಅದೇ 'ಉಳ್ಳವರು'—ಶ್ರೀಮಂತರ ಮೇಲೆ ಎಂದಿಗೂ ಬರುವದಿಲ್ಲ. ಭಕ್ತನಿಗೆ ಬೆಲೆಕೊಟ್ಟು ಆತನಿಗೆ ತಮ್ಮಲ್ಲಿ ಪ್ರಮುಖಸ್ಥಾನ ಕೊಟ್ಟಂತೆ, ಭಕ್ತನಲ್ಲದ ಬಡವನನ್ನು ಇವರು ಮರೆಯುತ್ತಾರೆ. ಭಕ್ತಿ ಇಲ್ಲದ ಎಲ್ಲರನ್ನೂ ತಿರಸ್ಕರಿಸುತ್ತಾರೆ ನಿಜವಾಗಿ ಶ್ರೀಮಂತ–ಬಡವರ ನಡುವೆ ನಡೆಯಬೇಕಾಗಿದ್ದ ಸಂಘರ್ಷ ಭಕ್ತ–ಭವಿಗಳ ಗುಂಪಿನಲ್ಲಿ ಕರಗಿ ಇಡೀ ಹೋರಾಟವನ್ನೇ ತಣ್ಣಗಾಗಿಸುತ್ತದೆ. ಏನೆಲ್ಲವನ್ನೂ ಸಾಧಿಸಬೇಕಾಗಿದ್ದ ಈ ಮಹತ್ವಪೂರ್ಣ ಚಳವಳಿ ಧಾರ್ಮಿಕ ಚೌಕಟ್ಟಿನಲ್ಲಿ ಸಿಕ್ಕು ತಣ್ಣಗೇ ನರಳುತ್ತದೆ.

ದೇಶದಲ್ಲಿ ಮೊಟ್ಟ ಮೊದಲ ಬಾರಿಗೆ ದುಡಿವ ವರ್ಗದಿಂದ ಸಂಘಟಿತವಾದ ಈ ಹೋರಾಟ 'ಧರ್ಮ'ದ ಕೈಗೆ ಸಿಕ್ಕು ನೆಲಕಚ್ಚುತ್ತದೆ. ಆದ್ದರಿಂದ ವಚನಕಾರರಲ್ಲಿ ವರ್ಗ ಹೋರಾಟವನ್ನು ಗುರುತಿಸುವದೇ ಅಸಮಂಜಸವಾಗುತ್ತದೆ. ಸಾಮಾನ್ಯವಾಗಿ ಎಲ್ಲಾ ವಚನಕಾರರು ಭಕ್ತನನ್ನು ಮೆಚ್ಚಿಕೊಂಡು ಭವಿಯನ್ನು ಅಲ್ಲಗಳೆಯುತ್ತಾರೆಯೇ ಹೊರತು ಶ್ರೀಮಂತನನ್ನು ಧಿಕ್ಕರಿಸಿ ಬಡವನನ್ನು ಮೇಲಕ್ಕೆತ್ತುವದಿಲ್ಲ. ಬೂರ್ಜ್ವಾಗಳಲ್ಲಿ ಒಳ್ಳೆಯ ಬೂರ್ಜ್ವಾ–ಕೆಟ್ಟ ಬೂರ್ಜ್ವಾ ಎಂದು ವಿಂಗಡಿಸುವದು ವ್ಯವಸ್ಥೆ

ಯೊಡನೆ ಮಾಡಿಕೊಂಡ ಒಡಂಬಡಿಕೆಯಾದರೆ, ಇಡೀ ಬೂರ್ಜ್ವಾ ವ್ಯವಸ್ಥೆಯನ್ನು ಸುಟ್ಟು ಹಾಕುವದು ಕ್ರಾಂತಿಯಾಗುತ್ತದೆ. ಧಾರ್ಮಿಕ ಚೌಕಟ್ಟಿನಲ್ಲಿ ಸಾಮಾಜಿಕ ಹೋರಾಟ ಮಾಡಲು ಪ್ರಾರಂಭಿಸಿದರೆ ಹೇಗೆ ದುರಂತವಾಗುತ್ತವೆಂಬುದಕ್ಕೆ ವಚನ ಕಾರರ ಹೋರಾಟವೇ ಒಳ್ಳೆಯ ಉದಾಹರಣೆ.

ಶರಣರ ಜಾತಿ ನಿವಾರಣೆಯೂ ಕೂಡ ಧಾರ್ಮಿಕ ಚೌಕಟ್ಟಿನೊಳಗೇ ನಡೆದದ್ದು. ಬ್ರಾಹ್ಮಣನಾದ ಮಧುವರಸನ ಮಗಳು ಹಾಗೂ ಹೊಲೆಯನಾದ ಹರಳಯ್ಯನ ಮಗ ಇವರಿಬ್ಬರ ವಿವಾಹವನ್ನು ಶರಣರು ಮಾಡುತ್ತಾರೆ. ಆದರೆ ಇಲ್ಲಿ ಗಮನಿಸಬೇಕಾದ ಅಂಶವೇದರೆ ಹರಳಯ್ಯನ ಮಗನೂ–ಮಧುವರಸನ ಮಗಳೂ ಇಬ್ಬರೂ ಲಿಂಗ ಧರಿಸಿದ ಮೇಲೆಯೇ ಅವರಿಗೆ ಮದುವೆ. ನೂರೆಂಟು ಜಾತಿಗಳನ್ನು ಒಂದುಗೂಡಿಸಿ ಭಕ್ತರ ಸೈನ್ಯವನ್ನೇನೊ ಕಟ್ಟಿದರು. ಆದರೆ ಅದು ಉಳ್ಳವರ ವಿರುದ್ಧ ಕಟ್ಟಿದ ಸೈನ್ಯ ವಾಗಿರಲಿಲ್ಲವೆಂಬುದು ಗಮನಿಸಬೇಕಾದ ಸಂಗತಿ. ಮೊದಲು ಜಾತಿ–ಜಾತಿಗಳಲ್ಲಿ ನಡೆಯುತಿದ್ದ ಹೊಡೆದಾಟಗಳು ಇವರ ಕಾಲಕ್ಕೆ ಗುಂಪು–ಗುಂಪುಗಳಾಗಿ ಹೊಡೆ ದಾಡಲು ನಿಂತವು. ಭವಿ–ಭಕ್ತರಿಗೆ ನಡೆದ ಅನೇಕ ತಿಕ್ಕಾಟಗಳನ್ನು ನೋಡಬಹುದು. ಈ ಭವಿ–ಭಕ್ತ ತಿಕ್ಕಾಟದಲ್ಲಿ ದಲಿತರ–ಬಡವರ ಮೂಲ ಸಮಸ್ಯೆ ಮುಚ್ಚಿಹೋಗಿ ಸಾಮಾಜಿಕವಾಗಿ ಅರಳ ಬಹುದಾಗಿದ್ದ ಚಳವಳಿ ಶರಣರ ಸಾವಿನ ಮೂಲಕ ಕೊನೆ ಗೊಂಡದ್ದು ನಿಜಕ್ಕೂ ದೊಡ್ಡದುರಂತ. ಇದು ವಚನಕಾರರ ಮಿತಿಯೂ ಹೌದು.

ರಾಜಕೀಯ ಬದಲಾವಣೆಯನ್ನು ತರದ ಯಾವ ಹೋರಾಟವೂ ಕ್ರಾಂತಿಯಾಗ ಲಾರದು. ವಚನಕಾರರಂತೂ ರಾಜಕೀಯದಿಂದ ತುಂಬಾ ದೂರವಿದ್ದರು. ಬಸವಣ್ಣ ಮಂತ್ರಿಯೂ ಆಗಿದ್ದ–ವಚನ ಚಳುವಳಿಯ ನಾಯಕನೂ ಆಗಿದ್ದ. ರಾಜಕೀಯ ಬದಲಾವಣೆಗಾಗಿ ಹೋರಾಡಲು ವಚನಕಾರರಿಗೆ ಒಳ್ಳೆಯ ಅವಕಾಶವಿತ್ತು. ಆದರೆ ಬಸವಣ್ಣನಿಗೆ ಧರ್ಮ ಪ್ರಮುಖವಾಗಿ ಕಂಡಿತೇ ಹೊರತು ರಾಜಕೀಯ ಕ್ಷೇತ್ರವಲ್ಲ. ವಚನಕಾರರಿಗೆಲ್ಲಾ ಗುರು–ಲಿಂಗ–ಜಂಗಮರೇ ಮುಖ್ಯವಾಗಿ ಕಂಡರೇ ಹೊರತು ರಾಜಕೀಯದ ಏರು–ಪೇರಿನ ಸ್ಥಿತಿಯಲ್ಲ. ಹೊಸ ರಾಜಕೀಯ ವ್ಯವಸ್ಥೆಯೊಂದನ್ನು ಹುಟ್ಟುಹಾಕುವದು ಅವರ ಉದ್ದೇಶವೇ ಆಗಿರಲಿಲ್ಲ. ಆದ್ದರಿಂದಲೇ ಅವರು ರಾಜಕೀಯದಿಂದ ದೂರವುಳಿದು ಹೋರಾಟ ಮಾಡಿದರು. ಅಂತೆಯೇ ಬಸವಣ್ಣನಿಗೆ ಅರಸರ ಮನೆಯಲ್ಲಿ ಅರಸಿಯಾಗಿರುವದಕ್ಕಿಂತ ಭಕ್ತರ ಮನೆಯಲ್ಲಿ ತೊತ್ತಾಗಿರುವದೇ ಲೇಸೆನಿಸಿತು. ಬಿಜ್ಜಳ ಮುಂತಾದ ಲಿಂಗಧಾರಿಗಳಲ್ಲದವರು ಅವರ ಕಣ್ಣಲ್ಲಿ ಭವಿಗಳಾಗಿ ಕಂಡರೇ ಹೊರತು ವ್ಯವಸ್ಥೆಯನ್ನು ಪೋಷಿಸುವ ಪಟ್ಟಭದ್ರ ಹಿತಾಸಕ್ತಿಗಳಾಗಿ ಅಲ್ಲ.

ವಚನಕಾರರು ಅರಸನ ಗುಲಾಮರಾಗದೆ, ಅವನ ಸಾಮಿಪ್ಯವನ್ನು ವೈಭವವನ್ನು ತಿರಸ್ಕರಿಸಿದರು. ಇದು ಅಂದಿನ ಅರಸೊತ್ತಿಗೆಯ ವ್ಯವಸ್ಥೆಯಲ್ಲಿ ಮೂಡಿದ ಮೊಟ್ಟ

ಮೊದಲನೆಯ ಪ್ರತಿಭಟನೆ. ಆದರೆ ಭಾವುಕರಾದ ವಚನಕಾರರಲ್ಲಿ ಈ ಪ್ರತಿಭಟನೆ ಹುಟ್ಟುತ್ತಲೇ ತಣ್ಣಗಾಯಿತು. 'ಅರಸು ಮುನಿದಡೆ ನಾಡೊಳಗಿರಬಾರದಯ್ಯ' ಎಂದು ಹಿಂದೇಟು ಹಾಕುವ ಹಂತಕ್ಕೆ ಅವರ ಧಾರ್ಮಿಕ ಚೌಕಟ್ಟು ಬಲಿಷ್ಠವಾಗಿತ್ತು. ಭಕ್ತಿಯ ಅಮಲಿನಲ್ಲಿ ರಾಜಕೀಯ ಕ್ಷೇತ್ರವನ್ನೇ ನಿರ್ಲಕ್ಷಿಸಿದ್ದರಿಂದ ಚಳವಳಿ ಮುಂದೆ ಬೇರೆ ತಿರುವು ಪಡೆದು ಹಿಂಸೆಯಲ್ಲಿ–ದುರಂತದಲ್ಲಿ ಕೊನೆಗೊಂಡಿತು.

'ಧರ್ಮ'ಕ್ಕೆ ಧರ್ಮದ ಆಚರಣೆಗೆ ವಚನಕಾರರು ಎಷ್ಟೇ ಬದ್ಧರಾಗಿದ್ದರೂ, ಸಾಮಾಜಿಕಕ್ಕೆ ತೀವ್ರವಾಗಿ ಸ್ಪಂದಿಸುವದರಿಂದ ಅವರು ನಮಗಿಂದಿಗೂ ಪ್ರಮುಖ ರಾಗುತ್ತಾರೆ. ಬಾಯಿತೆರೆಯುವದೇ ಅಪರಾಧವಾಗಿದ್ದ ಅಂದಿನ ವ್ಯವಸ್ಥೆಯಲ್ಲಿ ದಲಿತರು–ದುಡಿವವರ್ಗದವರು ಮೊಟ್ಟಮೊದಲು ಬಾಯಿತೆರೆದು, ದನಿಯೆತ್ತಿ ಮಾತ ನಾಡಿದ್ದು–ಚರ್ಚಿಸಿದ್ದು–ಪ್ರಶ್ನಿಸಿದ್ದು ನಮಗಿಂದು ಬಹಳ ಮುಖ್ಯವಾಗುತ್ತವೆ.

ವಚನಕಾರರು ಅನುಭವ ಮಂಟಪದಲ್ಲಿ ಕುಳಿತು ಚರ್ಚಿಸುವಾಗ ಸಾಮೂಹಿಕ ಹಿತ ಪಾಲಿಸುತಿದ್ದರು. ತಾವು ಹೇಳಿದ ವಚನಗಳಲ್ಲಿ ತಪ್ಪೆಂದು ಕಂಡುಬಂದರೆ ತಿದ್ದಿಕೊಂಡು ಮುಂದೆ ಬೆಳೆಯುತಿದ್ದರು. ಅಂತೆಯೇ ವಚನಕಾರರ ಅನೇಕ ವಚನಗಳಲ್ಲಿ ಬದುಕಿನ ದ್ವಂದ್ವ ಕಾಣುತ್ತದೆ.

ಈ ವಚನಕಾರರಲ್ಲೇ ಅಲ್ಲಮಪ್ರಭು–ಚನ್ನಬಸವಣ್ಣ, ಅಕ್ಕಮಹಾದೇವಿ ಮುಂತಾದ ವರು ಧರ್ಮಾಚರಣೆಗೆ ಪ್ರಾಮುಖ್ಯತೆ ಕೊಟ್ಟು.ಧರ್ಮವನ್ನು ಅದರ ಎಲ್ಲಾ ನಿಯಮ ಗಳೊಂದಿಗೆ ಬೆಳೆಸಲು ಪ್ರಯತ್ನಿಸಿದರೆ ಅಂಬಿಗರ ಚೌಡಯ್ಯ, ಉರಿಲಿಂಗಪೆದ್ದಿ, ಕಾಳವ್ವೆ, ಗೊಗ್ಗವ್ವೆ, ಅಮುಗೆ ರಾಯಮ್ಮ ಮುಂತಾದ ದುಡಿವವರ್ಗದಿಂದ ಬಂದ ಜನ ಇವರ ಹೇಳಿಕೆಗಳನ್ನು ಪ್ರಶ್ನಿಸುತ್ತಾ, ಒಂದೊಂದುಸಲ ಅಲ್ಲಗಳೆಯುತ್ತಾ ಚಳ ವಳಿಗೆ ಹೊಸ ತಿರುವು ನೀಡಲು ಪ್ರಯತ್ನಿಸಿದರು. ಆದರೆ ಆ ಪ್ರಯತ್ನ ಫಲಕಾರಿ ಯಾಗಲಿಲ್ಲ. ಮೇಲ್ನೋಟಕ್ಕೆ ಅವರಲ್ಲೇ ಭಿನ್ನಾಭಿಪ್ರಾಯ ಕಂಡು ಬಂದರೂ ಕೊನೆಗೆ ಮತ್ತೆ ಎಲ್ಲರೂ ತಮ್ಮ ಇಷ್ಟದೈವಕ್ಕೆ ಮೊರೆಹೋಗಿ ಒಂದಾಗಿಬಿಡುತ್ತಾರೆ. ಇದು ಶರಣರ ಶಿಸ್ತು–ಒಕ್ಕಟ್ಟನ್ನು ಹೇಳುವವದರೊಂದಿಗೆ ವಚನ ಚಳವಳಿಯಲ್ಲಿ ಮೂಡ ಬಹುದಾಗಿದ್ದ ಹೊಸ ತಿರಿವಿಗೆ ಕೊಟ್ಟಹೊಡೆತವೂ ಆಗಿದೆ.

ವಚನಕಾರರಲ್ಲಿ ಪ್ರಭು–ಚನ್ನಬಸವಣ್ಣ, ಸಿದ್ಧರಾಮ, ಅಕ್ಕಮಹಾದೇವಿ, ಗಂಗಾಂಬಿಕೆ–ನೀಲಾಂಬಿಗ ಮುಂತಾದವರೆಲ್ಲಾ ಅಷ್ಟಾವರಣ–ಷಟ್‌ಸ್ಥಲ–ಪಂಚಾ ಚಾರ ಮೊದಲಾದ ಧಾರ್ಮಿಕ ಆಚರಣೆಗಳನ್ನು ಯಥಾವತ್ತಾಗಿ ಒಪ್ಪಿಕೊಂಡು ಅತ್ಯಂತ ಭಕ್ತಿಯಿಂದ ನಿಷ್ಠೆಯಿಂದ ಆಚರಿಸಿದರೆ ಚೌಡಯ್ಯ, ಕಾಳವ್ವೆ, ಗೊಗ್ಗವ್ವೆ ಮುಂತಾದ ದಲಿತ ವರ್ಗದಿಂದ ಬಂದ ವಚನಕಾರರು ಎಷ್ಟೇ ಭಾವುಕರಾದರೂ

ಮತ್ತೆ ಮನದೊಳಗೆ ಅವರಿಗೆ ಪ್ರಶ್ನೆಗಳು ಕಾಡುತ್ತವೆ. ಹೀಗಾಗಿ ಪ್ರಶ್ನಿಸುತ್ತಾರೆ-ಆದರೆ ವಿರೋಧಿಸುವದಿಲ್ಲ. ಧಾರ್ಮಿಕ ಕ್ಷೇತ್ರದಲ್ಲಿ ಈ ಜನರಿಗೆ ಮೊಟ್ಟಮೊದಲ ಸಲ ಸಿಕ್ಕ ಸ್ವಾತಂತ್ರ್ಯ ಇದಾಗಿದ್ದರಿಂದ ಅವರು ಒಂದುತರಹದ ವಿಚಿತ್ರ ಅನುಭವದಲ್ಲಿ ಕರಗಿ ಹೋಗುತ್ತಾರೆ. ಬಸವಣ್ಣ ಮಾತ್ರ ಈ ಎರಡೂ ಗುಂಪುಗಳ ಕೊಂಡಿಯಂತೆ ಸಮನ್ವಯವ್ಯಕ್ತಿಯಾಗಿ ಕಾರ್ಯನಿರ್ವಹಿಸುತ್ತಾನೆ. 'ಎನಗಿಂತಕಿರಿಯರಿಲ್ಲ' ಎನ್ನುತ್ತಲೇ ಚಳವಳಿಯ ನಾಯಕನಾಗುತ್ತಾನೆ. ಬಸವಣ್ಣ "ಮಸಿಯನೇಸುಕಾಲ ಬೆಳಗಿಗಿವರೆ ಬಿಳಿದಾಗಬಲ್ಲುದಯ್ಯ" "ಕಪಟವೇಷವ ಡಂಭಕನಾನು"-ಎಂದು ಹೇಳುತ್ತಾ ಅಲ್ಲಮಪ್ರಭು ಮುಂತಾದವರ ಮುಂದೆ ತನ್ನ ಭಕ್ತಿ-ವಿಧೇಯತೆಯನ್ನು ವ್ಯಕ್ತಪಡಿಸಿ ಅವರ ಮೆಚ್ಚಿಗೆಗೆ ಪಾತ್ರನಾಗುತ್ತಾನೆ. ಇತ್ತ "ಅಪ್ಪನು ನಮ್ಮ ಮಾದಾರ ಚೆನ್ನಯ್ಯ" "ಭರಣಿಯಾರಿಸಲು ಹೋದಲ್ಲಿ ಹೊಲೆಮಾದಿಗರಿಗೆ ಹುಟ್ಟಿದವ ನಾನು"-ಎಂದು ಹೇಳುತ್ತಾ ದಲಿತವರ್ಗದ ವಚನಕಾರರ ಪ್ರೀತಿಗೆ ಪಾತ್ರನಾಗುತ್ತಾನೆ. ಎಲ್ಲ ಸಮಸ್ಯೆಗಳನ್ನೂ ಸಂಯಮದಿಂದ ಎದುರಿಸುತ್ತಾ, ಎಲ್ಲಾ ವಚನಕಾರರನ್ನೂ ಪ್ರೀತಿಯಿಂದ ಕಾಣುತ್ತಾ ತಾನು ಸಣ್ಣವ ಎನ್ನುತ್ತಲೇ ದೊಡ್ಡವನಾಗುತ್ತಾನೆ, ಚರಿತ್ರೆಯಲ್ಲಿ ಹಸಿರಾಗಿ ಉಳಿಯುತ್ತಾನೆ. ನಿಜಕ್ಕೂ ಬಸವಣ್ಣ ವಿಶಿಷ್ಟ ವ್ಯಕ್ತಿತ್ವ ಹೊಂದಿದ ವಚನಕಾರ. ಇಂತಹ ಸತ್ವಶಾಲಿ ವ್ಯಕ್ತಿಯನ್ನು ಸರಿಯಾಗಿ ಉಪಯೋಗಿಸಿಕೊಳ್ಳುವ ಸಾಮರ್ಥ್ಯ ಆ ಚಳವಳಿಗೆ ಇಲ್ಲದೇಹೋದದ್ದು ನಿಜಕ್ಕೂ ದುಃಖದ ಸಂಗತಿ.

ವಚನಕಾರರು ತಾವು ಹಾಕಿಕೊಂಡಿದ್ದ ಗೆರೆಗಳನ್ನೇ ಒಮ್ಮೊಮ್ಮೆ ದಾಟಿ ನಡೆಯುತಿದ್ದರು. ವಿಮರ್ಶೆ-ಸ್ವವಿಮರ್ಶೆಯನ್ನು ಒಟ್ಟೊಟ್ಟಿಗೆ ಮಾಡುತಿದ್ದರು-ರಚನಾತ್ಮಕ ಟೀಕೆಗಳನ್ನು ಸ್ವಾಗತಿಸಿದ್ದರು. ಪ್ರಾರಂಭದಲ್ಲಿ ಬರೆದುಕೊಂಡ ಸಾಲುಗಳನ್ನು ಅಳಿಸಿ ಹಾಕಿ ಮತ್ತೆ ಹೊಸವನ್ನು ಬರೆದು ಕೊಳ್ಳುತ್ತಿದ್ದರು. ಇದು ವಚನಕಾರರ ಬೆಳವಣಿಗೆಯ ಹಂತವನ್ನು ಸೂಚಿಸುತ್ತದೆ.

ಪ್ರಾರಂಭದಲ್ಲಿ ಬಹುದೇವೋಪಾಸನೆಯನ್ನು ಖಂಡಿಸಿ ಏಕದೇವೋಪಾಸನೆಯಾದ ಇಷ್ಟಲಿಂಗದಲ್ಲಿ ಕೇಂದ್ರೀಕೃತನಾದ ಅಂಬಿಗರ ಚೌಡಯ್ಯ ನಂತರದ ತನ್ನ ವಚನಗಳಲ್ಲಿ ಇಷ್ಟಲಿಂಗವನ್ನೂ ಮೀರಿ ಮುಂದೆ ಬೆಳೆಯುತ್ತಾನೆ. "ಕಟ್ಟಿದಲಿಂಗವ ಬಿಟ್ಟು ಬೆಟ್ಟದ ಲಿಂಗಕ್ಕೆ ಹೋದಡೆ ಮೆಟ್ಟುತೆಗೆದುಕೊಂಡು ಹೊಡೆ" ಎಂದು ಮೊದಮೊದಲು ಗರ್ಜಿಸಿದ ಚೌಡಯ್ಯ ನಂತರ ಅದೇ ಕಟ್ಟಿದ ಇಷ್ಟಲಿಂಗವನ್ನು ಕುರಿತು "ಎರೆವರೆ ನೆನೆಯದು ಬಿಟ್ಟರೆ ಬಾಡದು" ಎಂದು ಹೇಳುತ್ತಾನೆ. ಇದು ಚೌಡಯ್ಯನ ನಿಜವಾದ ಬೆಳವಣಿಗೆಯನ್ನು ಸೂಚಿಸುತ್ತದೆ. ಅದೇರೀತಿ ಎಲ್ಲಾ ವಚನಕಾರರೂ "ಶರಣ ಸತಿ ಲಿಂಗ ಪತಿ" ಎಂಬ ಸೊಲ್ಲನ್ನೇ ಹಾಡುತಿದ್ದರೆ, ಚೌಡಯ್ಯ ಅದಕ್ಕೆ ಭಿನ್ನವಾಗಿ "ಶರಣ ಹೆಣ್ಣಾದ ಪರಿಯೆಂತು ? ಲಿಂಗ ಗಂಡಾದ ಪರಿಹೇಗೆ?" ಎಂದು ಪ್ರಶ್ನಿಸುತ್ತಾನೆ.

ಇದೇ ರೀತಿ ವಚನಕಾರ್ತಿ ಗೊಗ್ಗವ್ವೆ ತನ್ನ ಒಂದು ವಚನದಲ್ಲಿ

> "ಗಂಡು ಮೋಹಿಸಿ ಹೆಣ್ಣ ಹಿಡಿದಡೆ
> ಅದು ಒಬ್ಬರ ಒಡವೆಯೆಂದರಿಯಬೇಕು
> ಹೆಣ್ಣು ಮೋಹಿಸಿ ಗಂಡ ಹಿಡಿದಡೆ
> ಉತ್ತರವಾವುದೆಂದರಿಯ ಬೇಕು ?"

ಎಂದು ಪ್ರಶ್ನಿಸುತ್ತಾಳೆ. ಹೆಣ್ಣು ಒಂದು ಒಡವೆ–ಆಸ್ತಿ ಎನ್ನುವ ಕಲ್ಪನೆಯಿದ್ದ ಆ ವ್ಯವಸ್ಥೆಯಲ್ಲಿ ಗೊಗ್ಗವ್ವೆಯಂತಹ ಒಬ್ಬ ದಲಿತ ಮಹಿಳೆ ಇಡೀ ವ್ಯವಸ್ಥೆಯನ್ನೇ ಪ್ರಶ್ನಿಸುವ ಸಂದರ್ಭ ತೀರಾ ಮಹತ್ವವಾದುದು. ಗಂಡು ಹೆಣ್ಣನ್ನು ಮೋಹಿಸಿ ಕೈಹಿಡಿದಾಗ ಹೆಣ್ಣು ಆಸ್ತಿ–ಅಥವಾ ಒಡವೆಯಾಗಬಹುದು. ಆದರೆ ಹೆಣ್ಣೇ ಗಂಡನ್ನು ಮೋಹಿಸಿ ಕೈಹಿಡಿದರೆ ? ಇದಕ್ಕೆ ಉತ್ತರವೇನು ?

> "ಕೊಲ್ಲುವವನೇ ಮಾದಿಗ
> ಹೊಲಸುತಿಂಬುವವನೇ ಹೊಲೆಯ" ಎಂದು

ಬಸವಣ್ಣ ಹೇಳುತ್ತಿದ್ದರೆ, ಅದಕ್ಕೆ ಪ್ರತಿಯಾಗಿ ದಲಿತ ವಚನಕಾರ್ತಿ ಕಾಳವ್ವೆ ಹೇಳುವ ಈ ಗಟ್ಟಿ ವಚನ ಗಮನಿಸುವಂತಹದು.

> "ಕುರಿಕೋಳಿ ಕಿರಿಮೀನು ತಿಂಬುವರಿಗೆಲ್ಲ ಕುಲಜ ಕುಲಜರೆಂಬರು
> ಶಿವಗೆ ಪಂಚಾಮೃತ ಕರೆವಪಶುವತಿಂಬ ಮಾದಿಗ ಕೀಳು ಜಾತಿಯೆಂಬರು
> ಅವರೆಂತು ಕೀಳುಜಾತಿಯಾದಾರು, ಜಾತಿಗಳು ನೀವೇಕೆ ಕೀಳಾಗಿರೊ?"

ದಲಿತರು ಗೋಮಾಂಸ ತಿನ್ನುವವನ್ನು ಕಂಡು ಸಮಾಜ ಅವರನ್ನು ಕೀಳಾಗಿ ಕಾಣುತ್ತದೆ. ಇಂತಹ ಸಮಾಜವನ್ನು ಪ್ರಶ್ನಿಸುವ ಕಾಳವ್ವೆಯ ಈನುಡಿಯಲ್ಲಿ ದಟ್ಟ ಸತ್ವವಡಗಿದೆ. ದಲಿತ ವರ್ಗದಿಂದ ಬಂದ ಈ ಮಹಿಳೆಗೆ ತನ್ನ ಆಹಾರದ ಬಗೆಗೆ ಹೆಮ್ಮೆಯಿದೆ. ಸಮಾಜವೇ ತಲೆನೂಗುವಂತೆ ಹೇಳುವ ಈ ಮಾತು ದಲಿತ ಸಂಸ್ಕೃತಿಯ ಆಹಾರ ಪದ್ಧತಿಗೆ ಸಿಕ್ಕ ಮನ್ನಣೆಯಾಗಿದೆ. ಕುರಿ ಕೋಳಿ ಕಿರಿಮೀನು ತಿನ್ನುವ ಕುಲಜರನ್ನೆಲ್ಲಾ ತರಾಟೆಗೆ ತೆಗೆದುಕೊಂಡ ಕಾಳವ್ವೆ ಗೋಮಾಂಸದ ಶ್ರೇಷ್ಠತೆಯನ್ನು ಎತ್ತಿ ಹೇಳುತ್ತಾ; ಜಾತಿಗೋಡೆಗಳ ವ್ಯವಸ್ಥೆಯ ಮಧ್ಯೆ ಸಿಡಿಲಾಗಿ ಸಿಡಿಯುತ್ತಾಳೆ. ದುಡಿವ ವರ್ಗದಿಂದ ಬಂದ ಇನ್ನೊಬ್ಬ ವಚನಕಾರ ನುಲಿಯ ಚಂದಯ್ಯ ಲಿಂಗವನ್ನು ಕಡೆಗಣಿಸಿ, ಧರ್ಮದ ಆಚರಣೆಯನ್ನು ಬದಿಗಿಟ್ಟು ಕಾಯಕಕ್ಕೆ ಪ್ರಾಧಾನ್ಯತೆ ಕೊಡುತ್ತಾನೆ. ಮಂಡೆಬೋಳಿಸಿಕೊಂಡು ತುಂಡುಗಂಬಳಿಹೊದ್ದ ವೇಷಧಾರಿಗಳನ್ನು ಅಮುಗೆ ರಾಯಮ್ಮ ತೀವ್ರವಾಗಿ ಟೀಕಿಸುತ್ತಾಳೆ.

ಇವುಗಳನ್ನೆಲ್ಲಾ ಹೇಳಲು ಮುಖ್ಯ ಕಾರಣವೆಂದರೆ; ಒಂದು ಸಮಾಜ ವ್ಯವಸ್ಥೆಯನ್ನು

ಆದರ ರಕ್ಷಕ ಶಕ್ತಿಗಳನ್ನು ವಿರೋಧಿಸಿ ಕ್ರಾಂತಿಕಾರಕವಾಗಿ ಮಾತನಾಡುವ ಕೆಚ್ಚು ಜನಸಾಮಾನ್ಯರಲ್ಲಿ ಮೂಡಿದ್ದು ವಚನ ಚಳವಳಿಯ ನಿಜವಾದ ಸಾಧನೆಯಾಗುತ್ತದೆ. ದುಡಿವ ವರ್ಗದಿಂದ ಬಂದ ವಚನಕಾರರು ಹೀಗೆ ಎಷ್ಟೋ ಸಾಮಾಜಿಕ ಸಮಸ್ಯೆಗಳನ್ನು ಎತ್ತಿಕೊಂಡು ಚರ್ಚಿಸುತಿದ್ದರು. ಇಂತಹ ಮುಕ್ತ ಚರ್ಚೆಗೆ ಬಸವಣ್ಣ ಮುಂತಾದ ಹಿರಿಯ ವಚನಕಾರರು ಅವಕಾಶ ಕಲ್ಪಿಸಿಕೊಟ್ಟದ್ದು ಗಮನಿಸಬೇಕಾದ ಅಂಶ. ಧಾರ್ಮಿಕ–ಸಾಮಾಜಿಕ–ರಾಜಕೀಯ ಎಲ್ಲಾ ಕ್ಷೇತ್ರಗಳಲ್ಲೂ ಅಸ್ಪೃಶ್ಯಳಾಗಿದ್ದ ಮಹಿಳೆ ವಚನಕಾರರ ಕಾಲಕ್ಕೆ ಮೊಟ್ಟ ಮೊದಲಬಾರಿಗೆ ಗಟ್ಟಿ ದನಿ ತೆಗೆದು ಮಾತನಾಡಿದ್ದು, ಪ್ರಶ್ನಿಸಿದ್ದು ಇಂದಿಗೂ ಕೂಡ ಬಹುಮುಖ್ಯವಾಗುತ್ತದೆ. ಕಾಳವ್ವೆಯಂತಹ ವಚನಕಾರ್ತಿ ಸಾಮಾಜಿಕವಾಗಿ ಅಷ್ಟೊಂದು ಹರಿತವಾಗಿ ಪ್ರತಿಕ್ರಿಯಿಸುವದು ಮತ್ತು ಇದುವರೆಗೆ ಮಹಿಳೆ ಪ್ರವೇಶಿಸದ ಆಧ್ಯಾತ್ಮ ಕ್ಷೇತ್ರದಲ್ಲಿ ಅಕ್ಕಮಹಾದೇವಿ ಮೇರು ಪರ್ವತವಾಗಿ ನಿಲ್ಲುವದು–ಬಸವಣ್ಣ–ಪ್ರಭುದೇವರ ವಿಶಾಲ ಹೃದಯಕ್ಕೆ ಸಾಕ್ಷಿಯಾಗಿವೆ. ಇದು ವಚನ ಚಳವಳಿಯ ವೈವಿಧ್ಯವೂ ಹೌದು–ವೈಶಿಷ್ಟ್ಯವೂ ಹೌದು.

ಇಷ್ಟೆಲ್ಲಾ ಹೋರಾಡಿ ಸಾಮಾಜಿಕ ಸಮಸ್ಯೆಗಳನ್ನೆತ್ತಿಕೊಂಡು ಚರ್ಚಿಸಿದ–ಪ್ರಶ್ನಿಸಿದ ದುಡಿವ ವರ್ಗದ–ದಲಿತ ವರ್ಗದ ವಚನಕಾರರೆಲ್ಲಾ ಕೊನೆಗೆ ತಮ್ಮ ಇಷ್ಟ ದೈವದಲ್ಲಿ ಕರಗಿ ಹೋಗುವದು ಈ ಚಳವಳಿಯ ಮಿತಿಯೂ ಹೌದು.

ರಾಜಪರ ಮೌಲ್ಯಗಳನ್ನು ಧಿಕ್ಕರಿಸಿ **ಧರ್ಮಪರ** ಮೌಲ್ಯಗಳನ್ನು ಬೆಳೆಸಿದ ವಚನಕಾರರು **ಜನಪರ** ಮೌಲ್ಯಗಳಿಗಾಗಿ ಹೋರಾಡಿದ್ದರೂ ಧಾರ್ಮಿಕ ಚೌಕಟ್ಟಿನಿಂದ ಪಾರಾಗಿ ಬರಲಿಲ್ಲ. ಇಷ್ಟೆಲ್ಲಾ ಮಿತಿಗಳೊಂದಿಗೆ ಹಲವಾರು ಸಾಧನೆಗಳನ್ನೂ ಈ ಚಳವಳಿ ತನ್ನೊಡಲಲ್ಲಿ ಬೆಳಗಿಸುವದರ ಮೂಲಕ ಚರಿತ್ರೆಯಲ್ಲಿ ಇಂದಿಗೂ ಹಸಿರಾಗಿ ನಿಂತಿದೆ.

ಡಾ. ಸಿ. ಪಿ. ಸಿದ್ಧಾಶ್ರಮ

ದಾಸಸಾಹಿತ್ಯದಲ್ಲಿ ಸಾಮಾಜಿಕ ಮೌಲ್ಯಗಳು

ಮಾನವ ಸಮಾಜ ಜೀವಿಯಾದ್ದರಿಂದ ಆತನ ವಿಚಾರ ಆಲೋಚನೆಗಳು, ಚಿಂತನೆ ಮಂಥನಗಳು ಸಾಮಾಜಿಕ ಸಂದರ್ಭದಲ್ಲೇ ರೂಪುಗೊಳ್ಳಬೇಕಾಗ ತ್ತದೆ; ಖಚಿತಗೊಳ್ಳಬೇಕಾಗುತ್ತದೆ. ಕವಿ, ಕಲಾವಿದ, ಅನುಭಾವಿ, ದಾರ್ಶನಿಕರು ಕೇವಲ ಸಾಮಾನ್ಯ ವ್ಯಕ್ತಿಗಳಾಗಿರದೆ ಭೂತ, ವರ್ತಮಾನ ಕಾಲಗಳ ಸಮಾಜದ ಬದುಕನ್ನು ತಮ್ಮ ಸೂಕ್ಷ್ಮಾತಿಸೂಕ್ಷ್ಮ ಸಂವೇದನೆಗೆ ಒಳಪಡಿಸಿ ಭವಿಷ್ಯ ಬದುಕಿನ ಮೇಲೆ ಬೆಳಕನ್ನು ಚೆಲ್ಲುತ್ತಾರೆ; ಸಾರ್ವಕಾಲಿಕ ಸತ್ಯವನ್ನು ಹೇಳುವವರಾಗಿರುತ್ತಾರೆ. ಆದ್ದರಿಂದಲೇ ನಾವು ಇಂಥವರ ವಿಚಾರಗಳಿಗೆ ಹೆಚ್ಚಿನ ಬೆಲೆ ಕೊಡುವುದು. ಆದರೆ ಸಾಹಿತಿ, ಕಲಾವಿದ, ಅನುಭಾವಿ — ಎಂದು ಮುಂತಾಗಿ ಹೇಳಿಕೊಳ್ಳುವ, ಕರೆಯಿಸಿಕೊಳ್ಳುವ ಎಷ್ಟೋ ಜನಕ್ಕೆ ತಮ್ಮ ಸುತ್ತ-ಮುತ್ತಲಿನ ಬದುಕಿನಲ್ಲಿ ನಡೆಯುಬಹುದಾದ ಸಾಮಾಜಿಕ ಏರುಪೇರು, ಜಾತಿಮತಗಳ ರಕ್ಕಸಕುಣಿತ, ಭ್ರಷ್ಟಾಚಾರ, ಸ್ತ್ರೀ ಶೋಷಣೆ, ಓರಿಸೆ ಮುಂತಾದ ಅನಿಷ್ಟಗಳತ್ತ ಅರಿವನ್ನೇ ಇಟ್ಟುಕೊಳ್ಳದಿರುವ ಮನೋಭಾವವನ್ನು ನೋಡಿದರೆ ವಿಷಾದವಾಗುತ್ತದೆ. ಸಮಾಜದ ಒಡಲಿನಿಂದ ಬಂದು ಅಲ್ಲಿಯೇ ಬದುಕುತ್ತಿರುವ ಕವಿ ಕಲಾವಿದರಿಗೆ ಸೃಜನಕ್ಷೇತ್ರ ಸಮಾಜವೇ ಹೊರತು ಬೇರೆ ಅಲ್ಲ. ಆದ್ದರಿಂದ ಸಮಾಜದ ಎಲ್ಲ ವರ್ಗಗಳ ಏಳ್ಗೆಗಾಗಿ, ಸಮಾನತಾ ಬದುಕಿಗಾಗಿ, ಶಾಂತಿಸುಖಗಳಿಗಾಗಿ ತನ್ನ ಕೃತಿಯ ಮೂಲಕ ಆರೋಗ್ಯಕರವಾದ ರೀತಿಯಲ್ಲಿ ಹೋರಾಟ ಮಾಡಬೇಕಾಗುತ್ತದೆ. ಹೀಗೆ ಕವಿ ಕಲಾವಿದರು ಸೃಜನಾತ್ಮಕವಾದ ತಮ್ಮ ಕೃತಿಗಳಲ್ಲಿ ಪ್ರಕಟಪಡಿಸುವ ಬದುಕಿನ ಬಗೆಗಿನ ಶ್ರದ್ಧೆ, ಕಾಳಜಿ ಮತ್ತು ಎಚ್ಚರವನ್ನು ಸಾಮಾಜಿಕ ಪ್ರಜ್ಞೆ ಎಂದು ಕರೆಯುವುದು. ಈ ರೀತಿಯ ಸಾಮಾಜಿಕ ಪ್ರಜ್ಞೆಯಿಂದ ಕೂಡಿದ ಕವಿ-ಕಲಾವಿದರು ಸಮಾಜ ವಿಮರ್ಶಕರೂ ಆಗಿ ಸಮಾಜ ಬದುಕನ್ನು ಕುರಿತು ಚಿಂತಿಸಿ ಸಮಾಜದ ಸರ್ವ ಅಂಗಗಳ ಆರೋಗ್ಯಕರ ಬದುಕಿಗಾಗಿ ಇದು ಸರಿ; ಇದು ತಪ್ಪು; ಹೀಗಿದ್ದರೆ ಒಳಿತು; ಹೀಗೆ ಮಾಡಿದರೆ ಕೆಟ್ಟದ್ದು ಎಂದು ಬಗೆದು ಕೆಲವು ವಿಧಿ ..ಷೇಧ

ಗಳನ್ನು, ರೀತಿ ನೀತಿಗಳನ್ನು ಸೂತ್ರಪ್ರಾಯವಾದ ರೀತಿಯಲ್ಲಿ ಸೃಷ್ಟಿಸುತ್ತಾರೆ. ಇವನ್ನೇ ನಾವು ಸಾಮಾಜಿಕ ಮೌಲ್ಯಗಳೆಂದು ಕರೆಯುವುದು. ಈ ಸಾಮಾಜಿಕ ಮೌಲ್ಯಗಳನ್ನು ತಾತ್ಕಾಲಿಕ ಮೌಲ್ಯಗಳು ಮತ್ತು ಸಾರ್ವಕಾಲಿಕ ಮೌಲ್ಯಗಳೆಂದು ಎರಡು ರೀತಿಯಲ್ಲಿ ಕರೆಯಬಹುದು. ಯಾಕೆಂದರೆ ಸಮಾಜದ ಬೇಕು ಬೇಡಿಕೆಗಳಿಗೆ, ಆಶೋತ್ತರಗಳಿಗೆ ತಕ್ಕನಾಗಿ ಪೂರ್ವದ ಒಪ್ಪಿತ ಕೆಲವು ಹಳೆಯ ಮೌಲ್ಯಗಳು ಅಪಮೌಲ್ಯವಾಗುವದು, ಮತ್ತೆ ಕೆಲವು ಹೊಸ ಮೌಲ್ಯಗಳು ಸೃಷ್ಟಿಗೊಂಡು ಚಲಾವಣೆ ಕಳೆದುಕೊಂಡ ಹಳಸಲು ಮೌಲ್ಯದ ಸ್ಥಾನದಲ್ಲಿ ತಳವೂರುವದು ಅತ್ಯಂತ ಸಹಜವಾಗಿದೆ.

ವಚನ ಸಾಹಿತ್ಯ ಮತ್ತು ದಾಸಸಾಹಿತ್ಯಗಳ ಮೂಲ ಉದ್ದೇಶ ಧರ್ಮಪ್ರಸಾರವೇ ಆಗಿದ್ದರೂ ಸಾಂದರ್ಭಿಕವಾಗಿ ಮತ್ತು ಸಹಜವಾಗಿ ಅಲ್ಲಿ ಪ್ರಕಟಗೊಂಡ ಸಾಮಾಜಿಕ ಪ್ರಜ್ಞೆ ಇಪ್ಪತ್ತನೇ ಶತಮಾನದ ನೈಜ ವಿಚಾರವಾದಿಯನ್ನು ಬೆರಗುಗೊಳಿಸುವಂಥದ್ದಾಗಿದೆ. ವಚನಕಾರರ ಆ ಧಾರ್ಮಿಕ ಮತ್ತು ಸಾಮಾಜಿಕ ಚಳವಳಿಯಲ್ಲಿ ಜಾತಿಭೇದ, ಲಿಂಗಭೇದಗಳಿಲ್ಲದೆ ಸಮಾಜದ ಎಲ್ಲ ವರ್ಗದ ಜನರೂ ಭಾಗವಹಿಸಿದ್ದರಿಂದ ಶಿವದಾಸರ ಆ ಚಳವಳಿಗೆ ತನ್ಮೂಲಕ ಪ್ರಕಟಗೊಂಡ ಆ ಸಾಹಿತ್ಯಕ್ಕೆ ಹೆಚ್ಚಿನ ಬೆಲೆ ಸಂದಾಯವಾಗುತ್ತದೆ. ಆದರೆ ಈ ಪ್ರಮಾಣದ ಬೆಲೆ ಸಾಮಾಜಿಕ ಪ್ರಜ್ಞಾಬದ್ಧತೆಯ ಸಾಹಿತ್ಯ ನಿರ್ಮಿತಿಯಲ್ಲಿ ಹರಿದಾಸ ಸಾಹಿತ್ಯಕ್ಕೆ ಒದಗಿಬರುವುದಿಲ್ಲ. ಯಾಕೆಂದರೆ ಹರಿದಾಸ ಸಾಹಿತ್ಯ ತುಂಬಿ ಹರಿಯುತ್ತಿರುವ ಕಾಲದಲ್ಲಿ (೧೬ನೇ ಶ.) ಕನಕನೊಬ್ಬನನ್ನು ಬಿಟ್ಟರೆ, ಬೇರೆ ಕೆಳವರ್ಗದ ಜನರು ಮತ್ತು ಸ್ತ್ರೀಯರು ಭಾಗವಹಿಸದೆ ಇರುವದು ದೊಡ್ಡ ಕೊರತೆಯಾಗಿ ಪರಿಣಮಿಸಿತು. ಹೀಗೆ 'ಕನಕನಕಿಂಡಿ'ಯು ಸಮಾಜ ವ್ಯವಸ್ಥೆಯಲ್ಲಿ ಕೆಳವರ್ಗದವರ ಪ್ರತಿಭೆ ಪಾಂಡಿತ್ಯಗಳಿಗೆ ಮತ್ತು ಬದುಕನ್ನು ಸೃಷ್ಟ್ಯಾತ್ಮಕವಾಗಿ ಸಹ್ಯಗೊಳಿಸುತ್ತ. ಬೆಳೆಸುತ್ತ ಆ ಮೂಲಕ ಬದುಕಿನಲ್ಲಿ ಪರಿಪೂರ್ಣತೆಯನ್ನು ತಂದುಕೊಡುವ ಸೃಷ್ಟಿಯ ಬಹುಮುಖ್ಯ ಶಕ್ತಿಯಾದ ಸ್ತ್ರೀಗೆ ಬೆಲೆ ಸಮಾನತೆಗಳು ದೊರಕದೇ ಹೋದದ್ದರಿಂದ ಹರಿದಾಸ ಸಾಹಿತ್ಯದಲ್ಲಿ ಪ್ರಕಟಗೊಳ್ಳುವ ಸಾಮಾಜಿಕ ಪ್ರಜ್ಞೆ ಮತ್ತು ಆ ಮೂಲಕವಾಗಿ ಸೃಷ್ಟಿಗೊಳ್ಳುವ ಸಾಮಾಜಿಕ ಮೌಲ್ಯಗಳಲ್ಲಿ 'ಕಿಂಡಿ' ಬಿಟ್ಟಿವೆ ಎಂದು ಸಾಹಿತ್ಯಾಭ್ಯಾಸಿಗಳಿಗೆ ಅನಿಸದೆ ಇರದು.

ಕೆಳವರ್ಗದಿಂದ ಬಂದ ಕನಕನು ಹರಿದಾಸ ಸಾಹಿತ್ಯದ ಒಬ್ಬ ದೊಡ್ಡ ಅನುಭಾವಿ ಮತ್ತು ಮುಕ್ತ ಚಿಂತಕ. ಆದ್ದರಿಂದಲೇ ಸಾಮಾಜಿಕ ಅಸಮಾನತೆಯನ್ನು ಪ್ರಾಮಾಣಿಕ ರೀತಿಯಲ್ಲಿ ಪ್ರತಿಭಟಿಸುವ ಗಟ್ಟಿ ದನಿಯೂ ಆಗಿದ್ದಾನೆ. ಆಗಿನ ಕಾಲದಲ್ಲಿ ಜಾತಿಮತಗಳ ಭೇದಭಾವವು ಅತೀ ಹೆಚ್ಚಾಗಿದ್ದು ಕನಕದಾಸರಂಥ ದೊಡ್ಡ ಅನುಭಾವಿಯನ್ನೂ ಕೃಷ್ಣಮಂದಿರದೊಳಗೆ ಪ್ರವೇಶಿಸಲು ಆಗಿನ ಕಾಲದ ಕರ್ಮಠ

ಬ್ರಾಹ್ಮಣರು ಬಿಡಲಿಲ್ಲವಂತೆ. ಮತ್ತು ದೇವಸ್ಥಾನದ ಕೃಷ್ಣನ ಆಭರಣಗಳು ಕಾಣದಾಗಲು ಕನಕದಾಸನೇ ಕದ್ದಿರುವನೆಂದು ಭ್ರಮಿಸಿ ಕನಕನನ್ನು ಕಟ್ಟಿಹಾಕಿ ಹೊಡೆದರಂತೆ. ಈ ಘಟನೆಗಳಿಂದ ಸ್ಪಷ್ಟವಾಗುವುದೇನೆಂದರೆ ಕನಕನಂಥ ದೊಡ್ಡ ಅನುಭಾವಿಯನ್ನೂ ಆಗಿನ ಕಾಲದ ಪಟ್ಟಭದ್ರ ಹಿತಾಸಕ್ತಿಗಳು ಸಾಮಾಜಿಕವಾಗಿ ಬಹಿಷ್ಕರಿಸಿದ್ದರೆಂಬುದು. ಆದ್ದರಿಂದಲೇ

ಕುಲಕುಲವೆನ್ನುತಿಹರೊ
ಕುಲವಾವುದು ಸತ್ಯ ಜನರಿಗೆ ?
ಕೆಸರೊಳು ತಾವರೆ ಪುಟ್ಟಲು ಅದ ತಂದು
ಕುಸುಮನಾಭನಿಗೆ ಅರ್ಪಿಸರೇನಯ್ಯಾ ?
ಪಶುವಿನ ಮಾಂಸದೊಳುತ್ಪತ್ತಿ ಕ್ಷೀರವ
ವಸುಧೆಯೊಳಗೆ ಭೂಸುರರುಣ್ಣರೇನಯ್ಯಾ ?

ಆತ್ಮನಾವ ಕುಲ ಜೀವನಾವ ಕುಲ
ತತ್ವೇಂದ್ರಿಯಗಳ ಕುಲ ಪೇಳಿರಯ್ಯ
ಆತ್ಮನು ಆದಿನೆಲೆಯಾದಿಕೇಶವನೊಲಿದ
ಭಕ್ತರಿಗೆ ಕುಲವಾವುದು ಹೇಳಿರಯ್ಯ ?

ಎಂದು ದೊಡ್ಡ ಕುಲದವರು ಮುಟ್ಟಿನೋಡಿಕೊಳ್ಳುವಂತೆ ವೈಜ್ಞಾನಿಕ ಸತ್ಯವನ್ನು ಬಹಿರಂಗ ಪಡಿಸಿ ಎಚ್ಚರಿಸುತ್ತಾರೆ. ಆದರೆ ಇಂದಿಗೂ ದಲಿತವರ್ಗದವರು, ಶೂದ್ರ ಜನಾಂಗದವರು ಅಸ್ಪೃಶ್ಯರಾಗಿ ಉಳಿದಿರುವುದು ಈ ದೇಶದ ಮೇಲುವರ್ಗದವರ "ಮಹಾನ್ ಉದಾರಿ ಮನೋಭಾವ"ವನ್ನು ತೋರಿಸುತ್ತದಲ್ಲದೆ, ಈ ದೇಶದ ದುರಂತ ಕಥೆಯನ್ನೂ ವ್ಯಂಜಿಸುತ್ತದೆ.

ತೀರ್ಥವನು ಪಿಡಿದವರೆಲ್ಲ ತಿರುನಾಮಧಾರಿಗಳೇ, ಜನ್ಮ
ಸಾರ್ಥಕ ವಿಲ್ಲದವರೆಲ್ಲ ಭಾಗವತರೇ
ಮೂಗ್ಗಿಡಿದು ನೀರೊಳಗೆ ಮುಳುಗಿ ಜಪತಪವ ಮಾಡಿ
ವೇದಶಾಸ್ತ್ರ ಪುರಾಣಗಳನೋದಿ ತಿಳಿದು
ಬಾಗಿ ಪರಸ್ತ್ರೀಯರಿಗೆ ಭ್ರಮಿಸಿ ಕಣ್ಣಿರುವಂಥ
ನೀತಿ ತಪ್ಪಿದವರೆಲ್ಲ ದೇವಬ್ರಾಹ್ಮಣರೆ ಕೃಷ್ಣ ॥೧॥

ಪಟ್ಟೆನಾಮವ ಬಳೆದು ಪಾತ್ರೆ ಕೈಯಲಿ ಪಿಡಿದು
ಗುಟ್ಟಿನಲಿ ರಹಸ್ಯವ ಗುರುತರಿಯದೆ
ಕೆಟ್ಟ ಕೂಗನು ಕೂಗಿ ಬೊಗಳಿ ಬಾಯಾರುವಂಥ
ಪೊಟ್ಟೆಗುಡ ಮೃಗಗಳೆಲ್ಲ ಶ್ರೀವೈಷ್ಣವರೆ ಕೃಷ್ಣ ॥೨॥

ಲಿಂಗಲಿಂಗವೊಳಗಿರುವ ಚಿನ್ಮಯನ ತಿಳಿಯದೆ
ಲಿಂಗಾಂಗದ ನೆಲೆಯ ಗುರುತರಿಯದೆ
ಜಂಗಮ ಸ್ಥಾವರದ ಭಾವವನು ತಿಳಿಯದ
ಭಂಗಿ ಮುಕ್ಕುಗಳೆಲ್ಲ ಲಿಂಗವಂತರಹರೆ ಕೃಷ್ಣ ॥೩॥

ಅಲ್ಲಾ ಖುದಾ ಎಂದು ಆತ್ಮದಲಿ ತಿಳಿಯದೆ
ಮುಲ್ಲಾ ಶಾಸ್ತ್ರದ ನೆಲೆಯ ಗುರುತರಿಯದೆ
ಜೊಳ್ಳು ಕೂಗನು ಕೂಗಿ ಬೊಗಳಿ ಬಾಯಾರುವಂಥ
ಕಳ್ಳ ತುರುಕರಿಗೆಲ್ಲ ವೀರಸ್ವರ್ಗವುಂಟೇ ಕೃಷ್ಣ ॥೪॥

ಹಾಸ್ಯಗಳನು ಕುಲಿತು ಘೋಷವಸ್ತ್ರಗಳಾಕಿ
ಆಸೆಗಳ ತೊರೆದೆವೆಂದು ತಪಸು ಕುಳಿತು
ವಾಸುದೇವಕೃಪಾಗುರುತರಿಯದಂಥ
ವೇಷಧಾರಿಗಳೆಲ್ಲ ಸನ್ಯಾಸಿಗಳಾಗಬಲ್ಲರೆ ಕೃಷ್ಣ ॥೫॥

ಮೇಲಿನ ಪದ್ಯದಲ್ಲಿ ಧರ್ಮಸಿದ್ಧಾಂತಗಳ ಮಾನವೀಯ ನೆಲೆಯನ್ನು, ಅನುಭಾವವನ್ನು, ಪ್ರೀತಿ-ಸೋದರಭಾವಗಳನ್ನು ಅರಿಯದೆ, ರೂಢಿಸಿಕೊಳ್ಳದೆ, ಕೇವಲ ಗೊಡ್ಡು ಸಂಪ್ರದಾಯಗಳನ್ನು, ಕಂದಾಚಾರಗಳನ್ನು, ಗಿಳಿಪಾಠದ ಶುಷ್ಕಪಾಂಡಿತ್ಯವನ್ನು, ಬಾಹ್ಯವೇಷಭೂಷಣದ ಡಂಭಾಚಾರವನ್ನು, ವಾಚಾಳಿತನವನ್ನು. ಅನೀತಿಯನ್ನು ಹೊಂದಿದ ವ್ಯಕ್ತಿಗಳು ತಾವು ಶ್ರೇಷ್ಠ ಕುಲದವರು, ಸಮಾಜಶ್ರೇಷ್ಠರು ಎಂದು ಜಂಬ ಕೊಚ್ಚಿಕೊಂಡು ಬಹುಸಂಖ್ಯಾತ ಪ್ರಾಮಾಣಿಕ ಜನವರ್ಗವನ್ನು ಕೀಳಾಗಿ ಕಂಡು, ಶೋಷಣೆ ಮಾಡುತ್ತಿದ್ದ ಅಮಾನವೀಯ ಕೆಟ್ಟಚಾಳಿಯನ್ನು ದುಷ್ಟತನವನ್ನು ಕನಕರು ಅತ್ಯಂತ ಮಾರ್ಮಿಕವಾಗಿ ಟೀಕಿಸಿದ್ದಾರೆ. ಇಡಿಯಾಗಿ ಈ ಪದ್ಯ ಆಗಿನ ಕಾಲದ ಸಾಮಾಜಿಕ ದುರ್ವ್ಯವಸ್ಥೆಗೆ ಹಿಡಿದ ಕನ್ನಡಿಯಾಗಿದೆ ಈ ರೀತಿಯ ಸಾಮಾಜಿಕ ಅಸಮಾನತೆ ಇಪ್ಪತ್ತನೇ ಶತಮಾನದ ಪ್ರಜಾರಾಜ್ಯದಲ್ಲೂ ಚಾಚೂ ತಪ್ಪದೆ ನಡೆದುಕೊಂಡು ಹೋಗುತ್ತಿರುವುದು ಪ್ರಜಾಪ್ರಭುತ್ವಕ್ಕೆ, ಜನತಾಂತ್ರಿಕ ವ್ಯವಸ್ಥೆಗೆ ಕಳಸವಿಟ್ಟಂತಿದೆ ಎಂದು ಭಾವಿಸಿ ತೃಪ್ತಿಪಡೋಣ.

[illegible] ಪದ್ಯದಲ್ಲಿ, ಸಮಾಜದ ಪ್ರತಿಷ್ಠಿತ ಜನರೆಂದು ಕರೆಯಿಸಿಕೊಳ್ಳುವವರು ವಿವಿಧ ವೇಷ ಧರಿಸಿ, ಸವಿ ಮಾತನಾಡಿ ಪ್ರತಿಷ್ಠಿತ ಕಾರ್ಯ ಕೆಲಸಗಳಲ್ಲಿ ತೊಡಗಿರುವುದು 'ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ' ಎಂದು ಹೇಳಿ ವಾಸ್ತವದ ಅರಿವನ್ನು ಮೂಡಿಸುತ್ತಾರೆ. ಅಷ್ಟೇ ಅಲ್ಲದೆ ಈಗಿನಂತೆಯೇ ಆಗಿನ ಕಾಲದಲ್ಲೂ ಬದುಕುತ್ತಿದ್ದ ಈ ರೀತಿಯ ಸನ್ಯಾಸಿ, ಸಂತ, ಫಕೀರ, ಅನುಭಾವಿ, ಮೇಧಾವಿ, ಕವಿ ಕೋವಿದರಲ್ಲಿ ಬಹಳಷ್ಟು ಜನ ತಮ್ಮ ವೃತ್ತಿಯ ನಿಯಮ, ನಿಷ್ಠೆ, ಗಾಂಭೀರ್ಯ, ಪಾವಿತ್ರ್ಯಗಳತ್ತ ಗಮನ ಹರಿಸುವವರಾಗಿರಲಿಲ್ಲವೆಂಬುದು ವೇದ್ಯವಾಗುತ್ತದೆ. ಪದ್ಯ ಹೀಗಿದೆ :

ಎಲ್ಲಾರು ಮಾಡುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ ತುತ್ತು ಹಿಟ್ಟಿಗಾಗಿ ॥ ಪ ॥

ವೇದಶಾಸ್ತ್ರ ಪಂಚಾಂಗ ಓದಿಕೊಂಡು ಪರರಿಗೆ
ಬೋಧನೆಯ ಮಾಡುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ ॥೧॥

ಚಂಡ ಭಟರಾಗಿ ನಡೆದು ಕತ್ತಿ ಢಾಲು ಕೈಲಿ ಹಿಡಿದು
ಖಂಡತುಂಡ ಮಾಡುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ ॥೨॥

ಅಂಗಡಿಗಳನ್ನೆ ಹೂಡಿ ವ್ಯಂಗ್ಯ ಮಾತುಗಳಾಡಿ
ಭಂಗಬಿದ್ದು ಗಳಿಸುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ ॥೩॥

ಬಲ್ಲದಂತೆ ಮಾತನಾಡಿ ಎಲ್ಲರನ್ನು ಮರಳುಮಾಡಿ
ಸುಳ್ಳು ಬೊಗಳಿ ತಿಂಬುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ ॥೪॥

ತಾಳ ದಂಡಿಗೆ ಶೃತಿ ಮೇಳ ತಂಬೂರಿಗೊಂಡು
ಸೂಳೆಯಂತೆ ಕುಣಿಯುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ ॥೭॥

ಸನ್ಯಾಸಿ ಜಂಗಮ ಜೋಗಿ ಜಟ್ಟಿ ಮೊಂಡ ಬೈರಾಗಿ
ನಾನಾ ವೇಷಗಳೆಲ್ಲ ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ ॥೮॥

ಅಂದಣ ಪಲ್ಲಕ್ಕಿ ಏರಿ ಮುಂದೆ ಮಾರ್ಬಲ ಕೂಡಿ
ಚೆಂದದಿಂದ ಮೆರೆಯುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ ॥೧೦॥

ವದಾಸ ಅಂಬಿಗರ ಚೌಡಯ್ಯನು ಆಗಿನ ಕಾಲದ ಧಾರ್ಮಿಕ ಮತ್ತು ಸಾಮಾಜಿಕ ಬೂಟಾಟಿಕೆಯನ್ನು ಅತ್ಯಂತ ತೀಕ್ಷ್ಣವಾಗಿ ಬಿಂಬಿಸಿರುವುದನ್ನು ಗಮನಿಸಿದಾಗ ಕನ

ಕರೂ ಚೌಡಯ್ಯನ ಗುಣಸ್ವಭಾವದವರು ಎಂದು ಅನಿಸದೇ ಇರದು. ಆದರೆ ಚೌಡಯ್ಯನ ಮಾತು ಕನಕನಿಗಿಂತಲೂ ತೀಕ್ಷ್ಣ. ಭಾಮಿನೀ ಷಟ್ಪದಿಯಲ್ಲಿ ರಚಿತವಾದ 'ರಾಮಧಾನ್ಯಚರಿತ್ರೆ' ಸೊಗಸಾದ ಅರ್ಥ–ಪೂರ್ಣವಾದ ಖಂಡಕಾವ್ಯವಾಗಿದ್ದು, ಕನಕರ ಸಾಮಾಜಿಕ ಪ್ರಜ್ಞೆಯನ್ನು ಎತ್ತಿ ಹಿಡಿಯುವಂಥದ್ದಾಗಿದೆ. ಶ್ರೀಮಂತರ, ದೊಡ್ಡವರ ಆಹಾರವಾದ ಅಕ್ಕಿ (ವ್ರೀಹಿ) ಗಿಂತಲೂ ಬಡವರ ಬಂಧುವಾದ 'ಶೂದ್ರಾನ್ನ' ವಾದ ರಾಗಿ (ನರೆದಲದ) ಯೇ ಹೆಚ್ಚು ಶ್ರೇಷ್ಠ ಎಂದು ಪ್ರತಿಪಾದಿಸಿ, ವರ್ಗಪ್ರಜ್ಞೆಯನ್ನೂ ಆಮೂಲಕವಾದ ಸಾಮಾಜಿಕ ಸಮಾನತೆಯನ್ನೂ ಎತ್ತಿ ಹಿಡಿಯುವಲ್ಲಿ ಯಶಸ್ವಿಯಾಗಿದ್ದಾರೆ.

ದಾಸರಲ್ಲಿ ಪ್ರಸಿದ್ಧ ಪಂಕ್ತಿಗೆ ಸೇರಿದ ವಾದಿರಾಜರ ಒಂದು ಪದ್ಯ ಕಷ್ಟಸಹಿಷ್ಣುತೆಯನ್ನು ಎತ್ತಿ ಹಿಡಿಯುವಂಥದ್ದಾಗಿದೆ. ಇಂದೂ ಕೂಡ ತಾಳ್ಮೆ ಇಲ್ಲವೆ ಸಹಿಷ್ಣುತೆ ಎಂಬ ಸಾಮಾಜಿಕ ಮೌಲ್ಯ, ಬದುಕನ್ನು ಸಹ್ಯಗೊಳಿಸುವಲ್ಲಿ, ಗಟ್ಟಿಗೊಳಿಸುವಲ್ಲಿ ಅತ್ಯಂತ ಪ್ರಮುಖ ಪಾತ್ರ ವಹಿಸುತ್ತದೆಂಬುದನ್ನು ಯಾರೂ ಮರೆಯುವಂಥದ್ದಲ್ಲ. ಪದ್ಯ ಹೀಗಿದೆ :

ತಾಳುವಿಕೆಗಿಂತ ತಪವು ಇಲ್ಲ
ಕೇಳಬಲ್ಲವರಿಗೆ ಹೇಳುವೆನು ಸೊಲ್ಲ

ದುಷ್ಟಮನುಜರು ಪೇಳ್ವ ನಿಷ್ಠುರದ ನುಡಿ ತಾಳು
ಕಷ್ಟಬಂದರೆ ತಾಳು ಕಂಗೆಡದೆ ತಾಳು
ನೆಟ್ಟಸಸಿ ಫಲ ಬರುವತನಕ ಶಾಂತಿಯು ತಾಳು
ಕಟ್ಟುಬುತ್ತಿಯು ಮುಂದೆ ಉಣಲುಂಟು ತಾಳು

ಹಳಿದು ಹಂಗಿಸುವಂಥ ಹಗೆಯು ಮಾತನು ತಾಳು
ಸುಳಿನುಡಿ ಕುಹಕ ಕುಮಂತ್ರವನು ತಾಳು
ಅಳುಕದಲೆ ಬಿರಿಸು ಬಿಂಕದ ನುಡಿಯು ತಾಸು
ಪಲಧರಾನುಜನನ್ನು ಹೃದಯದಲಿ ತಾಳು

ನಕ್ಕು ನುಡಿವರ ಮುಂದೆ ಮುಕ್ಕರಿಸದೆ ತಾಳು
ಅಕ್ಕಸವ ಮಾಡುವರ ಅಕ್ಕರದಿ ತಾಳು
ಉಕ್ಕೋ ಹಾಲಿಗೆ ನಿರನಿಕ್ಕುವಂದದಿ ತಾಳು
ಪಕ್ಷೀಶ ಹಯವದನ ಶರಣೆಂದು ಬಾಳು

ಮನುಷ್ಯನ ಆಶೆಗೆ ಕೊನೆ ಇಲ್ಲವಾದ್ದರಿಂದ ಆತ ಆಶಾಜಿಂಕೆಯ ಬೆನ್ನಟ್ಟಿ ಹೋಗದಿರುವುದು ಆತನ ಏಳಿಗೆಯ ದೃಷ್ಟಿಯಿಂದ ಉತ್ತಮವಾದದ್ದೆಂದು ವಿಜಯದಾಸರು ಅತ್ಯಂತ ಸೊಗಸಾಗಿ ಹೇಳುತ್ತಾರೆ. ನೋಡಿ,

ಸಪ್ಪಡಿ ಮೆಲುವಾಗ ಉಪ್ಪಿನ ಯೋಚನೆ
ಉಪ್ಪು ದೊರೆತಾಗ ಸೊಪ್ಪಿನ ಯೋಚನೆ
ಸೊಪ್ಪು ದೊರಕಿದಾಗ ತುಪ್ಪದ ಯೋಚನೆ
ತುಪ್ಪ ದೊರಕಿದಾಗ ಕುಪ್ಪೆಯ ಯೋಚನೆ
ಕುಪ್ಪೆ ದೊರೆತಾಗ ಕೊಪ್ಪರಿಗೆ ಯೋಚನೆ
ಕೊಪ್ಪರಿಗೆ ಉಂಟಾಗೆ ಸಪ್ತದ್ವೀಪದ ಚಿಂತೆ

ಮನುಷ್ಯನ ಆಸೆಗೆ ಒಂದು ಮಿತಿಯೂ ಇದ್ದರೆ ಆತನ ಬದುಕು ಸಹನೀಯವೂ, ಸಹ್ಯವೂ ಆಗುತ್ತದೆಂಬ ನೀತಿಯೂ ಇಲ್ಲಿದೆ.

ಮನುಷ್ಯನ ಮತ್ತು ತನ್ಮೂಲಕವಾದ ಸಮಾಜದ ಬೆಳವಣಿಗೆಗೆ ಅಹಂಕಾರ ದೊಡ್ಡ ಅಡ್ಡಿಯಾಗಿದ್ದು ಮಾನವ ಇಂಥ ಅನಿಷ್ಟಕಾರಕ ಕೆಟ್ಟ ಗುಣವನ್ನು ಬುಡಸಹಿತ ಕಿತ್ತೊಗೆದು ನಿಗರ್ವಿಯಾಗಿ ಬದುಕುವುದು ತುಂಬ ಸೂಕ್ತ ಎಂದು ವಿಜಯದಾಸರು ಮನಮುಟ್ಟುವಂತೆ ಹೇಳಿದ್ದಾರೆ. ನೋಡಿ,

ಅಹಂಕಾರವೆಂಬೊ ಪಾಪಿಯು ಬೆನ್ನುಬಿದ್ದರೆ
ಅಹಂಕಾರವಲ್ಲದೆ ಒಂದಿಷ್ಟು ಸುಖವಿಲ್ಲ
ಕಡಿಯಲು ಕೊನಿಯಿಂದ ಬುಡನಾಶವಿಲ್ಲ
ಬುಡ ಕೊಯ್ದರೆ ಕೊನೆ ಒಡನೆ ಒಣಗುವುದು
ದೃಢವಾದ ಅಹಂಕಾರ ಕಡಿವರೆ ಬಿಂಕವ
ಜಿಡಿಪಾಪಗಳೆಲ್ಲ ಅಡಗಿ ದೂರಾಗುವುವು

ಜಗನ್ನಾಥದಾಸರ ಸುಳಾದಿಗಳಲ್ಲಿ ಹಲವಾರು ಸುಳಾದಿಗಳು ಲೋಕದ ನೀತಿ, ಅನೀತಿ, ಹೊಗಳಿಕೆ, ತೆಗಳಿಕೆ, ದುರ್ವರ್ತನೆ, ಡಾಂಭಿಕತನ ಮುಂತಾದವುಗಳನ್ನು ಕುರಿತವುಗಳಾಗಿವೆ.

ಸುಳ್ಳಿಗಿಂತಧಿಕ ಮತ್ತಿಲ್ಲವೋ ಮಹಾ ಪಾಪ
ಸುಳ್ಳು ಕಳ್ಳತನವು ನಿನ್ನಲ್ಲಿ । ನಿನ್ನಲ್ಲಿ ಉಂಟಾಯಿ
ತೆಲ್ಲೊ ಜಾರತ್ವ ಇದರಂತೆ.

ಎಂದು, ಸುಳ್ಳು ಹೇಳುವುದು ದೊಡ್ಡ ಅಪರಾಧ ಮತ್ತು ಪಾಪ ಎಂಬ ಎಚ್ಚರಿಕೆಯನ್ನು ಕೊಡುವವರ ಜೊತೆಗೇ ಸತ್ಯ ನುಡಿಯುವುದು ಸಾಧು ಎಂಬ ಸೂಚನೆಯನ್ನೂ ಕೊಡುತ್ತಾರೆ. ಸತ್ಯ ಸಾರ್ವಕಾಲಿಕ ಮೌಲ್ಯವಾಗಿದ್ದರೂ ಆಗಿನ ಕಾಲದಲ್ಲಿ ಸುಳ್ಳು ಹೇಳಿ ಸತ್ಯಕ್ಕೆ ಅಪಚಾರ ಬಗೆದು ಸಮಾಜವನ್ನು ವಂಚಿಸುವಂಥ ಧೂರ್ತರು ಹೇರಳವಾಗಿದ್ದರೆಂಬುದು ಮೇಲಿನ ಸುವಾಲಿಯಿಂದ ವ್ಯಕ್ತವಾಗುತ್ತದೆ. ಈಗಲೂ ಅದೇ ಪರಂಪರೆಯೇ ಹೆಚ್ಚಿನ ಪ್ರಮಾಣದಲ್ಲಿ ಮುಂದುವರಿಯುತ್ತಿರುವುದು ಸಮಾಜದ ಅವನತಿಯ ಸಂಕೇತವಾಗಿದೆ. ಸಮಾಜದ ಒಂದು ಪ್ರತಿಷ್ಠಿತ ವರ್ಗ ತಾನು ಶ್ರೇಷ್ಠ, ತನ್ನ ರೀತಿ ನೀತಿ ಶ್ರೇಷ್ಠ, ಆಚಾರ ವಿಚಾರ ಶ್ರೇಷ್ಠ ಎಂದು ತನ್ನನ್ನು ತಾನು ದೊಡ್ಡವನೆಂದು ಭ್ರಮಿಸಿ ಇತರರನ್ನು ಕೀಳಾಗಿ ಕಾಣುವ ಕೆಟ್ಟ ಪ್ರವೃತ್ತಿಯನ್ನು ಜಗನ್ನಾಥ ದಾಸರು ಅತ್ಯಂತ ಖಾರವಾಗಿ ಖಂಡಿಸುತ್ತಾರೆ. ನೋಡಿ.

"ಮಡಿಮಡಿಯೆಂದು ಅಡಿಗಡಿಗ್ಹಾರುವೆ
ಮಡಿಯಲ್ಲೆ ಬಂತು ಬಿಕನಾಸಿ"
"ಓಡಿಹೋಗುವ ಮಡಿಯ ಮಾಡಿ ದಣಿಯಲು ಬೇಡ
ನೋಡು ಸರ್ವಜ್ಞ ಹರಿರೂಪ। ಹರಿರೂಪನೋಡಿ ಕೊಂ
ಡಾಡಿ ಸುಖಿಯಾಗೆ ಮನವುಬ್ಬಿ"

ಹೀಗೆ ಮಡಿಮಡಿಯೆಂದು ಹಾರಾಡುವ ಕರ್ಮಠರನ್ನು ತರಾಟೆಗೆ ತೆಗೆದುಕೊಂಡಿದ್ದಾರೆ.

ಬದುಕಿನ ಅನೇಕ ಸಂದರ್ಭಗಳಲ್ಲಿ ಮಾನವ ಸಂಬಂಧಗಳು ನೈಜ ಪ್ರೀತಿ, ಪ್ರೇಮ, ಸ್ನೇಹತ್ವಗಳ ನೆಲೆಗಟ್ಟಿನಲ್ಲಿ ಸ್ಥಾಪಿತವಾಗಿರದೆ ಕೇವಲ ಸ್ವಾರ್ಥಮೂಲದವುಗಳಾಗಿರುತ್ತವೆಂಬುವನ್ನು ಗೋಪಾಲದಾಸರು ಅರ್ಥಪೂರ್ಣವಾಗಿ ಹೇಳುತ್ತಾರೆ. ನೋಡಿ,

ಧನದಿಂದ ನೆಂಟರು ಕೆಲವರು ಎನಗಿನ್ನು
ತನುವಿನ ನೆಂಟರು ಕೆಲವರು ಎನಗಿನ್ನು
ಮಾನದಿಂದ ನೆಂಟರು ಕೆಲವರು ಎನಗಿನ್ನು
ದಿನದಿಂದ ನೆಂಟರು ಕೆಲವರು ಎನಗಿನ್ನು
ಗುಣದಿಂದ ನೆಂಟರು ಕೆಲವರು ಎನಗಿನ್ನು
ಇನಿತು ನೆಂಟರೊಳು ಎನಗೆ ಒಬ್ಬರ ಕಾಣೆ
ಅನುವಾಗಿ ಇದ್ದರೆ ಅಷ್ಟು ನಮ್ಮವರೆಲ್ಲ
ಅನುವು ತಪ್ಪಿದರಿನ್ನು ಆರು ನಮ್ಮವರಿಲ್ಲ

ದಾಸಸಾಹಿತ್ಯದಲ್ಲಿ ಅತೀ ಪ್ರಮುಖರಾದ ಪುರಂದರದಾಸರು ಸಮಾನತೆ, ಸತ್ಯ, ಸದಾಚಾರ, ಅನ್ನದಾನ, ವಿನಯ ಸಂಪನ್ನತೆ ಮುಂತಾದ ಮೌಲ್ಯಗಳನ್ನು ತಮ್ಮ ಕೀರ್ತನೆಗಳಲ್ಲಿ ಎತ್ತಿ ಹಿಡಿದಿದ್ದಾರೆ. ಅಷ್ಟೇ ಅಲ್ಲದೆ ಈ ವಿಷಯವಾಗಿ ಮಿಕ್ಕ ಎಲ್ಲ (ಕನಕದಾಸನೊಬ್ಬನನ್ನು ಬಿಟ್ಟು) ಹರಿದಾಸರಿಗಿಂತ ಎರಡು ಹೆಜ್ಜೆ ಮುಂದೆ ಇದ್ದಾರೆಂದು ಹೇಳಬೇಕು. ಆದರೆ ಸಮಾನತೆಯ ಮಾತು ಬಂದಾಗ ಅಲ್ಲಲ್ಲಿ ಕಾಣುವ ವಿರೋಧಾಭಾಸಗಳು ಕಣ್ಣಿಗೆ ಮಿಂಚಿನಂತೆ ಹೊಡೆಯುತ್ತವೆ.

ಚೋರನಾದರೂ ಚಂಡಾಲನಾದರೂ
ಬ್ರಹ್ಮಘ್ನ-ಪಿತೃಘಾತಕನಾದರೂ
ಅವನಾದರೂ ಮಧ್ಯಾಹ್ನಕಾಲಕೆ
ಅತಿಥಿಯಾಗಿ ಮನೆಗೆ ಬಂದರೆ
ತುತಿಸಿ ಅನ್ನವನಿಟ್ಟು ಸ್ವಾಮಿ
ಪುರಂದರವಿಠಲಗರ್ಪಿಸಬೇಕು ॥

ಈ ಹಾಡಿನಲ್ಲಿ, ಬಿಸಿಲುಹೊತ್ತಿನಲ್ಲಿ ಹಸಿದು ಬರುವ ವ್ಯಕ್ತಿ ಎಂಥವನೇ ಆಗಿದ್ದರೂ ಅವನಿಗೆ ಅನ್ನ ನೀಡಿ ಸಂತೃಪ್ತಿಪಡಿಸಬೇಕೆಂಬ ದಾನಗುಣವನ್ನು ಎತ್ತಿಹಿಡಿಯಲಾಗಿದೆ. ಆದರೆ ಈ ಅನ್ನದಾನದ ದುರ್ಲಾಭ ಪಡೆದು ಸೋಂಭೇರಿಗಳಾಗಿ ಇನ್ನೊಬ್ಬರ ಅನ್ನದ ಮೇಲೆಯೇ ಕಾಲ ತಳ್ಳುತ್ತಿದ್ದ ವರ್ಗವೊಂದು ಆಗ ಸೃಷ್ಟಿಗೊಂಡಿತ್ತು. ಅಷ್ಟೇ ಅಲ್ಲದೆ ಪರಿಶ್ರಮರಹಿತ ಊಟಕ್ಕಾಗಿ ಆ ವರ್ಗ ಜನಸಾಮಾನ್ಯರ ಅಜ್ಞಾನದ ದುರ್ಲಾಭ ಪಡೆದು ಅವರಿಂದ ಯಥೇಚ್ಛವಾಗಿ ಧನಧಾನ್ಯಗಳನ್ನು ಸಂಗ್ರಹಿಸುವ ಕೆಲಸದಲ್ಲಿಯೂ ನಿಪುಣವಾಗಿತ್ತು. ಆದ್ದರಿಂದಲೇ ಪುರಂದರರು

ಪರರನ್ನ ಉಂಡ ಬ್ರಾಹ್ಮಣರಿಗೆ
ಇರದು ಮಾಡಿದ ಶುಭಕರ್ಮ
ಎರಡು ಮೂರು ಭಾಗ ಅನ್ನವಿತ್ತವನಿಗಯ್ಯ
ಉಪರದಲಿ ಉಂಡ ಅನ್ನದೊಂದು ಭಾಗವುಳಿವುದು
ಪೊಡವಿಯಲ್ಲಿ ಪುರಂದರವಿಠಲನು ಬಲ್ಲ

ಎಂಬ ಎಚ್ಚರಿಕೆಯನ್ನು ಕೊಡುತ್ತಾರೆ. ಆದರೆ ಈ ಎಚ್ಚರಿಕೆಯನ್ನು ಇಂದಿಗೂ ಆ ವರ್ಗ ಗಮನಿಸದಿರುವುದು ವಿಷಾದನೀಯ ಸಂಗತಿ.

ಮಡಿ ಮಡಿ ಮಡಿಯೆಂದು ಮುಮ್ಮಾರು ಹಾರುತಿ।
ಮಡಿಯೆಲ್ಲಿ ಬಂದಿತೊ ಬಿಕನಾಶಿ ।ಪ।

ಮಡಿಯು ನೀನೆ—ಮೈಲಿಗೆ ನೀನೆ-
ಸುಡಲಿ ನಿನ್ನ ಮಡಿ ಬಿಕನಾಶಿ ।ಅ.ಪ।

ಎಲುವು, ಚರ್ಮ, ಮಲ, ಮೂತ್ರ ಗುಂಡಿಯಲಿ
ನಲಿಯುತ ನಿಂತೆಯೊ ಬಿಕನಾಶಿ।
ನೆಲೆಗೊಂಡ ನವದ್ವಾರದ ಹೊಲೆಯೊಳು
ಆಳಲುತ ನೀ ಬಿದ್ದೆ ಬಿಕನಾಶಿ ॥೧॥

ಹುಟ್ಟಲು ಸೂತಕ ಸಾಯಲು ಸೂತಕ
ನಟ್ಟ ನಡುವೆ ಬಂತೆ ಬಿಕನಾಶಿ
ಬಿಟ್ಟುಬಿಡದೆ ಕಾವೇರಿಯ ಮುಳುಗಲು
ಮುಟ್ಟು ಹೋಹುದೆ ಬಿಕನಾಶಿ ।೨।

ಚರ್ಮವ ತೊಳೆದರೆ ಕರ್ಮವು ಹೋಗುವುದೆ
ಮರ್ಮವ ತಿಳಿಯದೆ ಬಿಕನಾಶಿ
ಬೊಮ್ಮನಯ್ಯ ಪುರಂದರ ವಿಠಲನ ಪಾಡಿ
ನಿರ್ಮಲದಿ ಬಾಳೆಲೊ ಬಿಕನಾಶಿ ।೩।

ಈ ಹಾಡಿನಲ್ಲಿ ಪುರಂದರರು ಟೊಳ್ಳು ಮಡಿ–ಮೈಲಿಗೆ ಕಲ್ಪನೆಯನ್ನು ವಾಸ್ತವ ಸತ್ಯ ಮತ್ತು ಸಕಾರಣಗಳೊಂದಿಗೆ ಜರೆದಿದ್ದಾರೆ. ಇಷ್ಟೇ ಅಲ್ಲದೆ ಅಂತರಂಗದ ಪರಿಶುದ್ಧತೆಯೇ ನಿಜವಾದ ಮಡಿಯಾಗಿದ್ದು, ಬಾಹ್ಯದ ಶಾರೀರಿಕ ಮಡಿ ನಿಜವಾದ ಮಡಿಯೆಂದು ಭ್ರಮಿಸಿರುವವರನ್ನು ಕಟುನುಡಿಗಳಿಂದ ಎಚ್ಚರಿಸಿದ್ದಾರೆ. ಆಗಿನ ಕಾಲದಲ್ಲಿ (ಇಂದೂ ಕೂಡ) ಒಂದು ಮಡಿವಂತ ವರ್ಗ ತನ್ನ ಟೊಳ್ಳು ಮಡಿಮೈಲಿಗೆ ಕಲ್ಪನೆಯಿಂದ ಸಮಾಜದ ಬಹುಸಂಖ್ಯಾತರನ್ನು ಸಾಮಾಜಿಕ ಕೊಡುಕೊಳುವಿಕೆಯಿಂದ ಅತೀ ದೂರ ಇಟ್ಟಿತ್ತಾದ್ದರಿಂದ, ಈ ಕುರಿತಂತೆ ಇಷ್ಟು ಖಾರವಾಗಿ ನುಡಿಯಬೇಕಾಗಿ ಬಂದಿರಬೇಕು.

ಪುರಂದರರು ಸತ್ಯ ಎಂಬ ಮೌಲ್ಯಕ್ಕೆ ಹೆಚ್ಚಿನ ಪ್ರಾಧಾನ್ಯತೆಯನ್ನು ಕೊಟ್ಟದ್ದು ಅವರ ಎರಡುಮೂರು ಪದಗಳಲ್ಲಿ ಕಾಣಬಹುದಾಗಿದೆ. ಉದಾಹರಣೆಗಾಗಿ ಹಾಡೊಂದರ ಭಾಗವನ್ನು ನೋಡಿ

ಸತ್ಯವೇ ಸ್ನಾನ—ಜಪ—ನೇಮ-ಹೋಮ-ಅ-
ಸತ್ಯದಲಿ ನಡೆದು ಮಾಳ್ಪುದು ವ್ಯರ್ಥಕರ್ಮ

ಪುರಂದರರು ಸತ್ಯದಂತೆಯೇ ವಿನಯ ಸಂಪನ್ನತೆ, ಸಂಪತ್ತು ಅಧಿಕಾರಗಳ ಬಗೆಗಿನ

ನಿರ್ಲಿಪ್ತತೆ ಮುಂತಾದ ಮೌಲ್ಯಗಳು ಸಾಮಾಜಿಕ ಬದುಕನ್ನು ಹಸನುಗೊಳಿಸುವಲ್ಲಿ ವ್ಯಕ್ತಿ ರಕ್ತಗತಮಾಡಿಕೊಳ್ಳುವುದು ಅತ್ಯಂತ ಅವಶ್ಯಕ ಎಂದು ಹಲವಾರು ಹಾಡುಗಳಲ್ಲಿ ಹೇಳಿದ್ದಾರೆ.

ಕನಕದಾಸರಂತೆಯೇ ಪುರಂದರದಾಸರೂ ಸಾಮಾಜಿಕ ಅಸಮಾನತೆಯ ಬಗ್ಗೆ ಕೆಚ್ಚಿನಿಂದ ಹಾಡಿದ್ದಾರೆ.

ಹೊಲೆಯ ಬಂದನೆಂದು ಒಳಗೆ ದೇವರ ಮಾಡಿ
ಗಣಗಣಗಂಟೆ ಬಾರಿಸುವರಯ್ಯ
ತನುವಿನ ಕೋಪವು ಹೊಲೆಯಲ್ಲವೆ ?
ಪರಧನ ಪರಸತಿ ಹೊಲೆಯಲ್ಲವೆ ?
ಹೊರಗಿದ್ದ ಹೊಲೆಯನ ಒಳಗೆ ಬಚ್ಚಿಟ್ಟರೆ
ಇವಕೇನು ಮದ್ದೋ ಪುರಂದರ ವಿಠಲ॥

ಎಂದು ಮುಂತಾಗಿ ಸಮಾಜದ ಒಂದು ಕೆಳವರ್ಗವನ್ನು ಅವರ ವೃತ್ತಿಯ ಆಧಾರದ ಮೇಲೆ ಹೊಲೆಯರೆಂದು ಕರೆದು ಆ ಜನ ವರ್ಗವನ್ನು ಸಮಾಜದಿಂದ ದೂರವಿಟ್ಟಿದ್ದನ್ನು ಖಂಡಿಸುತ್ತಾರಲ್ಲದೆ. ಮಾನವನ ಅಂತರಂಗದಲ್ಲಿ ಹುದುಗಿದ ನೀಚತನ, ಕ್ರೋಧ, ಮಾತ್ಸರ್ಯ, ಸಣ್ಣತನ, ದೌರ್ಜನ್ಯ ಮುಂತಾದ ಅವಗುಣಗಳೇ ಹೊಲೆ ಎಂದು ಸತ್ಯ ನುಡಿಯುತ್ತಾರೆ. ಈ ರೀತಿಯಾಗಿ ಹೊಲೆತನವನ್ನು ಕುಲವನ್ನು ಕುರಿತು ಮೂರು-ನಾಲ್ಕು ಪದಗಳಲ್ಲಿ ಚರ್ಚಿಸುತ್ತಾರೆ. ಆದರೆ ಬೇರೆ ಬೇರೆ ವಿಷಯಗಳನ್ನು ಕುರಿತು ಮಾತನಾಡುವಾಗ. ಪ್ರಾಸಂಗಿಕವಾಗಿ ಹೊಲೆಯರನ್ನು, ಮಾದಿಗರನ್ನು ಹೀನಜಾತಿಯವರನ್ನು ಬಗೆಯುವ ರೀತಿಯನ್ನು ನೋಡಿದರೆ ಪುರಂದರರಿಗೆ ದಲಿತ ವರ್ಗಗಳ ಮೇಲೆ ಅನುಕಂಪ ಇರಲಿಲ್ಲವೆಂದು ಸಹಜವಾಗಿಯೇ ಹೇಳಬೇಕಾಗುತ್ತದಲ್ಲದೆ, ಈ ಹಿಂದೆ ನೋಡಿದಂತೆ ಅವರು ಪ್ರತಿಪಾದಿಸುವ ಸಾಮಾಜಿಕ ಸಮಾನತಾ ಮೌಲ್ಯ ಗಟ್ಟಿ ನೆಲಗಟ್ಟಿನ ಮೇಲೆ ನಿಂತದ್ದಲ್ಲ ಎಂದೂ ಅನಿಸುತ್ತದೆ. ಉದಾಹರಣೆಗೆ ಸಮಾನತಾ ಮೌಲ್ಯವನ್ನು ಕಡೆಗಣಿಸುವ ಪುರಂದರರ ಈ ಮಾತುಗಳನ್ನು ನೋಡಿ.

೧) ಹೊಲೆಯರೊಳು ಪದುಮಿನಿ ಹೆಣ್ಣು ಹುಟ್ಟಿದರೇನು[೧]
೨) ಹೀನಕುಲದವನಿಗೆ ಹಿರಿತನ ಬಂದರೇನು
ಶ್ವಾನನ ಮೊಲೆಯೊಳು ಹಾಲಿದ್ದರೇನು ?[೨]
೩) ಮಾದಿಗರ ಮನೆಯಲಿ ಮದುವೆ ಆದರೇನು ?[೩]
೪) ಹೀನ ಬಲ್ಲನೆ ತನಗೆ ಉಪಕಾರ ಮಾಡಿದುದ ?[೪]

೧) ಲೋಕನೀತಿ—ಪುರಂದರದಾಸರ ಸಾಹಿತ್ಯ, ೫ ಸಂ. ಶ್ರೀ ಬೆಟಗೇರಿ ಕೃಷ್ಣಶರ್ಮ, ಶ್ರೀ ಬೆಂಗೇರಿ ಹುಚ್ಚುರಾಯ, ಪುಟ ೧೦೯
೨) ಅದೇ. ಪು. ೧೧೪
೩) ಅದೇ. ಪು. ೧೧೫. ಇದೇ ಮಾತು ೧೨೪ನೇ ಪುಟದಲ್ಲೂ ಪುನರಾವೃತ್ತಿ ಆಗುತ್ತದೆ.
೪) ಅದೇ. ಪು. ೧೧೧

ಇಲ್ಲಿ ಉಕ್ತವಾಗಿರುವ ಕೊನೆಯ ಮಾತಿಗೆ ನಾವು ಅಷ್ಟು ಬೆಲೆ ಕೊಡಬೇಕಿಲ್ಲವಾದರೂ ಮೊದಲ ಮೂರು ಉಕ್ತಿಗಳು ಪುರಂದರರು ಪ್ರತಿಪಾದಿಸುವ ಸಮಾನತಾ ಮೌಲ್ಯವನ್ನು ಆ ಮೂಲಕವಾದ ಸಾಮಾಜಿಕ ಕಾಳಜಿಯನ್ನು ಅಲುಗಿಸಿಬಿಡುತ್ತವೆ. ಹೀಗೆ ಪುರಂದರರ ಸಾಮಾಜಿಕ ಎಚ್ಚರ ಮತ್ತು ಕಳಕಳಿ ಹಾಗೂ ಸಮಾನತೆಯ ಬಗೆಗಿನ ಅವರ ಧೋರಣೆ ಖಚಿತವಾದವುಗಳಲ್ಲ ಎಂದೆನಿಸುತ್ತದೆ.

ಪುರಂದರರು ತಮ್ಮ ಅನೇಕ ಸಾಮಾಜಿಕ ಹಾಡುಗಳಲ್ಲಿ ದುಷ್ಟ ಸಹವಾಸದ ದೋಷವನ್ನೂ ಸತ್ಸಂಗದ ಲಾಭವನ್ನೂ ಹೇಳುತ್ತಾರಲ್ಲದೇ ಮಾನಹಾನಿಯಂಥ ಮಹಾಪಾಪ ಮತ್ತೊಂದಿಲ್ಲವೆಂದು ಎಚ್ಚರಿಕೆಯ ಮಾತನ್ನು ನುಡಿಯುತ್ತಾರೆ. ಆದರೆ ಪುರಂದರರು ಹೆಣ್ಣಿನ ಬಗೆಗೆ ತಾಳಿರುವ ಧೋರಣೆಯನ್ನು ನೋಡಿದರೆ ವಿಸ್ಮಯವಾಗುತ್ತದೆ. ಉದಾಹರಣೆಗೆ ಕೆಳಗಿನ ಪದ್ಯಗಳನ್ನು ನೋಡಿ :

೧) ಹೆಣ್ಣು ನಿಚ್ಚಿಸುವರೆ ಮೂಢ- ಇವನು
ಕಣ್ಣು-ಮೈ-ಮನಗಳಿಂ ಸೋಂಕಲು ಬೇಡ
ತಾಯಾಗಿ ಮೊದಲು ಪಡೆದಿಹುದು-ಮತ್ತೆ
ಜಾಯೆಯೆಂದೆನಿಸಿ ಕಾಮದಿ ಕೆಡಹುವುದು
ಕಾಯದಿ ಜನಿಸುತ ಬಹುದು—ಇಂತು
ಮಾಯೆಯು ನಿನ್ನ ಬಹುವಿಧದಿ ಕಾಡುವುದು

ಹಿತಶತ್ರುವಾಗಿ ಹೊಂದುವುದು—ನಿಮಿಷ
ರತಿಗೊಟ್ಟು ನಿತ್ಯಮುಕ್ತಿಯ ಸೆಳೆಯುವುದು
ಕ್ಷಿತಿಯ ಪೂಜ್ಯತೆ ಕೆಡಿಸುವುದು — ಮುಂದೆ
ಶತಜನ್ಮಗಳಿಗೆ ಹೊಣೆಯಾಗಿ ನಿಲ್ಲುವುದು

ಬಗೆಯಿದು ತನುವೆಲುವು ನರ-ಖಂಡ-ಅವರೊ-
ಳಗೆ ವಾಯುರಂಧ್ರ ಕಿಸುಕುಳದ ಉದ್ದಂಡ
ಭಗವೆಂಬುದು ಮೂತ್ರದ ಭಾಂಡ-ಅದ
ನೊಗಡಿಸದೆ ನಿಜಸುಖವಿಲ್ಲ ಕಂಡೆಯ

೨) ಕಣ್ಣೆತ್ತಿ ನೋಡಲು ಬೇಡ — ಅವಳ
ಸಣ್ಣ ಬೈತಲೆ ಕಂಡು ಮರುಳಾಗಬೇಡ
ದೂರದಲ್ಲಿಯೆ ಸುಖವಣ್ಣ-ಅವಳ
ಚಾರು ಕಂಚುಕದೊಳಗಿನ ಕುಚವಣ್ಣ
ಸೀರೆಯ ಬಿಗಿದುಟ್ಟ ಹೆಣ್ಣ —ಅವಳ
ಓರೆನೋಟ ನೋಡಿ ಹಾರಬೇಡಣ್ಣ

೩) ನಂಬಬೇಡ ನಾರಿಯರನು
ಹಂಬಲಿಸಿ ಹಾರಯಿಸಬೇಡ
ಅಂಬುಜಾಕ್ಷಿಯರೊಲುಮೆ ಬಯಲು
ಡಂಬಕವೆಂದು ತಿಳಿಯಿರೊ

ನೋಟವೆಲ್ಲ ಪುಸಿಯು–ಸತಿಯು
ರಾಟವೆಲ್ಲ ಸಂಚು–ಸನ್ನೆ
ಕೂಟವೆಲ್ಲ ಗನ್ನ-ಘಾತಕ
ನೋಟವೆಲ್ಲ ವಂಚನೆ

ಪಾಟಬದ್ಧ ಹೆಂಗಳಲ್ಲಿ
ಕೋಟಲೆಗೊಂಡು ತಿರುಗಬೇಡ
ಮಾಟಗಾತಿಯರೊಲಂಮೆ ಬಯಲು
ಬೂಟಕವೆಂದು ತಿಳಿಯಿರೊ

ಸೋತೆನೆಂದು ವಿಟಗೆ ದೈನ್ಯ
ಮಾತನಾಡಿ ಮರುಳುಗೊಳಿಸಿ
ಕಾತರವ ಹುಟ್ಟಿಸಿ ಅವನ
ಮಾತೆ–ಪಿತರ ತೊಲಗಿಸಿ

ಪ್ರೀತಿ ಬಡಿಸಿ ಹಣವ ಸೆಳೆದು
ರೀತಿಗೆಡಿಸಿ ಕಡೆಯುಲವನ
ಕೋತಿಯಂತೆ ಮಾಡಿಬಿಡುವ
ಜಾತಿಕಾರ್ತಿ ಹೆಂಗಳೆಯರ

ಹೀಗೆ ಇವನ್ನೂ ಸೇರಿಸಿಕೊಂಡು ಒಟ್ಟು ಎಂಟು ಪದ್ಯಗಳಲ್ಲಿ ಹೆಣ್ಣಿನ ರೂಪ, ಯೌವನ, ಪ್ರೀತಿ, ವಾತ್ಸಲ್ಯ, ಮಮತೆ ಹಾಗೂ ಇಡಿಯಾಗಿ ಅವಳ ಅಸ್ತಿತ್ವವನ್ನೇ ನಿರಾಕರಿಸಿದ್ದಾರೆ, ದೂರೀಕರಿಸಿದ್ದಾರೆ. ಅಲ್ಲದೆ ಮನುಷ್ಯನ ಅಂದರೆ ಪುರುಷನ ಆಧ್ಯಾತ್ಮಿಕ ಸಾಧನೆಗೆ ಹೆಣ್ಣು ದೊಡ್ಡ ಅಡ್ಡಿಯೆಂದು ಬಗೆದು ಅವಳನ್ನು ಮಾಯೆ ಯೆಂದು ಕರೆಯಲಾಗಿದೆ. ಈ ರೀತಿಯ ಹೆಣ್ಣಿನ ಅಸ್ತಿತ್ವದ ಬಗೆಗಿನ ಅಸಡ್ಡೆ ವಚನ ಕಾರರಲ್ಲಿ ಕಾಣುವುದಿಲ್ಲ. ಬದಲಾಗಿ ಸ್ತ್ರೀ ಸ್ವಾತಂತ್ರ್ಯಕ್ಕಾಗಿ ಆಗಿನ ಕಾಲದ ಶಿವ ಶರಣರು ಹೋರಾಟವನ್ನು ಪ್ರಾಮಾಣಿಕವಾಗಿ ನಡಸಿದ್ದರ ಫಲವಾಗಿಯೇ ಅಕ್ಕ ಮಹಾದೇವಿ, ಮುಕ್ತಾಯಕ್ಕ, ಗಂಗಾಂಬಿಕೆ, ನೀಲಾಂಬಿಕೆ, ಅಕ್ಕನಾಗಮ್ಮ, ಮೋಳಿ ಗೆಯ ಮಹಾದೇವಮ್ಮ, ಗೊಗ್ಗವ್ವೆ, ಅಮುಗೆ ರಾಯಮ್ಮ, ಸೂಳೆ ಸಂಕಮ್ಮ,

ಲಿಂಗಮ್ಮ, ಕಾಳವ್ವೆ ಮುಂತಾದ ಸ್ತ್ರೀಯರು ಅಂದಿನ ಧಾರ್ಮಿಕ, ಸಾಮಾಜಿಕ ಮತ್ತು ಸಾಹಿತ್ಯಿಕ ಚಳವಳಿಯಲ್ಲಿ ಭಾಗವಹಿಸಲು ಸಾಧ್ಯವಾಯಿತು. ವಚನಕಾರರನ್ನು ಬಿಟ್ಟರೆ ನಮ್ಮ ಭಾರತೀಯ ವೇದಾಂತಿಗಳು, ತತ್ತ್ವವೇತ್ತರು, ಅನುಭಾವಿಗಳು ಪುರುಷನ ಮುಕ್ತಿ ಸಾಧನೆಯ ಮಾರ್ಗದಲ್ಲಿ ಹೆಣ್ಣು ದೊಡ್ಡ ಅಡತಡೆಯೆಂದೇ ಮಾಯೆಯೆಂದೇ ಬಗೆದಿರುವುದು ಸ್ಪಷ್ಟವಾಗಿದೆ. ಆದರೆ 'ಈಸಬೇಕು ಇದ್ದು ಜೈಸಬೇಕು' ಎಂದು ಸಂಸಾರದ ಅಗತ್ಯ ಮತ್ತು ಮಹತ್ವವನ್ನು ಸಾರುವ ಪುರಂದರದಾಸರಂಥವರು ಮತ್ತು ಆ ಪಂಥದವರು ಹೆಣ್ಣನ್ನು ಮಾಯೆಯೆಂದು ಬಗೆದಿರುವುದು ಆಶ್ಚರ್ಯವಾಗುತ್ತದೆ. ಯಾಕೆಂದರೆ ಪುರಂದರರು ಹಣದ ಮೇಲಿನ ದುರಾಶೆಯನ್ನು ಬಿಟ್ಟು ಹರಿದಾಸರಾಗಲು ಅವರ ಪತ್ನಿಯ ಉದಾರಗುಣವೇ ಮುಖ್ಯವೆಂಬುದನ್ನು ಗೌಣವಾಗಿ ಕಾಣುವಂತಿಲ್ಲ. ಅಷ್ಟೇ ಅಲ್ಲದೆ ದಾಸರಂಥವರು ಅನುಭಾವಿಗಳೂ ಮುಕ್ತಚಿಂತಕರೂ ಆಗಿರುವ ಸಾಧ್ಯತೆ ಇರುವುದರಿಂದ ಸೃಷ್ಟಿಯ ಬಹುಮುಖ್ಯ ಶಕ್ತಿಯಾದ, ಮಾನವ ಕುಲದ ಜೀವಸೆಲೆ, ನೆಲೆಯಾದ ಹೆಣ್ಣಿನ ಅವಶ್ಯಕತೆಯನ್ನು ಕಂಡುಕೊಳ್ಳುವ ಸಾಧ್ಯತೆ ಇತ್ತು. ಆದರೆ ದಾಸರು ಹೆಣ್ಣನ್ನು ಮತ್ತು ಅವಳ ಅಸ್ತಿತ್ವವನ್ನು ಸಣ್ಣದಾಗಿ ಕಂಡಿರುವುದು. ದಾಸರ ಜ್ಞಾನದ ಮಿತಿಯನ್ನು ಸಂಕೇತಿಸುತ್ತದೆ. ಹೆಣ್ಣು ಇಲ್ಲದಿದ್ದರೆ ಮಾನವ ಸಮಾಜವೇ ಇರಲು ಸಾಧ್ಯವಿಲ್ಲವೆಂಬ ತೀರಾ ಸಾಮಾನ್ಯ ಸಂಗತಿ ದಾಸರಿಗೆ ತಿಳಿಯದೇ ಹೋದದ್ದು ವಿಷಾದನೀಯ ಸಂಗತಿಯಾಗಿದೆ. ಆಗಿನ ಕಾಲದಲ್ಲಿ ಅಂದರೆ ವಿಜಯನಗರ ಸಾಮ್ರಾಜ್ಯದ ಏರಿಕೆಯ ಕಾಲದಲ್ಲಿ ವೇಶ್ಯಾವೃತ್ತಿ, ಸತಿ ಸಹಗಮನ ಪದ್ಧತಿ, ಬಾಲ್ಯವಿವಾಹ, ಬಹುಪತ್ನಿತ್ವ ಮುಂತಾದ ಅನಿಷ್ಟ ಪದ್ಧತಿಗಳು ರೂಢಿಯಲ್ಲಿ ಇದ್ದವೆಂದು ಚರಿತ್ರೆ ನಮಗೆ ತಿಳಿಸುತ್ತದೆ.[೫] ಆಗಿನ ಕಾಲದ ಇಂಥ ಅನಿಷ್ಟ ಪದ್ಧತಿಗಳನ್ನು ಹೋಗಲಾಡಿಸುತ ದಾಸರು ತಮ್ಮ ಕೃತಿಗಳ ಮೂಲಕ ಹೋರಾಡಬಹುದಾಗಿತ್ತು. ಆದರೆ ಅವರ ಚಿಂತನೆ ಮಂಥನೆಗಳು ಈ ವಿಷಯಗಳತ್ತ ಹರಿದಿಲ್ಲ. ಹೆಣ್ಣನ್ನು ಕೇವಲ ಕಾಮದ ಪಿಂಡವಾಗಿ ಕಂಡು ಅವಳನ್ನು ಶೋಷಣೆ ಮಾಡುವಂಥ, ವೇಶ್ಯಾಪದ್ಧತಿಯನ್ನು ಒಪ್ಪಿದಂಥ ಯಾವುದೇ ಸಂಸ್ಕೃತಿ, ಉಚ್ಚ ಸಂಸ್ಕೃತಿ ಆಗಲಿಕ್ಕೆ ಸಾಧ್ಯವಿಲ್ಲ. ಯಾವ ಸಮಾಜದಲ್ಲಿ ಹೆಣ್ಣಿಗೆ ಸಮಾನತೆ ಮತ್ತು ಗೌರವಗಳು ಸಂದಾಯವಾಗುವುದಿಲ್ಲವೋ ಅಂಥ ಸಮಾಜ ತನ್ನ ರೋಗಗ್ರಸ್ತ-ಸ್ಥಿತಿಯಿಂದ ಸುಧಾರಿಸಿಕೊಳ್ಳಲು ಸಾಧ್ಯವಾಗದೆ ಅದು ಅವನತಿಯನ್ನು ಕಂಡುಕೊಳ್ಳಬೇಕಾಗುತ್ತದೆ.

---

೫. ಕರ್ನಾಟಕದ ಪರಂಪರೆ—ಸಂಪುಟ ೨, ೧೯೭೦, ಪುಟ ೪೩

ಪ್ರಕಟವಾಗಲಿದೆ

ಚಂದ್ರಶೇಖರ ಪಾಟೀಲರ

ಕಾಲು ಶತಕದ ಕಾವ್ಯ

೧೯೬೦–೧೯೮೫

ಚಂಪಾ ಅವರ ಬಾನುಲಿ (೧೯೬೦), ಮಧ್ಯಬಿಂದು (೧೯೬೪), ಹತ್ತೊಂಬತ್ತು ಕವನಗಳು (೧೯೬೭), ಗಾಂಧೀಸ್ಮರಣೆ ೧೯೭೬, ಓ ಎನ್ನ ದೇಶಬಾಂಧವರೇ (೧೯೭೭), ಹೂವು ಹೆಣ್ಣು ತಾರೆ (೧೯೮೩)—ಸಂಕಲನಗಳ ಎಲ್ಲ ಕವನಗಳ ಮತ್ತು ಅನೇಕ ಅಪ್ರಕಟಿತ ಕವನಗಳ ಸಮಗ್ರ ಸಂಕಲನ.

ಅಂದಾಜು ೫೨೦ ಪುಟಗಳು : ಬೆಲೆ : ರೂ. ೪೫–೦೦

(ಪ್ರಕಟಣ ಪೂರ್ಣ ಬೆಲೆ : ರೂ. ೩೦–೦೦)

ಸಂಕ್ರಮಣ ಪ್ರಕಾಶನ, ಧಾರವಾಡ ೫೮೦೦೦೮

ಡಾ| ಪೋಲಂಕಿ ರಾಮಮೂರ್ತಿ

ಅವರ ಇಂಗ್ಲೀಷ ಕವನ ಸಂಕಲನ

RANGOLI

೭೦ ಪುಟ : ಬೆಲೆ ೨೦ ರೂ.

ಆರ್ಕೆ

ಅವರ ಹೊಸ ಕವನ ಸಂಕಲನ

ಅಂಬೇಡ್ಕರ್ ಮತ್ತು ನನ್ನೂರ ಕೊರಗನ ಆನೆಕಾಲು

ಬೆಲೆ : ರೂ. ೧೦.. (ರಿಯಾಯ್ತಿ ಬೆಲೆ : ರೂ. ೬)

ಸಂಕ್ರಮಣ ಪ್ರಕಾಶನ, ಧಾರವಾಡ ೫೮೦೦೦೮

ಸಂಕ್ರಮಣ/೧೬೭–೧೬೮

ಕನ್ನಡ ಜನತೆಗೊಂದು ಹೊಸ ವರುಷದ ಕಾಣಿಕೆ!

ನಾಡಿನ ತುಂಬೆಲ್ಲ ಉತ್ಸಾಹದ ಸ್ವಾಗತ ಪಡೆಯುತ್ತಿರುವ

ಸಂಕ್ರಮಣ

ನಮ್ಮ ನಿಮ್ಮ ವಾರಪತ್ರಿಕೆ

ಗೌರವ ಸಂಪಾದಕ : **ಚಂದ್ರಶೇಖರ ಪಾಟೀಲ**

ಡೆಮಿ ೧/೪ (ಸುಧಾ, ತರಂಗ ಸೈಜು) : ಆಫ್‌ಸೆಟ್ ಮುದ್ರಣ
ಬಣ್ಣ ಬಣ್ಣ ಕವರು

೫೨ ಪುಟಗಳು : ಬಿಡಿ ಸಂಚಿಕೆ; ಎರಡು ರೂ.

- ನಾಡಿನ ಹೆಸರಾಂತ ಬರಹಗಾರರಿಂದ ಆಕರ್ಷಕ ಅಂಕಣಗಳು
- ರಾಷ್ಟ್ರೀಯ, ಅಂತಾರಾಷ್ಟ್ರೀಯ ವಿದ್ಯಮಾನಗಳ ಮಾಹಿತಿ.
- ಮುಖ್ಯವಾಗಿ ಕರ್ನಾಟಕದ ಸಾಮಾಜಿಕ, ರಾಜಕೀಯ, ಆರ್ಥಿಕ, ಸಾಂಸ್ಕೃತಿಕ ಆಯಾಮುಗಳಿಗೆ ಒತ್ತು.
- ನಿಮ್ಮ ಮತಕ್ಷೇತ್ರದ ರಾಜಕೀಯ, ಸಾಮಾಜಿಕ, ಭೌಗೋಲಿಕ ಪರಿಚಯ.
- ನಿಮ್ಮ ಶಾಸಕರ ಸಂಪೂರ್ಣ ಇತಿಹಾಸ.
- ಕನ್ನಡ ನಾಡಿನ ಗ್ರಾಮಾಂತರ ಬದುಕಿನ ಜೀವಂತ ಚಿತ್ರಣ.
- ನಾಡಿನ ಎಲ್ಲ ಪ್ರತಿಭೆಗಳಿಗೆ ಮುಕ್ತ ಅವಕಾಶ.
- ನಿಮ್ಮ ಕುಟುಂಬದ ಎಲ್ಲರಿಗಾಗಿ ಈ ನಮ್ಮ ನಿಮ್ಮ ವಾರಪತ್ರಿಕೆ.

ಮುಂಗಡ ಚಂದಾ : ರೂ. ೧೦೦/— ಆಜೀವ ಚಂದಾ : ರೂ. ೧೦೦೦/—

ಮುಂಗಡ ಚಂದಾ ರೂ. ೧೦೦/— ಕಳಿಸುವ ಸ್ನೇಹಿತರಿಗೆ ಪತ್ರಿಕೆಯು ಪ್ರಕಟನೆ ಪ್ರಾರಂಭವಾದಂದಿನಿಂದ **ಅರವತ್ತು** ವಾರಗಳ ವರೆಗೆ **ಸಂಕ್ರಮಣ**ವನ್ನು ಸ್ಥಳೀಯ ಏಜಂಟರ ಮೂಲಕ ಅಥವಾ ನೇರವಾಗಿ ಅಂಚೆಯಿಂದ ಕಳಿಸಲಾಗುವುದು.

ಸಂಪರ್ಕ ವಿಳಾಸ :

ಸಂಕ್ರಮಣ ವಾರಪತ್ರಿಕೆ, ಧಾರವಾಡ ೫೮೦೦೦೮

☎ ೮೦೫೦೯